


ಸಂಪುಟ 21 ಸಂಚಿಕೆ 10 ಮಾರ್ಚ್ 2-8, 1998 ರೂ.2.00

ಬಿಜೆಪಿಯ ನೈತಿಕ ಅಧಃಪತನಕ್ಕೆ ಅಂತ್ಯವೇ ಇಲ್ಲವೇ?

ಬಿಜೆಪಿ ಆಳ್ವಿಕೆಯಲ್ಲಿ ಉತ್ತರ ಪ್ರದೇಶ ಅಸಂಬದ್ಧ ನಾಟಕದ ರಂಗವಾಗಿಬಿಟ್ಟಿದೆ. "ಇತಿಹಾಸದ ಪುನರಾವರ್ತನೆಯಾಗುತ್ತದೆ-ಮೊದಲ ಭಾರಿ ದುರಂತವಾಗಿ, ಎರಡನೆ ಬಾರಿಗೆ ಒಂದು ಪ್ರಹಸನವಾಗಿ ಎಂಬ ಮಾರ್ಕ್ಸ್ ರವರ ಹಳೆಯ ಮಾತು ಉತ್ತರ ಪ್ರದೇಶದಲ್ಲಿ ಮತ್ತೊಮ್ಮೆ ನಿಜವಾಗಿದೆ" ಎಂದು ಇತ್ತೀಚೀನ ಉತ್ತರ ಪ್ರದೇಶದ ಪ್ರಹಸನದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪಿಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಹೇಳಿದೆ.

ಐದು ತಿಂಗಳ ಹಿಂದೆ ಕಾಂಗ್ರೆಸ್ ನಿಂದ, ಬಿಎಸ್‌ಪಿಯಿಂದ, ಜನತಾ ದಳದಿಂದ ಮಂತ್ರಿಪದವಿಯ ಆಮಿಷದಿಂದ ಪಕ್ಷಾಂತರ ಮಾಡಿ ಕಲ್ಯಾಣ್ ಸಿಂಗ್‌ರವರ ಅನೈತಿಕ ಗೆಲುವಿಗೆ ಕಾರಣರಾದವರಲ್ಲಿ ಕೆಲವರಿಗೆ ಇನ್ನೂ ಹೆಚ್ಚಿನ ಆಮಿಷ ಬೇರೆಡೆಗಳಿಂದ ಬಂತೋ ಏನೋ. ಅಥವಾ ಮುಳುಗುತ್ತಿರುವ ಹಡಗಿನಿಂದ ತಪ್ಪಿಸಿಕೊಳ್ಳೋಣ ಎಂದೆನಿಸಿತೋ. ಮತ್ತೆ ಪಕ್ಷಾಂತರ ಮಾಡಿದರು. ಬಹುಶಃ ನೀತಿ ಯೆಂಬುದು ಏನೆಂದೇ ತಿಳಿಯದ ಕಲ್ಯಾಣ್ ಸಿಂಗ್ ರಾಜೀನಾಮೆ ನೀಡಲಿಲ್ಲ. ಇತ್ತೀಚೆಗಷ್ಟೆ ಉತ್ತರ ಪ್ರದೇಶದ ಘಟನೆ 'ದುರದೃಷ್ಟಕರ' ಎಂದ ವಾಜಪೇಯಿ ಕೊಡಾ ಅದನ್ನು ಸರಿಪಡಿಸುವ ಅವಕಾಶವನ್ನು ಉಪಯೋಗಿಸಿ ಕಲ್ಯಾಣ್‌ಸಿಂಗ್ ರಾಜೀನಾಮೆ ಕೊಡುವಂತೆ ಹೇಳುವ ಬದಲು ಇನ್ನೊಂದು 'ದುರದೃಷ್ಟಕರ' ಘಟನೆ ನಡೆಸಲು ಉಪವಾಸ ಸತ್ಯಾಗ್ರಹಕ್ಕೆ ಇಳಿದರು! ಹಿಂದಿನ ಅನುಭವ ಹಾಗೂ ತನ್ನ ಹಿಂದಿನ ರಾಜ್ಯಪಾಲರ ಕ್ರಮವನ್ನು ಅನುಸರಿಸಿ ಈಗಿನ ರಾಜ್ಯಪಾಲರು ಕಲ್ಯಾಣ್‌ಸಿಂಗ್ ಸರ್ಕಾರವನ್ನು ವಜಾಮಾಡಿ, ಸದನದಲ್ಲಿ ಬಹುಮತ ಪಡೆದಿದೆಯೆಂದು ತನಗನಿಸಿದ ಈ ಹಿಂದೆ ಕಾಂಗ್ರೆಸ್‌ನಿಂದ ಪಕ್ಷಾಂತರ ಮಾಡಿ ಲೋಕತಾಂತ್ರಿಕ ಕಾಂಗ್ರೆಸ್ ಪಕ್ಷ ರಚಿಸಿಕೊಂಡ ನರೇಶ್ ಅಗರ್‌ವಾಲ್ ಉಪ ಮುಖ್ಯ ಮಂತ್ರಿಯಾಗಿರುವ, ಜಗದಾಂಬಿಕಾ ಪಾಲ್ ಮುಖ್ಯಮಂತ್ರಿಯಾಗಿ ರುವ ಹೊಸ ಸರ್ಕಾರವನ್ನು ಪ್ರತಿಷ್ಠಾಪಿಸಿ ಸದನದಲ್ಲಿ ವಿಶ್ವಾಸ ಕೋರುವಂತೆ ಹೇಳಿದರು.

ಈ ನಡುವೆ ಈ ಹಿಂದೆ ಅಯೋಧ್ಯ ವಿವಾದ ದಲ್ಲಿ ನ್ಯಾಯಾಲಯವನ್ನು ಧಿಕ್ಕರಿಸಿದ ಬಿಜೆಪಿ ಅಲಹಾಬಾದ್ ಹೈಕೋರ್ಟಿಗೆ ಹೋಯಿತು. ಹೈಕೋರ್ಟ್ ಜಗದಾಂಬಿಕಾ ಪಾಲ್‌ರ ನೇಮಕವನ್ನು ರದ್ದು ಮಾಡಿತು. ಪಕ್ಷಾಂತರ ಮಾಡಿದವರು ಮತ್ತೆ ಬಿಜೆಪಿಯ ಒತ್ತಡಗಳಿಗೆ, ಆಮಿಷಗಳಿಗೆ ಒಳಗಾದರು. ಹಿಂದಿನ ದಿನವಷ್ಟೆ ಬಿಜೆಪಿ ಯೊಂದಿಗೆ ತನ್ನ ಕೆಟ್ಟ ಅನುಭವವನ್ನು ತೋಡಿಕೊಂಡ 'ಉಪಮುಖ್ಯಮಂತ್ರಿ' ನರೇಶ್ ಅಗರ್‌ವಾಲ್‌ಗೆ ಮತ್ತೊಮ್ಮೆ 'ಜ್ಞಾನೋದಯ'ವೋ ಏನೋ ಆಯಿತು. ಅವರ ಜೊತೆಗೆ ಇನ್ನಷ್ಟು ಡಬಲ್ ಪಕ್ಷಾಂತರಿಗಳು ಮೂರನೇ ಪಕ್ಷಾಂತರಕ್ಕೆ ಸಿದ್ದರಾದರು. ಈ ನಡುವೆ ಪಾಲ್ ರವರ ಅರ್ಜಿಯ ಮೇಲೆ ತೀರ್ಪು ನೀಡುತ್ತಾ ಸುಪ್ರೀಂ ಕೋರ್ಟ್ ಕಲ್ಯಾಣ್‌ಸಿಂಗ್ ಪ್ರಮುಖ ನಿರ್ಧಾರವನ್ನು ಕೈಗೊಳ್ಳದಂತೆ ತಾಕೀತು ಮಾಡಿ ಫೆಬ್ರವರಿ 26 ರಂದು ಇಬ್ಬರು ಮುಖ್ಯಮಂತ್ರಿಗಳ ನಡುವೆ ಯಾರಿಗೆ ಬಹುಮತವಿದೆಯೆಂದು ಸದನದಲ್ಲಿ ಪರೀಕ್ಷಿಸಿ, ತನಗೆ ತಿಳಿಸುವಂತೆ ಹೇಳಿತು. ಮತ್ತೆ ಕುದುರೆ ವ್ಯಾಪಾರ ಶುರು ವಾಯಿತು. ಕಲ್ಯಾಣಸಿಂಗ್ ಇಪ್ಪತ್ತಕ್ಕೂ ಹೆಚ್ಚು ಶಾಸಕರನ್ನು ದೂರದ ವಿರಾಮ ಧಾಮಕ್ಕೆ 'ಒಯ್ದಿಟ್ಟರು'. ಬಲಪರೀಕ್ಷೆ ಯಲ್ಲಿ ಗೆದ್ದರು.

ಆದರೆ, ನಿಜವಾಗಿ ಗೆದ್ದವರು ಯಾರು? ಇದು ಎಲ್ಲರೂ ಕೇಳುವ ಪ್ರಶ್ನೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಳ್ಳುವ "ನೀತಿ" ಗೆದ್ದಿತು. ವೈಯುಕ್ತಿಕ ಲಾಭಕ್ಕಾಗಿ ಮತ್ತೆಮತ್ತೆ ಪಕ್ಷಾಂತರ ಮಾಡುವ ಅಂದರೆ ಪಕ್ಷ ಬದಲಿಸುವ ಹೀನ ಆಸೆಬುರುಕರ 'ನೀತಿ' ಗೆದ್ದಿತು. ಇದನ್ನು ತಮ್ಮ ಗೆಲುವೆಂದು ಬಿಜೆಪಿಯ ಮಂದಿ ಕುಣಿದಾಡುತ್ತಿದ್ದರೆ ಅದು ಏನನ್ನು ತೋರಿಸುತ್ತದೆ ಎಂಬುದು ಸ್ಪಷ್ಟ. ಅದು ರಾಜಕೀಯ ಅನೈತಿಕತೆಯ ಪ್ರಪಾತಕ್ಕೆ ಇಳಿದ್ದದ್ದನ್ನು ತೋರಿಸುತ್ತದೆ ಎಂಬ ಸಿಪಿಐ(ಎಂ)ನ ಪ್ರಧಾನ ಕಾರ್ಯ ದರ್ಶಿ ಹರಿಕಿಷನ್‌ಸಿಂಗ್ ಸುರ್ಜಿತ್ ರವರ ಟಿಪ್ಪಣಿಯನ್ನು ಎಲ್ಲ ಪ್ರಜಾ ಪ್ರಭುತ್ವವಾದಿಗಳು ಒಪ್ಪುತ್ತಾರೆ.

ಈ ನಮ್ಮ ರಾಜಕಾರಣದಲ್ಲಿ ಈಗ ರಾರಾಜಿಸುತ್ತಿರುವ ನೈತಿಕ ಅಧಃಪತನ ಪ್ರಸ್ತುತ ಲೋಕಸಭಾ ಚುನಾವಣೆಗಳಲ್ಲಿ ಎರಡು ರೀತಿಗಳಲ್ಲಿ ಪ್ರಕಟಗೊಂಡಿದೆ. ಒಂದು- ಸಿದ್ಧಾಂತ, ಕಾರ್ಯಕ್ರಮ, ನೀತಿಗಳನ್ನೆಲ್ಲಾ ಗಾಳಿಗೆ ತೂರಿ ಕೇವಲ ಅಧಿಕಾರಕ್ಕಾಗಿ ಸಮಯಸಾಧಕ ಮೈತ್ರಿ ಮಾಡಿಕೊಳ್ಳುತ್ತಿದ್ದು, ಎಲ್ಲಾ ರೀತಿಯ ಪಕ್ಷಾಂತರಿಗಳು ಕಾವಿಪಡೆಗಳ ಜತೆ ಗೂಡುತ್ತಿದ್ದಾರೆ. ಅಧಿಕಾರದ ಆಸೆಯಿಂದ. ಕಾವಿಪಡೆ ಅಧಿಕಾರ ಪಡೆಯುವ ಸಾಧ್ಯತೆಗಳು ಕಡಿಮೆಯಾದಂತೆ ಮತ್ತಷ್ಟು ನೀತಿಬಾಹೀರ ಚೌಕಾಶಿಗೆ ಇಳಿಯುತ್ತಿದ್ದಾರೆ. ಎರಡನೆಯದಾಗಿ, ಬೇರೆ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ಪಕ್ಷ ಟಿಕೆಟ್ ನಿರಾಕರಿಸಿದ ಹಲವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಇಂತಹವರು ಚುನಾಯಿತರಾದರೆ ಅವರು ಯಾರ ಕಡೆ ಹೋಗಬಹುದು ಎಂದು ಹೇಳಲಾದೀತೇ? ಮತ್ತೊಮ್ಮೆ ಜನಾದೇಶವನ್ನು ಇಂತಹ ವ್ಯಕ್ತಿಗಳು ವೈಯಕ್ತಿಕ ಲಾಭಕ್ಕಾಗಿ ದಾರಿತಪ್ಪಿಸುತ್ತಾರೆ" ಎಂದು ಸಿಪಿಐ(ಎಂ) ಪತ್ರಿಕೆಯಾದ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಸರಿಯಾಗಿಯೇ ವಿಶ್ಲೇಷಿಸಿದೆ.

ಬಹುಶಃ ಪಕ್ಷಾಂತರದ ಬಗ್ಗೆ ದೇಶ ಗಂಭೀರವಾಗಿ ಯೋಚಿಸಬೇಕಾದಂತಹ ಸನ್ನಿವೇಶ ಈಗ ಬಂದಿದೆ. ಯಾವುದೇ ವ್ಯಕ್ತಿ ತಾನು ಯಾವ ಪಕ್ಷದ ಚಿಹ್ನೆಯಿಂದ ಚುನಾಯಿತನಾಗಿದ್ದಾನೋ/ಳೋ ಆ ಪಕ್ಷವನ್ನು ತ್ಯಜಿಸಿದರೆ ಆ ವ್ಯಕ್ತಿ ತನ್ನ ಸ್ಥಾನವನ್ನು ಕಳಕೊಂಡು ಮತ್ತೆ ಜನರ ಮುಂದೆ ಬರು ವಂತಾಗಬೇಕು ಎಂದು ಸಿಪಿಐ(ಎಂ) ಬಹಳ ದಿನದಿಂದ ಸೂಚಿಸುತ್ತಾ ಬಂದಿದೆ. ಈ ಸೂಚನೆಯನ್ನು ಗಂಭೀರವಾಗಿ ಪರಿಗಣಿಸ ಬೇಕಾದ ಸನ್ನಿವೇಶ ಈಗ ಬಂದಿದೆ. ಸಮಯ ಸಾಧಕರು ಪ್ರಜಾಪ್ರಭುತ್ವದ ಅಪಹಾಸ್ಯ ಮಾಡದಂತೆ ತಡೆಯಲು, ಪಕ್ಷಾಂತರಗಳ ಮೂಲಕ ಬಹುಮತಗಳಿಸುವ ಕೋಮು ವಾದಿ, ಪ್ರತಿಗಾಮಿ ಶಕ್ತಿಗಳ ದುರುಳತನ ವನ್ನು ತಡೆಯಲು ಇದೊಂದೇ ದಾರಿ.

"ಇಲ್ಲವಾದರೆ ಜನಗಳನ್ನು ಅವಮಾನ ಮಾಡುವ, ಜನಾದೇಶವನ್ನು ಅತ್ಯಂತ ಹೀನ ರೀತಿಯಲ್ಲಿ ವಿಕೃತಗೊಳಿಸುವ ಪ್ರವೃತ್ತಿ ಮುಂದುವರಿಯುತ್ತದೆ. ಈಗಿನ ವ್ಯವಸ್ಥೆ ಯನ್ನು ಕಲ್ಯಾಣಸಿಂಗ್‌ರಂತಹವರು ಅತ್ಯಂತ ನಗ್ನ ರೀತಿಯಲ್ಲಿ ಕುದುರೆ ವ್ಯಾಪಾರ ಮಾಡಿ, ಎಂ.ಎಲ್.ಎ.ಗಳನ್ನು ಖರೀದಿಸಿ, ಪ್ರಜಾಪ್ರಭುತ್ವವನ್ನು ಬುಡ ಮೇಲು ಮಾಡಿಯೂ ನಂತರದಲ್ಲಿ ಈಗಿರುವ ಕಾನೂನುಗಳ ದುರ್ಲಾಭ ಪಡೆದು, "ನ್ಯಾಯ" ಪಡೆಯಲು ಪ್ರಯತ್ನಿಸು ವಂತಾಗುತ್ತದೆ. ಪ್ರಜಾಪ್ರಭುತ್ವ ವನ್ನು ಬಲಗೊಳಿಸಲು ಇದನ್ನು ತಡೆಯಲೇ ಬೇಕು" ಎಂದು ಸಿಪಿಐ(ಎಂ) ಹೇಳಿದೆ. ○

12ನೇ ಲೋಕಸಭಾ ಚುನಾವಣೆ ಮುಗಿಯಿತು

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರ್ನಾಟಕ ರಾಜ್ಯದ ಮತದಾರ ಬಂಧುಗಳನ್ನು ಅಭಿನಂದಿಸುತ್ತದೆ.

ಖಂಡಿತವಾಗಿಯೂ ಕರ್ನಾಟಕದ ಜನತೆ ಲೋಕಸಭೆಗೆ ಫೆಬ್ರವರಿ 16 ಮತ್ತು ಫೆಬ್ರವರಿ 22 ರಂದು ನಡೆದ ಮಹಾಚುನಾವಣೆಯಲ್ಲಿ ಮೂರನೇ ಕೂಟದ ಪಕ್ಷಗಳ ಪ್ರತಿನಿಧಿಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ಚುನಾಯಿಸಿದ್ದಾರೆ ಎಂದು ಭಾರತ ಕಮ್ಯುನಿಸ್ಟ್ (ಮಾರ್ಕ್ಸವಾದಿ) ಪಕ್ಷವು ದೃಢವಾಗಿ ನಂಬಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಬಿಜೆಪಿ ಪಕ್ಷದ ಮಾನ್ಯ ಯಡಿಯೂರಪ್ಪನವರ ಅಭಿಪ್ರಾಯ ವಾಸ್ತವ ಎನಿಸುವುದಿಲ್ಲ. "ನಾವು 20 ಕ್ಕೂ ಹೆಚ್ಚು ಸೀಟುಗಳನ್ನು ಗೆಲ್ಲುತ್ತೇವೆ; ಪರಿಣಾಮವಾಗಿ, ಜನತಾದಳದ ಎಂ.ಎಲ್.ಎ.ಗಳು ಜೆ.ಹೆಚ್. ಪಟೇಲರನ್ನು ತ್ಯಜಿಸಿ ಬಿಜೆಪಿ, ಲೋಕಶಕ್ತಿ ಕಡೆಗೆ, ಓಡಿ ಬರುತ್ತಾರೆ; ಜೆ.ಹೆಚ್ ಪಟೇಲರ ಜನಾತದಳದ ಸರಕಾರವು ಮಾರ್ಚ 3 ತಾರೀಕಿನಂದೇ ರಾಜೀನಾಮೆ ಕೊಡಬೇಕಾಗುತ್ತೆ" ಎಂದೆಲ್ಲಾ ಬುರುಡೆ ಬಿಟ್ಟಿದ್ದಾರೆ ಯಡಿಯೂರಪ್ಪ ಮಹಾಶಯರು. ಎಂತಹ ಉದ್ದಟತನ! ಮತದಾರರ ಬಗ್ಗೆ ಎಂತಹ ತಾತ್ಸಾರ.

ಅದೇನೇ ಇರಲಿ, ದೇಶದಲ್ಲೂ ಹಾಗೂ ಕರ್ನಾಟಕ ರಾಜ್ಯದಲ್ಲಿ ಮೂರನೇ ಒಕ್ಕೂಟವು ಸ್ಪಷ್ಟವಾಗಿ ತನ್ನ ಪ್ರಣಾಳಿಕೆಯನ್ನು ಜನತೆಯ ಮುಂದೆ ಇರಿಸಿ, ಪ್ರಾಮಾಣಿಕವಾಗಿ ಮತಗಳನ್ನು ಯಾಚಿಸಿದೆ.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ತಮ್ಮ ಜಂಟೀ ಪ್ರಣಾಳಿಕೆಯನ್ನು ಮತದಾರರ ಮುಂದೆ ಇರಿಸಲು ಸಾಧ್ಯವಾಗಲಿಲ್ಲ ಮಾತ್ರವಲ್ಲ. ಮತದಾರರಿಗೆ ಎಲ್ಲಾ ರೀತಿಯಲ್ಲಿ "ತಾವು ತಮ್ಮ ಮತೀಯ ಸಂಪ್ರದಾಯವಾದೀ ಧೋರಣೆಗಳನ್ನು ಜಾರಿಗೆ ತರುವುದಿಲ್ಲ ಎಂದು ಭರವಸೆ ಹುಟ್ಟಿಸಿ, ಆಮೇಲೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಮುಗಿದ ನಂತರ ಕೊನೆಗೆ "ತಮ್ಮ ನಿಜ ಕೋಮುವಾದಿ ಮುಖ"ವನ್ನು ತಮ್ಮ ಪ್ರಣಾಳಿಕೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಇನ್ನು ಕಾಂಗ್ರೆಸ್(ಐ) ಪಕ್ಷದ ಪ್ರಣಾಳಿಕೆ "ಕೇವಲ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ"ದ ಧೋರಣೆಗಳನ್ನೆ ಮುಂದುವರಿಸುವ 'ಭರವಸೆ'ಯನ್ನು ಕೊಟ್ಟಿದೆ.

ಇದರಿಂದಾಗಿ, ಈ ಚುನಾವಣೆಯಲ್ಲಿ ಜನತೆ "ಕೋಮುವಾದೀ ಪ್ರಣಾಳಿಕೆ"ಯನ್ನು ಖಂಡಿತವಾಗಿ ತಿರಸ್ಕರಿಸುತ್ತದೆ. ಹಾಗೂ ಕಾಂಗ್ರೆಸ್(ಐ) ಯ ಉದಾರೀಕರಣ, ಖಾಸಗೀ ಕರಣ ಮತ್ತು ಜಾಗತೀಕರಣ ನೀತಿಗಳನ್ನು ತಿರಸ್ಕರಿಸುತ್ತದೆ ಎಂಬ ವಿಶ್ವಾಸ ನಮಗಿದೆ.

ಕೋಲಾರ (ಮೀಸಲಾತಿ) ಕ್ಷೇತ್ರದಲ್ಲಿ ಈ ಚುನಾವಣೆಯಲ್ಲಿ ಲೋಕಶಕ್ತಿ, ಬಿಜೆಪಿ ಅಭ್ಯರ್ಥಿಯನ್ನು ಸೋಲಿಸುತ್ತೇವೆಂಬ ವಿಶ್ವಾಸವು ನಮ್ಮ ಪಕ್ಷಕ್ಕಿದೆ.

ಹಾಗೂ, ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಕಾಂ. ನಾರಾಯಣಸ್ವಾಮಿ ಇವರಿಗೆ ಗಣ್ಯ ಪ್ರಮಾಣದಲ್ಲಿ ಮತಗಳು ಈ ಚುನಾವಣೆಯಲ್ಲಿ ದೊರೆತು, ಮುಂದಕ್ಕೆ ಈ ಕ್ಷೇತ್ರದಲ್ಲಿ ಅವರು ಸತತವಾಗಿ ಸ್ಪರ್ಧಿಸುವುದಕ್ಕೆ ನೆಲೆ ಸ್ಥಾಪನೆ ಮಾಡುವುದು ಎಂಬ ವಿಶ್ವಾಸ ನಮ್ಮ ಪಕ್ಷಕ್ಕಿದೆ.

ಈ ಚುನಾವಣೆಯಲ್ಲಿ ನಮ್ಮ ಪಕ್ಷವು 18 ತಿಂಗಳ ಸಂಯುಕ್ತ ರಂಗ ಸರಕಾರದ ಸಾಧನೆಗಳನ್ನು ವಿಷದೀಕರಿಸಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿದ್ದ ಜನಪರ ನೀತಿಗಳನ್ನು ಸಂಪೂರ್ಣವಾಗಿ ಜಾರಿಮಾಡುವುದಕ್ಕೆ ಪುನಃ ಸಂಯುಕ್ತರಂಗ ಪಕ್ಷಗಳನ್ನು ಗೆಲ್ಲಿಸಿ ಆಸ್ಪದ ಕೊಡಬೇಕೆಂದು ಮತದಾರರನ್ನು ವಿನಂತಿಸಿತ್ತು.

ಅದೇ ವೇಳೆ, ಕೋಮುವಾದಿಗಳು ದೇಶ ಒಡೆಯುವ ಅಪಾಯ ಇದೆ ಎಂಬುದನ್ನು ದೇಶದ ಬಹುಭಾಗದ ಬಡಜನತೆಯ ಜೀವನದ ಹಿತಗಳು ಸಂಪೂರ್ಣ ವಾಗಿ ಕಡೆಗಣಿಸಲ್ಪಡುವ ಸಂಪ್ರದಾಯವಾದಿ ಬಿಜೆಪಿ ಪ್ರಚಾರವನ್ನು ನಾವು ತಡೆದಿದ್ದೇವೆ.

ಉತ್ತರ ಪ್ರದೇಶದಲ್ಲಿ ಬಿಜೆಪಿಯು ಅಧಿಕಾರಕ್ಕಾಗಿ ಏನನ್ನೂ ಮಾಡಲು ಹಿಂಜರಿಯುವುದಿಲ್ಲ, ಯಾವ ತಂತ್ರಗಳನ್ನು ಬಳಸಲೂ ಹಿಂಜರಿಯುವುದಿಲ್ಲ, ಅದು ಕೇವಲ ಸಂದರ್ಭವಾದೀ ಪಕ್ಷ ಎಂಬುದು ಸ್ಪಟಿಕದಂತೆ ಸ್ಪಷ್ಟ. ಪ್ರಜಾಪ್ರಭುತ್ವದ ಕೊಲೆ ಮಾಡಿ ಹೇಗೆ ಈ ಪಕ್ಷ ಅಧಿಕಾರ ನಡೆಸಲು ಪ್ರಯತ್ನಿಸುತ್ತದೆ ಎಂಬುದಕ್ಕೆ ಒಂದು ಸ್ಪಷ್ಟ ಸಾಕ್ಷಿಯಾಗಿದೆ.

ದೇಶವು ಒಂದು ಸಂಧಿಗ್ದ ಪರಿಸ್ಥಿತಿಯಲ್ಲಿ ಇದೆ. ಜನತೆ ಈ ಸಂಧಿಗ್ದ ಪರಿಸ್ಥಿತಿಯಲ್ಲಿ ಅತ್ಯಂತ ಜವಾಬ್ದಾರಿಯಿಂದ ದೇಶದ ಸಮಗ್ರತೆ ಮತ್ತು ಐಕ್ಯತೆಯನ್ನು ಕಾಪಾಡುವ ದೃಷ್ಟಿಯಲ್ಲಿ ತಮ್ಮ ತೀರ್ಪನ್ನು ಕೊಡಲಿದ್ದಾರೆ ಎಂಬ ವಿಶ್ವಾಸ ನಮಗಿದೆ.

ಪುನಃ ಕರ್ನಾಟಕದ ಮತದಾರರಿಗೆ ಅಭಿನಂದನೆಯನ್ನು ಸಲ್ಲಿಸಲು ಸಿಪಿಐ(ಎಂ) ಇಚ್ಛಿಸುತ್ತದೆ.


ಪಿ.ರಾಮಚಂದ್ರರಾವ್



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ. ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

1937 ರ ವೇಳೆಗೆ ವಿಶ್ವದಲ್ಲಿ ಫ್ಯಾಸಿಸಂ ತಲೆ ಎತ್ತುತ್ತಿದ್ದು ವಿಶ್ವಾದ್ಯಂತ ಪ್ರಗತಿಪರ ಶಕ್ತಿಗಳು ಅದರ ವಿರುದ್ಧ ದನಿ ಎತ್ತಲಾರಂಭಿಸಿದರು. ಭಾರತದಲ್ಲಿ ಪ್ರಖ್ಯಾತ ಫ್ರೆಂಚ್ ಸಾಹಿತಿ, ತತ್ವಜ್ಞಾನಿ ರೋಮೇಂ ರೋಲಾಂ ಕರೆಗೆ ಓಗೊಟ್ಟು 'ಫ್ಯಾಸಿಸಂ ಮತ್ತು ಯುದ್ಧದ ವಿರುದ್ಧ ಲೀಗ್' ಸ್ಥಾಪನೆಗೊಂಡಿತು. **ರವೀಂದ್ರನಾಥ್ ಟಾಗೋರ್** ಅದರ ಅಧ್ಯಕ್ಷರಾದರು, ಸೌಮೇಂದ್ರ ಟಾಗೋರ್ ಕಾರ್ಯದರ್ಶಿಯಾದರು.



ಒಂದು ವರ್ಷದ ಹಿಂದೆ ಜುಲೈ 1936 ರಲ್ಲಿ ಸ್ಪೇನಿನಲ್ಲಿ ಚುನಾಯಿತ ಸರಕಾರದ ವಿರುದ್ಧ ಜನರಲ್ ಫ್ರಾಂಕೋ ದಂಗೆಯೆದ್ದ. ಆರಂಭದಿಂದಲೇ ಹಿಟ್ಲರ್ ಮತ್ತು ಮುಸೋಲಿನಿ ಆತನಿಗೆ ಹಣ-ಶಸ್ತ್ರಾಸ್ತ್ರ ಬೆಂಬಲ ಒದಗಿಸಿದ್ದರು. ಬ್ರಿಟನ್, ಫ್ರಾನ್ಸ್ ಮಧ್ಯಪ್ರವೇಶ ಮಾಡುವುದಿಲ್ಲ ಎಂಬ ಹೆಸರಿನಲ್ಲಿ ವಾಸ್ತವವಾಗಿ ಸ್ಪೇನ್ ಗಣತಂತ್ರದ ಕತ್ತು ಹಿಸುಕಿದ್ದರು. ಆಗ ವಿಶ್ವಾದ್ಯಂತ ಕಮ್ಯುನಿಸ್ಟರು, ಸೋಶಲಿಸ್ಟರು, ನಿಜವಾದ ಪ್ರಜಾಪ್ರಭುತ್ವವಾದಿಗಳು ಸ್ಪೇನ್ ಗಣತಂತ್ರದ ಬೆಂಬಲಕ್ಕೆ ನಿಂತರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಕೂಡಾ ಹಿಟ್ಲರ್ ಮತ್ತು ಮುಸಲೋನಿಯನ್ನು ಮಾತ್ರವಲ್ಲ, ಪರೋಕ್ಷವಾಗಿ ಫ್ಯಾಸಿಸ್ಟ್‌ರಿಗೆ ನೆರವಾಗುತ್ತಿದ್ದ ಫ್ರಾನ್ಸ್, ಬ್ರಿಟನ್‌ಗಳನ್ನು ಖಂಡಿಸಿತು.

ಯುದ್ಧನಿರತ ಸ್ಪೇನ್ ಗಣತಂತ್ರದೊಂದಿಗೆ ಸೌಹಾರ್ದ ವ್ಯಕ್ತಪಡಿಸಲು **ನೆಹರೂ, ಕೃಷ್ಣಮೆನನ್** ಜೊತೆಗೆ ಬಾರ್ಸೆಲೋನಾಕ್ಕೆ ಭೇಟಿ ನೀಡಿದರು. ರವೀಂದ್ರನಾಥ್ ಟಾಗೋರ್ 'ಮಾನವ ಕುಲದ ಅಂತಸ್ಸಾಕ್ಷಿಗೆ' ಒಂದು ಮನವಿ ಮಾಡಿದರು" ಸ್ಪೇನಿನ ಜನತಾ ರಂಗಕ್ಕೆ ನೆರವು ನೀಡಿ, ಜನಗಳ ಸರಕಾರಕ್ಕೆ ನೆರವು ನೀಡಿ, ಕೋಟಿಗಟ್ಟಲೆ ದನಿಗಳಲ್ಲಿ ಪ್ರತಿಗಾಮಿತನವನ್ನು ನಿಲ್ಲಿಸಬೇಕೆಂದು ಕೂಗಿ ಹೇಳಿ, ಪ್ರಜಾಪ್ರಭುತ್ವದ ಸಹಾಯಕ್ಕೆ, ನಾಗರೀಕತೆ ಮತ್ತು ಸಂಸ್ಕೃತಿಯನ್ನುಳಿಸಲು ಕೋಟಿಗಟ್ಟಲೆ ಸಂಖ್ಯೆಯಲ್ಲಿ ಬನ್ನಿ, ಅಂತರ್ರಾಷ್ಟ್ರೀಯ ಫ್ಯಾಸಿಸಂನ ವಿನಾಶಕಾರಿ ಸವಾರಿಯನ್ನು ತಡೆಯಲೇಬೇಕು" ಎಂದಿತ್ತು ಅವರ ಮನವಿ.



ಸ್ಪೇನ್‌ನ ಗಣತಂತ್ರಕ್ಕೆ ನೆರವಾಗಲು ರಚಿಸಿದ ಅಂತರ್ರಾಷ್ಟ್ರೀಯ ಬ್ರಿಗೇಡಿನಲ್ಲಿ ವಿಶ್ವದ ಅತ್ಯುತ್ತಮ ಯುವಜನ ಪಾಲ್ಗೊಂಡರು. ಭಾರತದ ಮಹಾರಾಷ್ಟ್ರದಿಂದ ಒಬ್ಬ ಯುವ ಕಮ್ಯುನಿಸ್ಟ್ **ಗೋಪಾಲ್ ಮುಕುಂದ ಹುದ್ದಾರ್** ಈ ಬ್ರಿಗೇಡಿನಲ್ಲಿ ಫ್ರಾಂಕೋನ ಪಡೆಗಳ ವಿರುದ್ಧ ಬಂದೂಕು ಹಿಡಿದು ಹೋರಾಡಿದರು.



1938 ರ ಹರಿಪುರ ಅಧಿವೇಶನದಲ್ಲಿ ಸುಭಾಶ್ ಚಂದ್ರ ಬೋಸ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು.

'ವಸಾಹತುಶಾಹಿಯನ್ನು ಅಂತ್ಯಗೊಳಿಸದೆ ಬ್ರಿಟನ್ನಿನ ಜನರ ಉದ್ಧಾರವೂ ಸಾಧ್ಯವಿಲ್ಲ. ಭಾರತದ ಮತ್ತು ಇತರ ಗುಲಾಮತನಕ್ಕೆ ತಳ್ಳಲ್ಪಟ್ಟ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ನಾವು ಬ್ರಿಟಿಶ್ ಜನತೆಯ ಉದ್ಧಾರಕ್ಕಾಗಿಯೂ ಹೋರಾಡುತ್ತಿದ್ದೇವೆ" ಎಂದರು ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ. ದೇಶೀ ಸಂಸ್ಥಾನಗಳ ಆಳ್ವಿಕೆಯಿದ್ದ ಪ್ರದೇಶಗಳಲ್ಲೂ ಕಾಂಗ್ರೆಸ್ ಹೋರಾಟಗಳಲ್ಲಿ ಭಾಗವಹಿಸಬೇಕು ಎಂದು ಅವರು ಪ್ರತಿಪಾದಿಸಿದರು.



ಅಕ್ಟೋಬರ್ 1937 ರಲ್ಲಿ ಜವಾಹರಲಾಲ್ ನೆಹರೂರವರ ಮುತುವರ್ಜಿಯಿಂದ ಅಖಿಲ ಭಾರತ ಸಂಸ್ಥಾನಗಳ ಜನಗಳ ಸಮ್ಮೇಳನ ನಡೆದ ನಂತರ ಹರಿಪುರದ ಕಾಂಗ್ರೆಸ್ ಅಧಿವೇಶನ ಪೂರ್ಣ ಸ್ವರಾಜ್ಯದ ಗುರಿ ಬ್ರಿಟಿಶ್ ಭಾರತಕ್ಕೆ ಮಾತ್ರವಲ್ಲ, ದೇಶೀ ರಾಜರುಗಳ ಸಂಸ್ಥಾನಗಳಿಗೂ ಅನ್ವಯಿಸುತ್ತದೆ ಎಂದು ಮೊತ್ತ ಮೊದಲ ಬಾರಿಗೆ ಸ್ಪಷ್ಟವಾಗಿ ಸಾರಿತು. ಅದರ ಮೊದಲು ದೇಶೀ ಸಂಸ್ಥಾನಗಳ ಜನಗಳ ಹೋರಾಟದಲ್ಲಿ ಭಾಗವಹಿಸಲು ಹಲವು ಕಾಂಗ್ರೆಸ್ ಮುಖಂಡರು ಹಿಂದೇಟು ಹಾಕುತ್ತಿದ್ದರು. 1937 ರ ಸಮ್ಮೇಳನ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಚಳುವಳಿಗೆ ಬೆಂಬಲ ಸೂಚಿಸಿತು. ಹರಿಪುರ ಕಾಂಗ್ರೆಸ್ ಅಧಿವೇಶನದ ನಂತರ ಮೈಸೂರಿನಲ್ಲಿ ಚುನಾಯಿತ ಸರಕಾರಕ್ಕಾಗಿ ಚಳುವಳಿ ತೀವ್ರಗೊಂಡಿತು. ಏಪ್ರಿಲ್ 1938 ರಲ್ಲಿ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಯಿತು. ಕೋಲಾರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ಸತ್ಯಾಗ್ರಹಿಗಳ ಮೇಲೆ ನಡೆಸಿದ ಗೋಳೀಬಾರಿನಲ್ಲಿ 49 ಜನ ಬಲಿಯಾದರು. ಮರು ತಿಂಗಳೇ ಸರ್ದಾರ್ ಪಟೇಲ್ ಮೈಸೂರು ದೀವಾನ ಮಿರ್ಜಾ ಇಸ್ಮಾಯಿಲ್‌ರೊಂದಿಗೆ ರಾಜಿ ಮಾಡಿಕೊಂಡರು. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಕಾನೂನುಬದ್ಧ ಸಂಘಟನೆಯಾಯಿತು. ಆದರೆ ಇತರ ಪ್ರಶ್ನೆಗಳಿಗೆ ಪರಿಹಾರ ಸಿಗಲಿಲ್ಲ. ಮತ್ತೆ ಸೆಪ್ಟೆಂಬರ್ 1938 ರಲ್ಲಿ ಚಳುವಳಿ ಭುಗಿಲೆದ್ದಿತು.

ಒರಿಸ್ಸಾದ ಡೆಂಕನಲ್, ತಲ್‌ಚೇರ್, ರಾಣ್‌ಪುರ್ ಇತ್ಯಾದಿ ಸಂಸ್ಥಾನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಬಿಲ್ಲು ಬಾಣಗಳಿಂದ ಧೀರ ಹೋರಾಟ ನಡೆಸುತ್ತಿದ್ದ ಆದಿವಾಸಿಗಳನ್ನು ಅಡಗಿಸಲು ಬ್ರಿಟಿಶರು ಈ ಸಂಸ್ಥಾನಗಳ ರಾಜರುಗಳಿಗೆ ನೆರವಾದರು. ಬಂಡಾಯಗಾರರನ್ನು ಹಿಡಿಯಲು ನೆರವಾಗಲು ನಿರಾಕರಿಸಿದ ದೋಣಿ ನಡೆಸುವ 13 ವರ್ಷದ **ಬಾಜೀ ರಾವುತ್**‌ನನ್ನು ಪೋಲೀಸರು ಹಾಗೂ ಮಿಲಿಟರಿ ಮಂದಿ ಬಂದೂಕಿನಿಂದ ತಿವಿದು-ತಿವಿದು ಕೊಂದರು. ಇದನ್ನು ಪ್ರತಿಭಟಿಸಿ ಕಾಂಗ್ರೆಸ್ ಸಮಾಜವಾದಿ ಮುಖಂಡ **ನಭಕೃಷ್ಣ ಚೌಧರಿ** ನೇತೃತ್ವದಲ್ಲಿ ಡೆಂಕನಲ್ ಚಳುವಳಿ ನಡೆಯಿತು. ಗೋಳಿಬಾರಿನಲ್ಲಿ **ಫಗು ಸಾಹು** ಹಾಗೂ **ಗೌರಿ ಸಾಹು** ಹುತಾತ್ಮರಾದರು. ರಾಣ್‌ಪುರ ಸಂಸ್ಥಾನದಲ್ಲಿ ಜನಗಳ ಮೇಲೆ ಗೋಳೀಬಾರಿಗೆ ಇಳಿದ ಬ್ರಿಟಿಶ್ ಪೊಲಿಟಿಕಲ್ ಏಜೆಂಟ್ ಜನಗಳ ಕಲ್ಲು ತೂರಾಟದಲ್ಲಿ ಸತ್ತ. ಇದಕ್ಕಾಗಿ **ರಘುನಾಥ್ ಮಾರುತಿ** ಹಾಗೂ **ದಿವಾಕರ್ ಭಂಧಾರ**‌ನ್ನು ಗಲ್ಲಿಗೇರಿಸಲಾಯಿತು.

ತಿರುವಾಂಕೂರು, ಕೊಚಿನ್ ಸಂಸ್ಥಾನಗಳಲ್ಲಿ 1937-38ರಲ್ಲಿ ಕಾಂಗ್ರೆಸ್ ಸರಕಾರಗಳು ಬಂದವು. ಇಲ್ಲಿಯೂ ರಾಜನ ನಿರಂಕುಶ ಪ್ರಭುತ್ವದ ವಿರುದ್ಧ ಜನಗಳ ಚಳುವಳಿ ನಡೆದಿತ್ತು. ಇದರಲ್ಲಿ ಕಮ್ಯುನಿಸ್ಟರು, ಸೋಶಲಿಸ್ಟರು ಪ್ರಮುಖ ಪಾತ್ರ ವಹಿಸಿದ್ದರು. ಕಾಂಗ್ರೆಸ್ ಮುಖಂಡತ್ವ ಅಷ್ಟಾಗಿ ಆಸಕ್ತಿ ತೋರಿಸದ್ದರಿಂದ ಇವರು ಯೂತ್ ಲೀಗ್ ಕಟ್ಟಿಕೊಂಡು ಅದರ ನೇತೃತ್ವದಲ್ಲಿ ಸೆಪ್ಟಂಬರ್ 1938 ರಲ್ಲಿ ಸಾಮೂಹಿಕ ಸತ್ಯಾಗ್ರಹ ನಡೆಸಿದರು. ದಿವಾನರಾಗಿದ್ದ ಸಿ.ಪಿ.ರಾಮಸ್ವಾಮಿ ಅಯ್ಯರ್ ಯೂತ್ ಲೀಗನ್ನು ನಿಷೇಧಿಸಿದರು. ಹೋರಾಟ ತೀವ್ರಗೊಂಡಿತು. ವಿವಿಧೆಡೆಗಳಿಂದ ಜಾಥಾಗಳು ತಿರುವಾಂಕೂರು ಪ್ರವೇಶಿಸಲಾರಂಭಿಸಿದವು. ಮಲಬಾರಿನಿಂದ ಬಂದ ಜಾಥಾಕ್ಕೆ ಎ.ಕೆ.ಗೋಪಾಲನ್ ನೇತೃತ್ವ ನೀಡಿದ್ದರು. ಮಧುರೈನಿಂದ ಇನ್ನೊಬ್ಬ ಕಮ್ಯುನಿಸ್ಟ್ ಮುಖಂಡ ಪಾಂಡ್ಯನ್ ನೇತೃತ್ವದಲ್ಲಿ ರೈತ ಜಾಥಾ ಬಂದಿತ್ತು, ಇನ್ನೂ ಮೂರು ಜಾಥಾಗಳು ಬಂದವು. ಪೋಲೀಸರ ಭೀಕರ ಲಾಠೀ ಪ್ರಹಾರದಲ್ಲಿ ಪಾಂಡ್ಯನ್ ಹುತಾತ್ಮರಾದರು, ಎ.ಕೆ.ಜಿ. ತೀವ್ರವಾಗಿ ಗಾಯಗೊಂಡರು. ಒಟ್ಟು ಈ ಸಂಸ್ಥಾನದಲ್ಲಿ ಜನತಾ ಚಳುವಳಿಯ ಮೇಲೆ 12 ಬಾರಿ ಗೋಳೀಬಾರು ನಡೆದು 15 ಯುವ ಎಡಪಂಥೀಯರು ಹುತಾತ್ಮರಾದರು.

(ಮುಂದುವರಿಯುವುದು)



ಉದ್ಯಮಪತಿಗಳಿಗೆ ಈಗ ಸ್ಥಿರತೆ ಬೇಕಂತೆ!

ಈಗ ಉದ್ಯಮ ಪತಿಗಳು ಈ ಮಾತನ್ನು ಆಡುತ್ತಿದ್ದಾರೆ. ಭಾರತದಲ್ಲಿ ಸ್ಥಿರತೆ ಬರಬೇಕು ಈ ಚುನಾವಣೆಗಳ ನಂತರ ಒಂದು ಸ್ಥಿರ ಸರ್ಕಾರ ಬರಬೇಕು ಎಂಬುದು ಅವರ ಆಶಯ. ಈ ಸ್ಥಿರತೆ ಯಿಂದಾಗಿ ಆರ್ಥಿಕದಲ್ಲಿ ಉಂಟಾಗಿರುವ ಹಿಂಜರಿತ ಕಡಿಮೆಯಾಗಿ ಬೆಳವಣಿಗೆ ಆಗುತ್ತದೆ ಎಂಬುದು ಅವರ ನಂಬಿಕೆ. ಅವರ ಈ ನಿಲುವಿನ ಹಿಂದೆ ಅವರ ರಾಜಕೀಯ ಆಶಯವೂ ಇದೆ.

ಒಂದೇ ಪಕ್ಷದ ಸರ್ಕಾರ (ಅಂದರೆ ಬಿಜೆಪಿ) ಅಥವಾ ಕಾರ್ಯಕುಶಲ ರಂಗ ಸರ್ಕಾರ ಬರಬೇಕಂತೆ (ಇದರರ್ಥ ಕಾಂಗ್ರೆಸ್ ನೇತೃತ್ವದ ಸರ್ಕಾರ ಎಂದಿರ ಬಹುದು) ಅದರಲ್ಲೂ ಹೊರಗಿನಿಂದ ಬೆಂಬಲ ಪಡೆದಿರುವ ಸರ್ಕಾರ ಬೇಡವೇ ಬೇಡ ಎನ್ನುತ್ತಾರೆ ಅವರು. ಹೊರಗಿ ನಿಂದ ಬೆಂಬಲ ನೀಡಿದವರು ಸಿ.ಪಿ.ಐ (ಎಂ) ಮತ್ತು ಕಾಂಗ್ರೆಸ್. ಕಾಂಗ್ರೆಸ್ ಸಂಯುಕ್ತರಂಗ ಸರ್ಕಾರವನ್ನು ಸೇರುತ್ತಿತ್ತೇನೊ ಆದರೆ ಎಡ ಪಕ್ಷಗಳು ಅದರಲ್ಲೂ ಸಿಪಿಐ(ಎಂ) ಇದಕ್ಕೆ ಕಡುವಿರೋಧ ವ್ಯಕ್ತಪಡಿಸಿತ್ತು.

ಈಗ ಈ ಬಂಡವಾಳಿಗರ ಮಾತಿನ ಅರ್ಥವೇನು? ಅವರು ಬಯಸುವ ಸ್ಥಿರತೆ ಎಂತಹದ್ದು ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಯಾವ ಪಕ್ಷಗಳು ಜನಪರ ಮತ್ತು ಯಾವುವು ಅಲ್ಲ ಎಂಬುದೂ ಇದರಿಂದ ಸ್ಪಷ್ಟವಾಗುತ್ತದೆ. ಬಂಡವಾಳಿಗರಿಗೆ ಬಿಜೆಪಿ ಅಥವಾ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಸ್ಥಾಪಿತ ವಾಗುವುದು ಬೇಕು. ಸಂಯುಕ್ತರಂಗದ ಸರ್ಕಾರ ಬೇಡ. ಅದರಲ್ಲೂ ಎಡಪಕ್ಷ ಗಳು ಸರ್ಕಾರದ ನೀತಿಗಳನ್ನು ನಿರ್ಧರಿಸುವಂತಹ ಪರಿಸ್ಥಿತಿ ಬೇಡ. ಎಡಪಕ್ಷಗಳು ದೇಶದ ಜನಸಾಮಾನ್ಯರ ಪರವಾದ ಪಕ್ಷಗಳು, ಸಂಯುಕ್ತರಂಗವೂ ಸಹ ಎಡಪಕ್ಷಗಳು ಅದರೊಳಗೆ ಇರುವುದರಿಂದ ಜನಪರ ನೀತಿಗಳನ್ನೇ ಹೊಂದಿವೆ ಎಂಬುದನ್ನು ಇದು ಹೇಳುತ್ತದೆ. ಕಾಂಗ್ರೆಸ್ ಮತ್ತು ಬಿ.ಜೆ.ಪಿ ಎರಡೂ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಕಾಯುವ ಪಕ್ಷಗಳು ಎಂಬುದನ್ನು ಇದು ಒಡೆದು ಹೇಳುತ್ತದೆ.

ಬಿಜೆಪಿ ಯಾ ಕಾಂಗ್ರೆಸ್ ಸರ್ಕಾರಗಳು ಬಂದರೆ ಸ್ಥಿರತೆ ಬರುತ್ತದೆ ಎಂದರೆ ಅದು ಹೇಗೆ? ಈ ಎರಡು ಪಕ್ಷಗಳು ಅಧಿಕಾರಕ್ಕೆ ಬಂದರೆ ಉದಾರೀಕರಣದ ಆರ್ಥಿಕ ನೀತಿಗಳನ್ನು ಬಂಡವಾಳಿಗರಿಗಾಗಿ ಮುಂದುವರಿಸಿ ಕೊಂಡು ಹೋಗುತ್ತದೆ. ಬಂಡವಾಳಿಗರ ಲಾಭಗಳಿಕೆಗೆ ಸ್ಥಿರತೆ ಬರುತ್ತದೆ. ಅಂದರೆ ಅವರು ಯಾವಾಗಲೂ ಹೆಚ್ಚೆಚ್ಚು ಲಾಭಗಳಿಸಲು ಅನುಕೂಲವಾಗು ವಂತಹ ನೀತಿಗಳು ಜಾರಿಗೆ ಬರುತ್ತವೆ. ಈ ಸರ್ಕಾರಗಳು ಅಧಿಕಾರಕ್ಕೆ ಬಂದರೆ ಏನೇನು ಮಾಡಬೇಕೆಂಬ ಬಗ್ಗೆಯೂ ಇವರು ಹೇಳಿದ್ದಾರೆ. ಅವರು ಬಯಸುವ ಕೆಲವು ಕ್ರಮಗಳು ಹೀಗಿವೆ -

ಬಡ್ಡಿದರಗಳು ಕಡಿಮೆಯಾಗಬೇಕು, ಉತ್ಪಾದಕ ಸಾಮರ್ಥ್ಯಗಳ ಬಳಕೆ ಹೆಚ್ಚಬೇಕು, ಅಂತರ್‍ರಚನಾ ಸೌಕರ್ಯಗಳಲ್ಲಿ ಹೂಡಿಕೆ ಹೆಚ್ಚಾಗಬೇಕು.

ಇದಲ್ಲದೆ ಕಾನೂನು ಸುಧಾರಣೆ ಆಗಬೇಕು, ಕೃಷಿ ವಲಯದ ಸುಧಾರಣೆ ಆಗಬೇಕು.

ಹೀಗಿದೆ ಬಂಡವಾಳಿಗರ ಕನಸು. ಇದೇ ಜನಪರ ನಿಲುವು ಎನ್ನುತ್ತಾರೆ ಅವರು. ಯಾಕೆಂದರೆ ಅವರ ಪ್ರಕಾರ ಬಂಡವಾಳಿಗರ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ಈ ಅಭಿವೃದ್ಧಿಗಾಗಿ ಅವರಿಗೆ ಸ್ಥಿರತೆ ಬೇಕು. ಸ್ಥಿರತೆ ಎಂದರೆ ಅವರ ಹಿತಾಸಕ್ತಿಗಳನ್ನು ಹಿಂದಿನಂತೆ ಕಾಯ್ದು ಕೊಂಡು ಬರುವ ಸ್ಥಿರತೆ.

ಸ್ಥಿರತೆಯ ಈ ಮಂತ್ರ ಎಂತಹ ಕುತಂತ್ರದ್ದು ಎಂಬುದು ಸ್ಪಷ್ಟವಲ್ಲವೆ?

ಮತ್ತೆ ಐ.ಎಂ.ಎಫ್. ಧಣಿಗೆ ಶರಣು

ಆಗ್ನೇಯ ಏಶಿಯಾ ದೇಶಗಳ ಕರೆನ್ಸಿ ಬಿಕ್ಕಟ್ಟು ನಮ್ಮ ದೇಶದೊಳಗೂ ಹರಿದು ಬರುತ್ತಿದೆ ಎಂಬುದನ್ನು ಉದಾರೀಕರಣ ವಾದಿಗಳು ಗಮನಿಸಿಲ್ಲವೆಂದಲ್ಲ. ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ|| ಸಿ. ರಂಗರಾಜನ್ ಅವರು ಈ ಬಿಕ್ಕಟ್ಟನ್ನು ಎದುರಿಸಲು ಭಾರತ ಐ.ಎಂ.ಎಫ್.ನಿಂದ 10 ಬಿಲಿಯನ್ ಡಾಲರುಗಳ ಸಾಲಕ್ಕೆ ಅರ್ಜಿ ಗುಜರಾಯಿಸಬೇಕು ಎಂದು ಸಲಹೆ ನೀಡಿದ್ದಾರೆ.

ಭಾರತದೊಳಕ್ಕೆ ವಿದೇಶಿ ಸರಕುಗಳು ಹರಿದು ಬರುವುದನ್ನು ತಡೆವ ಒಂದು ಪದ್ಧತಿಯೇ ಇಲ್ಲದಿರುವುದರಿಂದ ಇದೊಂದೇ ಈ ಪರಿಸ್ಥಿತಿ ಎದುರಿಸುವ ಉಪಾಯ ಎಂಬ ಭಾವವನ್ನು ಅವರು ವ್ಯಕ್ತಪಡಿಸಿದ್ದಾರೆ.

ಉದಾರೀಕರಣದ ಹುಚ್ಚಿನಲ್ಲಿ ನಮ್ಮ ದೇಶದ ಹಿತಾಸಕ್ತಿಗಳನ್ನು ಗಾಳಿಗೆ ತೂರಿ ಬಿಡಲಾಗಿದೆ ಎಂಬುದನ್ನು ಈಗ ಉದಾರೀಕರಣವಾದಿಗಳೂ ಒಪ್ಪುತ್ತಿದ್ದಾರೆ. ಉದಾಹರಣೆಗೆ ರಫ್ತುದಾರ ತನ್ನ ರಫ್ತು ಹಣವನ್ನು ಭಾರತದೊಳಕ್ಕೆ ಎಂದು ತರುತ್ತಾನೆ ಅಥವಾ ತರುತ್ತಾನೋ ಇಲ್ಲವೋ ಎಂಬುದರ ಮೇಲೆ ನಿಗಾ ಇರಿಸುವ ಯಾವುದೇ ಪದ್ಧತಿ ಸರ್ಕಾರದಲ್ಲಿರುವಂತಿಲ್ಲ. ಹೀಗಿರುವಾಗ ರಫ್ತುದಾರ ತನಗೆ ಬೇಕಾದಾಗ ಅಂದರೆ ರೂಪಾಯಿಯ ಬೆಲೆ ಕುಸಿದಾಗ ರಫ್ತು ಹಣವನ್ನು ದೇಶದೊಳಕ್ಕೆ ತಂದು ಲಾಭ ಮಾಡಿಕೊಳ್ಳಬಹುದು ಅಥವಾ ಈ ಹಣವನ್ನು ದೇಶದೊಳಕ್ಕೆ ತರದೇ ಹೋಗಬಹುದು.

ಹೀಗೆ ಇಲ್ಲಿ ನೂರಾರು ನ್ಯೂನತೆಗಳಿವೆ. ಎಲ್ಲ ರಫ್ತುದಾರರ ಅನುಕೂಲಕ್ಕೆ.

ಹೀಗಿರುವಾಗ ಮತ್ತೆ ಐಎಂಎಫ್ ಸಾಲಕ್ಕೆ ಶರಣು ಹೋಗದೆ ಬೇರೆ ದಾರಿ ಇವರಿಗೆ ಎಲ್ಲಿಂದ ಕಾಣಸಬೇಕು.

ಆಗ್ನೇಯ ಏಶಿಯಾದ ಕರೆನ್ಸಿಬಿಕ್ಕಟ್ಟು ಈಗ ನಮ್ಮ ದೇಶದ ಬಾಗಿಲೊಳು

ಅದು ಅಲ್ಲಿನ ಸಮಸ್ಯೆ. ಭಾರತದ ಆರ್ಥಿಕದ ಮೂಲಭೂತಗಳು ಬಹಳ ಪ್ರಬಲವಾಗಿರುವುದರಿಂದ ನಾವು ಚಿಂತೆ ಮಾಡುವ ಅವಶ್ಯಕತೆ ಇಲ್ಲ ಎಂದು ನಮ್ಮ ಉದಾರೀಕರಣವಾದಿಗಳು ಹೇಳುತ್ತಿದ್ದಾರೆ.

ದೇಶದಲ್ಲಿ ಈಗಾಗಲೇ ಒಟ್ಟುತ್ಪಾದನೆಯ ಬೆಳವಣಿಗೆಯಲ್ಲಿ ಕುಸಿತ ಔದ್ಯಮಿಕ ಬೆಳವಣಿಗೆಯ ಕುಂಠಿತ ಇವೆಲ್ಲ ಆಗಲೇ ಇವೆ. ಇವುಗಳಿಗೆಲ್ಲ ಮುಕುಟ ವಿಟ್ಟಂತೆ ಉದಾರೀಕರಣ ವಾದಿಗಳು ಹೇಳುವಂತೆ ಭಾರತದ ರಫ್ತು ಬೆಳವಣಿಗೆಯಲ್ಲಿ ತೀವ್ರ ಕುಸಿತ ಈ ರಫ್ತನ್ನು ಹೇಗೆ ಹೆಚ್ಚಿಸಬೇಕೆಂಬ ಚಿಂತೆ ಗಾಢವಾಗಿರುವಾಗ ಈಗ ಹೊಸ ಭೂತ ಎದುರಿಗೆ ಬಂದಿದೆ.

ಆಗ್ನೇಯ ಏಶಿಯಾದ ಕರೆನ್ಸಿ ಬಿಕ್ಕಟ್ಟಿನಿಂದಾಗಿ ಈಗ ಭಾರತದ ರಫ್ತು ತೀವ್ರ ತೊಂದರೆಗೆ ಸಿಕ್ಕಿಕೊಂಡಿದೆ ಎಂಬುದೇ ಈ ಭೂತ.

ಇದು ಯಾಕೆಂದರೆ ಈ ಆಗ್ನೇಯ ದೇಶಗಳಲ್ಲಿನ ಬಿಕ್ಕಟ್ಟುಗಳಿಂದಾಗಿ ಅಲ್ಲಿನ ಬೆಲೆಗಳು ಪಾತಾಳಕ್ಕೆ ಇಳಿದು ಹೋಗಿವೆ. ಈ ಬೆಲೆಗಳಿಂದಾಗಿ ಭಾರತದ ಸರಕುಗಳಿಗೆ ಸ್ಪರ್ಧಾತ್ಮಕ ಶಕ್ತಿ ನಷ್ಟವಾಗಿದೆ. ಭಾರತದಿಂದ ಹತ್ತಿ ನೂಲಿನ ರಫ್ತು ಇಂಡೋನೇಷಿಯಾದ ನೂಲಿನ ರಫ್ತಿನಿಂದಾಗಿ ಹೊಡೆತ ಅನುಭವಿಸಿದೆ. ಹಾಗೆಯೇ ಸಿದ್ಧ ಉಡುಪುಗಳ ವಿಷಯದಲ್ಲಿ ಥಾಯ್‌ಲ್ಯಾಂಡ್, ಮಲೇಷಿಯಾ ಹಾಗೂ ಇಂಡೋನೇಷಿಯಾಗಳು ಭಾರತಕ್ಕೆ ಈಗ ಸ್ಪರ್ಧಿಗಳಾಗಿವೆ.

ಇದು ಒಂದು ತರಹದ ಸಮಸ್ಯೆಯಾದರೆ ಇನ್ನೊಂದು ತರಹದ ಸಮಸ್ಯೆಯೂ ಇದೆ. ಈ ಆಗ್ನೇಯ ಏಶಿಯಾದ ದೇಶಗಳಲ್ಲಿ ಹಲವು ಸರಕುಗಳು ಸೋವಿಯಾಗಿರುವುದರಿಂದ ಮತ್ತು ನಮ್ಮ ಆಮದು ನೀತಿ ಈಗ ಉದಾರವಾಗಿರುವುದರಿಂದ ಹಲವು ಸರಕುಗಳು ಭಾರತದೊಳಕ್ಕೆ ಆಮದಾಗುತ್ತವೆ. ಸಿಮೆಂಟು, ಉಕ್ಕು, ಕಾಗದ, ಕೆಲವು ರಾಸಾಯನಿಕಗಳು, ಕಬ್ಬಿಣೇತರ ತಂತಿಗಳು, ಎಲೆಕ್ಟ್ರಾನಿಕ್ ಉಪಕರಣಗಳು ಇತ್ಯಾದಿ ಹೀಗೆ ಆಮದಿನ ಸಾಧ್ಯತೆ ಹೊಂದಿವೆ.

ಹೀಗೆ ಈ ವಸ್ತುಗಳ ಆಮದು ಹೆಚ್ಚಾದರೆ ಅವು ಎರಡು ರೀತಿಯ ದುಷ್ಪರಿಣಾಮ ಬೀರುತ್ತವೆ. ಒಂದನೇಯದಾಗಿ ನಮಗೆ ಅತ್ಯಮೂಲ್ಯವಾದ ವಿದೇಶೀ ವಿನಿಮಯ ಹೊರಗೆ ಹರಿದು ಹೋಗುತ್ತದೆ. ವಿದೇಶೀ ವಿನಿಮಯದ ಕೊರತೆ ಉಂಟಾಗುತ್ತದೆ. ಎರಡನೇಯದಾಗಿ ನಮ್ಮ ಉದ್ದಿಮೆಗಳು ತತ್ತರಿಸಿ ರೋಗಗ್ರಸ್ತವಾಗುತ್ತವೆ. ಅಂದರೆ ಕಾರ್ಮಿಕರು ಉದ್ಯೋಗಗಳನ್ನು ಕಳೆದು ಕೊಳ್ಳುತ್ತಾರೆ. ಬಡತನ ಹೆಚ್ಚುತ್ತದೆ ಇತ್ಯಾದಿ.

ಈಗ ಹೇಳಿ ನಮ್ಮ ಆರ್ಥಿಕದ ಮೂಲಭೂತಗಳು ಪ್ರಬಲವಾಗಿವೆಯೇ?

ಸಾಮ್ರಾಜ್ಯಶಾಹಿತ್ವದ ಪೆಟೆಂಟ್!

ಇದು ಯಾವ ಪೆಟೆಂಟ್ ಎಂದಿರಾ? ಸಾಮ್ರಾಜ್ಯಶಾಹಿತ್ವವನ್ನು ಮೆರೆಯುವ ಜಗತ್ತಿನಾದ್ಯಂತ ತನ್ನ ಲಾಭವನ್ನೆ ಸಾಧಿಸುವ ಪೆಟೆಂಟ್ ಇದು. ಈ ಸಾಮ್ರಾಜ್ಯ ಶಾಹಿತ್ವದ ಪೆಟೆಂಟ್‌ನ್ನು ಅಮೇರಿಕ ತನಗೆ ತಾನೇ ಕೊಟ್ಟುಕೊಂಡಿದೆ.

ಪೆಟೆಂಟ್ ಕಾಯಿದೆಗಳ ವಿಷಯದಲ್ಲೂ ಅಮೇರಿಕ ಇದೇ ಗುಣವನ್ನು ಮೆರೆಯುತ್ತಿದೆ. ವಿಶ್ವವ್ಯಾಪಾರ ಸಂಸ್ಥೆಯಲ್ಲಿ ತನ್ನ ಪೆಟೆಂಟ್ ಕಾಯಿದೆ ಯನ್ನು ತಿದ್ದುಪಡಿ ಮಾಡಲು ಭಾರತ ಸಮಯಾವಕಾಶವನ್ನು ಕೇಳಿದ್ದನ್ನೇ ಅಮೇರಿಕ ಆಕ್ಷೇಪಿಸಿದೆ. ಭಾರತ ಈ ವಿಷಯದಲ್ಲಿ 1999 ರ ವರೆಗೆ ಸಮಯಾವಕಾಶ ಕೇಳಿದೆ.

ಹಾಗೆ ಭಾರತ ತನ್ನ ಪೆಟೆಂಟ್ ಕಾಯಿದೆಯನ್ನು ತಿದ್ದುಪಡಿ ಮಾಡಲು ಒಪ್ಪಿಕೊಂಡಿರುವುದು ತಪ್ಪು. ಅದು ದೇಶದ ಹಿತಾಸಕ್ತಿಗಳಿಗೆ ಮಾರಕವೂ ಹೌದು.

ಈಗಾಗಲೇ ಅಮೇರಿಕದ ರೈಸಟೆಕ್ ಎಂಬ ಕಂಪನಿ ಭಾರತದ ಬಸ್ಮತಿ ಅಕ್ಕಿಗೆ ಪೆಟೆಂಟ್ ಪಡೆದು ಭಾರತಕ್ಕೆ ಅನ್ಯಾಯ ಮಾಡಿದೆ.

ಹೊಸ ಪೆಟೆಂಟ್ ಕಾಯಿದೆ ಬಂದರೆ ಅಮೇರಿಕದ ಪೆಟೆಂಟ್‌ಗಳಿಗೆ ಭಾರತದಲ್ಲಿ ರಕ್ಷಣೆ ದೊರೆಯುತ್ತದೆ. ಆದರೆ ಭಾರತದ ಆಸ್ತಿಯೆಲ್ಲವನ್ನು ಅಭಿವೃದ್ಧಿ ಹೊಂದಿದ ದೇಶಗಳು ಕೊಳ್ಳೆ ಹೊಡೆಯಲು ಅನುವು ಮಾಡಿಕೊಡಬೇಕಾಗುತ್ತದೆ.

ಇದಕ್ಕೆ ಈಗಿನ ಕಾಯಿದೆ ಅಡ್ಡಿ ಪಡಿಸುತ್ತಿರುವುದರಿಂದಲೇ ಅಮೇರಿಕಕ್ಕೆ ಅಸಮಾಧಾನ. ಅದು ಈ ತಿದ್ದುಪಡಿ ಕೂಡಲೇ ಆಗಬೇಕೆಂದು ಹಠ ಹಿಡಿದು ಕುಳಿತಿದೆ.

ಭಾರತದ ಬೇವು, ಅರಿಶಿಣ, ಬಸ್ಮತಿಗಳಿಗೆಲ್ಲ ಕಾಯಂ ಸಂಚಕಾರ ತರುವುದೇ ಅದರ ಉದ್ದೇಶ.

ಹೇಗಿದೆ ಈ ಸಾಮ್ರಾಜ್ಯ ಶಾಹಿತ್ವದ ಪೆಟೆಂಟ್?

ದೇವದುರ್ಗದಲ್ಲಿ ರೈತರ ಬೃಹತ್ ಪ್ರದರ್ಶನ

ಜನವರಿ 31 ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 1500 ಜನ ಪುರುಷರು, ಮಹಿಳೆಯರನ್ನೊಳಗೊಂಡ ಬೃಹತ್ ಪ್ರದರ್ಶನ ನಗರದ ತಾಲ್ಲೂಕ್ ಪಂಚಾಯಿತಿಯಿಂದ ಹೊರಟು, ಪ್ರಮುಖ ಬೀದಿಗಳನ್ನು ಹಾದು ತಹಸೀಲ್ದಾರರ ಕಾರ್ಯಾಲಯದ ಮುಂದೆ ಸಭೆ ಸೇರಿತು.

ಸಂತೆಯ ದಿನವಾದ್ದರಿಂದ ಅಸಂಖ್ಯಾತ ರೈತರ ಗಮನ ಸೆಳೆದ ಪ್ರದರ್ಶನ, ತಹಶೀಲ ಕಾರ್ಯಾಲಯದ ಮುಂದೆ ನೆರೆದಾಗ 2000 ಕ್ಕೂ ಹೆಚ್ಚು ಜನ ರೈತ ಮುಖಂಡರ ಭಾಷಣ ಕೇಳಿ, ತಮ್ಮನ್ನು ಆ ಸಭೆಗೆ ಅರ್ಪಿಸಿಕೊಂಡಂತಿತ್ತು.

ತಾಲ್ಲೂಕಿನ ಬಹುಸಂಖ್ಯಾತ ರೈತ ಕೃಷಿ ಕೂಲಿಕಾರರನ್ನು ಬಾಧಿಸುವ ಸಮಸ್ಯೆಗಳಾದ ಭೂಮಿ, ಬಗರ್ ಹುಕುಮ್ ಸಾಗುವಳಿದಾರರಿಗೆ ಪಟ್ಟಾ ಕೊಡುವುದು, ಹೆಚ್ಚುವರಿ ಭೂಮಿ ಹಂಚಿಕೆಯಾಗಿ ಪಟ್ಟಾಪತ್ರ ಪಡೆದವರಿಗೆ ಭೂಮಿ ಸ್ವಾಧೀನ ಕೊಡುವುದು, ಹಸಿರುಕಾರ್ಡಿನಿಂದ ವಂಚಿತರಾದ ಎಲ್ಲಾ ಬಡವರಿಗೆ ಕಾರ್ಡು ಒದಗಿಸುವುದು, ಬಾವಿ ಪಂಪುಸೆಟ್ಟುಗಳಿಗೆ ಅವಶ್ಯಕ ವಿದ್ಯುತ್ ಸರಬರಾಜು ಮಾಡುವುದು, ಕೃಷ್ಣಾ ಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆಯಿಂದ ವಂಚಿತರಾದ ಹಳ್ಳಿಗಳಿಗೆ ನೀರೊದಗಿಸಲು ಪರ್ಯಾಯ ವ್ಯವಸ್ಥೆ ಮಾಡುವುದು ಪ್ರಮುಖ ಬೇಡಿಕೆಗಳಾಗಿದ್ದವು.

ತಹಸೀಲ್ದಾರ, ನೀರಾವರಿ ಇಲಾಖೆ, ವಿದ್ಯುತ್ ಇಲಾಖೆಯ ಅಧಿಕಾರಿಗಳು ಮಾತುಕತೆ ನಡೆಸಿ ರೈತರ ಸಭೆಗೆ ಬಂದು ಚುನಾವಣೆ ಪ್ರಕ್ರಿಯೆ ಮುಗಿಯುತ್ತಲೇ ತುರ್ತು ಕ್ರಮಕೈಗೊಳ್ಳುವ ಭರವಸೆಯನ್ನು ನೀಡಿದರು. ರೈತರ, ಆಕ್ರೋಶ, ಸಿಟ್ಟು ಅಧಿಕಾರಿಗಳಿಗೆ ಸವಾಲಾಗಿತ್ತು. ಚುನಾವಣೆ ಮುಗಿಯುತ್ತಲೇ ತಹಸೀಲ್ದಾರರು, ರೈತ ಮುಖಂಡರನ್ನು ಜೊತೆಯಲ್ಲಿ ಕರೆದುಕೊಂಡು ಭೂಮಿಯ ಸ್ವಾಧೀನ ಕೊಡಿಸಲು ಹಳ್ಳಿಗಳ ಭೇಟಿಗೆ ಒಪ್ಪುವುದರ ಜೊತೆಗೆ, ಹಸಿರು ಕಾರ್ಡು ವಂಚಿತರ ಸರ್ವೆಗೆ ಒಂದು ತಂಡವನ್ನು ಗೊತ್ತು ಮಾಡಿದ್ದಾರೆ. ವಿದ್ಯುತ್ ಸಮಸ್ಯೆ ಬಗೆಹರಿಸಲು ಸೂಪರಿಂಟೆಂಡೆಂಟ್ ಇಂಜಿನಿಯರ್ ಮಟ್ಟದಲ್ಲಿ ಚರ್ಚೆಗೆ ಒಪ್ಪಲಾಗಿದೆ. ಸಭೆಯನ್ನು ಉದ್ದೇಶಿಸಿ ಚಂದ್ರಶೇಖರ್ ಬಾಳೆ, ಉಪಾಧ್ಯಕ್ಷರು, ಮಲ್ಲಯ್ಯ ಜಾಲಹಳ್ಳಿ ಜಿಲ್ಲಾಸಮಿತಿ ಕಾರ್ಯದರ್ಶಿ, ಡಿ. ವೀರನಗೌಡ ಕರ್ನಾಟಕ ಪ್ರಾಂತ ರೈತ ಸಂಘದ ಮಾನ್ವಿ ತಾಲೂಕ್ ಸಮಿತಿ ಅಧ್ಯಕ್ಷರು, ಬಸವನಗೌಡ ದೇಸಾಯಿ ತಾಲೂಕಾ ಸಮಿತಿ ಕಾರ್ಯದರ್ಶಿ, ವೈ. ರಾಮಣ್ಣ ತಾಲೂಕಾ ಸಮಿತಿ ಅಧ್ಯಕ್ಷರುಗಳು ಮಾತನಾಡಿದರು.

ಈ ಬೃಹತ್ ಮೆರವಣಿಗೆಯನ್ನು ರಾಮಲಿಂಗಪ್ಪ ಗೌಡ, ಅಮರೇಶ್ ಪಲಾಚಾರಿ, ಭೀಮಯ್ಯ ಸರಲ್ಲ, ಭೀಮಣ್ಣ ಕ್ಯಾದಿಗ್ಗೇರಿ, ಚನ್ನಪ್ಪಬಾಳೆ, ಬಸವಲಿಂಗಪ್ಪ, ಬಸವರಾಜ ತೇಕೂರ, ಚಂದ್ರಶೇಖರ್ ನಾಡಗೌಡ, ತಿಪ್ಪಯ್ಯ ನಾಯಕ್, ಎಸ್.ಎಫ್.ಐ ನ ಗಿರಿಯಪ್ಪ, ಸಿ.ಐ.ಟಿ.ಯು ನ ಫೌಸ್, ಶಿವಪ್ಪ ಕುರಗೋಡಿ, ರಂಗಪ್ಪ ಲಿಂಗದಳ್ಳಿ, ಕೆ.ರಾಮಣ್ಣ, ಬಸವರಾಜ ಬಂಡಿ, ಶರಣಪ್ಪ ಬಳೆ, ಗೋವಿಂದಪ್ಪ, ಬಸವಲಿಂಗಯ್ಯ, ಯಂಕಪ್ಪ ಪಂಚಾಯಿತಿ, ನರಸಣ್ಣ ತ್ಯಾಪ್ಲಿ ಸಂಘಟಿಸಿದ್ದರು.

ಹಿನ್ನೆಲೆ

ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಜನವರಿ 10 ರಿಂದ ಫೆಬ್ರವರಿ 10 ರವರೆಗೆ ರೈತರ ಸದಸ್ಯತ್ವ ನೊಂದಾವಣೆ ಚಳುವಳಿಯನ್ನು ಹಮ್ಮಿಕ್ಕೊಳ್ಳಲು ಕರೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಪ್ರಾಂತ ರೈತ ಸಂಘದ ರಾಯಚೂರ ಜಿಲ್ಲಾ ಸಮಿತಿ ಸದಸ್ಯತ್ವ ಚಳುವಳಿಯನ್ನು, ಕಾಂಗ್ರೆಸ್ಸು ಹಾಗೂ ಬಿ.ಜೆ.ಪಿ ಯ ಧೋರಣೆಯನ್ನು ಬಯಲಿಗೆಳೆಯಲು, ಸಂಯುಕ್ತರಂಗದ ಕುರಿತು ರೈತರಲ್ಲಿ ಜಾಗೃತಿ ಮೂಡಿಸಲು, ಸದಸ್ಯತ್ವ ನೊಂದಾವಣೆ ಪೂರ್ವದಲ್ಲಿ ಪ್ರಮುಖ ಕಾರ್ಯಕರ್ತರ ಜನರಲ್‌ಬಾಡಿಗಳನ್ನು ನಡೆಸಿ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಚಂದ್ರಶೇಖರ್‌ಬಾಳೆ ಹಾಗೂ ಜಿಲ್ಲಾ ಕಾರ್ಯದರ್ಶಿ ಕಾಡಮಲ್ಲಯ್ಯ ಜಾಲಹಳ್ಳಿಯವರು ತರಬೇತಿ ನಡೆಸಲು ಕರೆನೀಡಿತು.



ಜಿಲ್ಲೆಯನ್ನು ಎರಡು ಭಾಗವಾಗಿ ರಾಜ್ಯಸಮಿತಿ ಪ್ರಾಶಸ್ತ್ಯ ಕೊಟ್ಟ ತಾಲೂಕುಗಳಾದ ದೇವದುರ್ಗದಲ್ಲಿ ಹತ್ತು ಸಾವಿರ ಸದಸ್ಯತ್ವ, ಮಾನ್ವಿ ಐದುಸಾವಿರ ಸದಸ್ಯತ್ವ, ರಾಯಚೂರು ಮೂರು ಸಾವಿರ ಸದಸ್ಯತ್ವ ನೊಂದಾವಣೆಗೆ ಮೊದಲನೇ ಹಂತದ ಫೆಬ್ರವರಿ 10 ರ ನಂತರ ಎರಡನೇ ಹಂತದಲ್ಲಿ ಉಳಿದ ತಾಲೂಕಿಗೆ ಕೇಂದ್ರೀಕರಿಸಲು ಕರೆಕೊಡಲಾಯಿತು.

ನೂತನ ಅನುಭವ

ರಾಜ್ಯ ಹಾಗೂ ಜಿಲ್ಲಾ ಸಮಿತಿಯ ಕರೆಯ ಹಿನ್ನೆಲೆಯಲ್ಲಿ ತಾಲೂಕು ಸಮಿತಿ ಸಭೆಯನ್ನು ಕರೆದು ಹತ್ತು ಸಾವಿರ ಸದಸ್ಯತ್ವವನ್ನು ನೊಂದಾಯಿಸುವ ಕುರಿತು ತೀವ್ರ ಚರ್ಚೆಗೆ ಇಳಿಸಲಾಗಿ ದೇವದುರ್ಗ ತಾಲೂಕಿನ ರೈತರು ಕೃಷಿಕೂಲಿಕಾರರನ್ನು ತೀವ್ರವಾಗಿ ಬಾಧಿಸುವ ಸಮಸ್ಯೆಗಳನ್ನಾಧರಿಸಿ ಕಾರ್ಯಕರ್ತರ ಜನರಲ್ ಬಾಡಿಗಳನ್ನು ಕರೆಯಲು ತೀರ್ಮಾನಿಸಲಾಯಿತು.

ಭೂಮಿಯ ಪ್ರಶ್ನೆಯ ಮೇಲೆ ಮಾನಸಗಲ್ ಗ್ರಾಮದಲ್ಲಿ, ಹಸಿರುಕಾರ್ಡಿನ ಪ್ರಶ್ನೆಯ ಮೇಲೆ ದೇವದುರ್ಗ ತಾಲೂಕಾ ಕೇಂದ್ರದಲ್ಲಿ, ವಿದ್ಯುತ್ ಪ್ರಶ್ನೆಯ ಮೇಲೆ ಜಾಲಹಳ್ಳಿ ಗ್ರಾಮದಲ್ಲಿ, ನೀರಾವರಿಯಿಂದ ವಂಚಿತ ಹಳ್ಳಿಗಳಿಗೆ ಪರ್ಯಾಯ ವ್ಯವಸ್ಥೆಗಾಗಿ ಸಿರವಾರ ಗ್ರಾಮದಲ್ಲಿ ಸಭೆಗಳನ್ನು ಕರೆದು 2000 ಕರಪತ್ರಗಳನ್ನು ಹಾಕಿ 60 ಹಳ್ಳಿಗಳಿಗೆ ತಾಲೂಕು ಮುಖಂಡರು, ಕಾರ್ಯಕರ್ತರು ಭೇಟಿಕೊಟ್ಟು ಕರಪತ್ರಗಳನ್ನು ಹಂಚಿ ಸಭೆಗೆ ಪ್ರಮುಖರನ್ನು ಆಹ್ವಾನಿಸಲಾಯಿತು. ಉಳಿದ ಹಳ್ಳಿಗಳಿಗೆ ಕರಪತ್ರ ಕಳಿಸಿಕೊಡಲಾಯಿತು.

ಕಾರ್ಯಕರ್ತರ ಅಂದಾಜಿಗೆ ಮೀರಿ ಪ್ರತಿಕ್ರಿಯೆ ಬಂದಿತು. ಪ್ರತಿ ಸಭೆಯಲ್ಲೂ 150 ಕ್ಕೂ ಹೆಚ್ಚಿನ ರೈತ ಪ್ರಮುಖರು ಪಾಲ್ಗೊಂಡು ಎಂತಹ ಹೋರಾಟಕ್ಕೂ ತಯಾರಿರುವುದಾಗಿ ಹೇಳುತ್ತಲೇ ತುರ್ತು ಹೋರಾಟಕ್ಕೆ ತಾವು ತಯಾರಿರುವುದಾಗಿ ತಾಲೂಕ ಮುಖಂಡರಿಗೆ ಮನವಿ ಮಾಡಿಕೊಂಡರು.

ಈ ಒತ್ತಡದ ಪರಿಣಾಮವಾಗಿಯೇ ಜ.31ರಂದು ಬೃಹತ್ ಪ್ರದರ್ಶನಕ್ಕೆ ಕರೆಕೊಡಲಾಯಿತು.

ದೇವದುರ್ಗ ಶಾಸಕರನ್ನು ಹಾಗೂ ಮಾಜಿ ಲೋಕಸಭಾ ಸದಸ್ಯರನ್ನು ಈ ಸಭೆಗೆ ಆಹ್ವಾನಿಸಲು ತೀರ್ಮಾನಿಸಲಾಯಿತು.

ನಾಲ್ಕು ಸಭೆಗಳಲ್ಲಿಯೂ ದೀರ್ಘವಾಗಿ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಲಾಯಿತು. ಜೊತೆಗೆ 31-1-98 ರ ಪ್ರದರ್ಶನ ಪ್ರಾಂತರೈತ ಸಂಘ ಹಾಗೂ ಪ್ರಾಂತ ಕೃಷಿಕೂಲಿಕಾರ ಸಂಘದ ಸದಸ್ಯತ್ವ ಹೊಂದಿದವರದ್ದಾಗಿರಬೇಕೆಂಬ ತಿಳುವಳಿಕೆ ನೀಡಲಾಯಿತು. ಆ ಮುಖಾಂತರ ಸದಸ್ಯತ್ವ ಪಡೆಯುವುದು ಅತ್ಯವಶ್ಯ ಭಾಗವೆಂದು ತಿಳುವಳಿಕೆ ನೀಡಲು ಸಾಧ್ಯವಾಯಿತು.

ಪ್ರತಿಗ್ರಾಮಕ್ಕೂ ಸದಸ್ಯತ್ವ ನೊಂದಾವಣೆಗೆ ದಿನಾಂಕ ಹಾಗೂ ಗ್ರಾಮಕ್ಕೆ ಭೇಟಿಕೊಡುವ ಮುಖಂಡರ ಪಟ್ಟಿಯನ್ನು ಮಾಡಲಾಯಿತು.

ಆ ತೀರ್ಮಾನದಂತೆ ರೈತ ಮುಖಂಡರು ಗ್ರಾಮಗಳಿಗೆ ಭೇಟಿ ನೀಡಿದಾಗ, ರೈತರು, ಕೃಷಿಕೂಲಿಕಾರರು ಹಣ ಹಿಡಿದುಕೊಂಡು ಸದಸ್ಯತ್ವ ನೊಂದಾವಣೆಗಾಗಿ ಕಾಯುತ್ತಿರುವುದು, ರೈತ ಮುಂದಾಳುಗಳಿಗೆ ವಿಚಿತ್ರ ಹಾಗೂ ಸಂತೋಷದ ಅನುಭವವಾಗಿತ್ತು. ಕೆಲವು ಮುಖಂಡರು ಅನಿವಾರ್ಯ ಕಾರಣಗಳಿಂದ ದಿನಗೊತ್ತು ಮಾಡಿದ ಹಳ್ಳಿಗಳಿಗೆ ಬಾರದ ಕಾರಣ ರೈತರು ನಿರಾಶರಾಗಿ, ತಾಲೂಕಾ ಮುಖಂಡರನ್ನು ಹುಡುಕಿಕೊಂಡು ಬಂದು ಮತ್ತೊಂದು ದಿನವನ್ನು ಗೊತ್ತುಮಾಡಿಕೊಂಡು ಹೋದದ್ದು ಸಂಘಟಕರ ಆತ್ಮಬಲ ಹೆಚ್ಚಾಗಲು ಕಾರಣವಾಗಿದೆ.

ಒಂದೇ ವಾರದಲ್ಲಿ ತಾಲೂಕಿನಲ್ಲಿ 7000 ಸದಸ್ಯತ್ವ ನೊಂದಾವಣೆಯಾಗಿದ್ದು, ನೀರಾವರಿಗಾಗಿ ಬಂದಿರುವ ಹೊಸ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ದಮನಕಾರಿ ನೀತಿಯಿಂದಾಗಿ ಹಿನ್ನಡೆಯಾಗಿದೆ. ಚುನಾವಣೆ ಮುಗಿಯುತ್ತಲೇ ಎರಡನೇ ಸುತ್ತಿನ ಸದಸ್ಯತ್ವಕ್ಕಾಗಿ ಯೋಜನೆ ರೂಪಿಸಲಾಗಿದ್ದು, ಕಾರ್ಯಕರ್ತರು ಹುರುಪಿನಿಂದ ಆ ಸಮಯಕ್ಕಾಗಿ ಕಾಯುತ್ತಿದ್ದಾರೆ.

ಚುನಾವಣೆ ಮುಗಿಯುತ್ತಲೇ ಸದಸ್ಯತ್ವ ಪಡೆಯದವರು ಸದಸ್ಯರಾಗಲು ಹಾಗೂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ತವಕರಾಗಿದ್ದುದು, 31 ರಂದು ನಡೆದ ಪ್ರದರ್ಶನದಲ್ಲಿ ಹಾಗೂ ನಂತರದ ಚುನಾವಣೆಯ ಪ್ರಚಾರಕ್ಕೆ ಸಂಗಾತಿಗಳು ಹೋದಾಗ ವ್ಯಕ್ತವಾಗುತ್ತಿರುವುದು ಸಾಮಾನ್ಯ ಅನುಭವವಾಗಿತ್ತು.

ಈ ಚಳುವಳಿ ತಾಲೂಕಿನಲ್ಲಿ ಕೆಂಬಾವುಟದ ರಾಜಕೀಯಕ್ಕೆ ದಾಪುಗಾಲು ಹಾಕುವಂತಾಗಿದೆ.

ಕರ್ನಾಟಕದಲ್ಲಿ

ಫೆಬ್ರವರಿ 20

➤ ರಾಜ್ಯದ ಉಳಿದ 10 ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಕಾರ್ಯ ಅಂತ್ಯ.

ಫೆಬ್ರವರಿ 21

➤ ಜನತಾದಳ ಎರಡು ಅಥವಾ ಮೂರು ಸ್ಥಾನ ಗಳಿಸಿದರೆ ಹೆಚ್ಚು, ದಳದ ನಾಯಕರು ಹೇಳಿರುವಂತೆ 18 ಸ್ಥಾನಗಳಿಸಿದರೆ ರಾಜೀನಾಮೆ ನೀಡುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು.

ಫೆಬ್ರವರಿ 22

➤ ರಾಯಚೂರಿನ ಕ್ಷೇತ್ರದಲ್ಲಿ ರಿಗ್ಗಿಂಗ್ ಚುನಾವಣಾಧಿಕಾರಿಗಳ ಮೇಲೆ ಹಲ್ಲೆ, ದಾವಣಗೆರೆ ಕ್ಷೇತ್ರದಲ್ಲಿ ಮತಪೆಟ್ಟಿಗೆ ಅಪಹರಣ, ಕೆಲವೆಡೆ ಬಹಿಷ್ಕಾರ ಬಿಟ್ಟರೆ ರಾಜ್ಯದ ಉಳಿದ 10 ಕ್ಷೇತ್ರಗಳಲ್ಲಿ ಶಾಂತ ಮತದಾನ. ಒಟ್ಟಾರೆಯಾಗಿ 57% ಮತದಾನ. ಕೋಲಾರದಲ್ಲಿ ಅತಿ ಹೆಚ್ಚು 72.27% ಬೀದರಿನಲ್ಲಿ ಅತಿಕಡಿಮೆ 51.31%

➤ ಲೋಕಸಭಾ ಚುನಾವಣೆಗಳಲ್ಲಿ ಅಭಿವೃದ್ಧಿ ಕೆಲಸಗಳ ಬಗ್ಗೆ ಪ್ರಸ್ತಾಪಿಸದೆ ವ್ಯಕ್ತಿಗತ ಟೀಕೆ, ಜಾತಿ ಮತ್ತಿತರ ವಿಷಯಗಳಿಗೇ ಪ್ರಾಧಾನ್ಯತೆಯಿಂದ ತನಗೆ ಭ್ರಮನಿರಸನವಾಗಿದೆ ಎಂದು ರಾಜ್ಯ ಜನತಾದಳದ ಅಧ್ಯಕ್ಷರು

ಫೆಬ್ರವರಿ 23

➤ ನಿನ್ನೆ ನಡೆದ ಚುನಾವಣಾ ನಡೆದ ಕ್ಷೇತ್ರಗಳಲ್ಲಿ 36 ಮತಗಟ್ಟೆಗಳಲ್ಲಿ ಫೆಬ್ರವರಿ 27 ರಂದು ಮರುಮತದಾನ ನಡೆಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳು.

ಫೆಬ್ರವರಿ 25

➤ ರಾಜ್ಯದಲ್ಲಿ 'ಲೋಕವೂ ಇಲ್ಲ ಶಕ್ತಿಯೂ ಇಲ್ಲವಾದ್ದರಿಂದ ಲೋಕಶಕ್ತಿಗೆ ಒಂದು ಸ್ಥಾನವೂ ಇಲ್ಲ ಎಂದು ಬೊಮ್ಮಾಯಿ.

➤ ಪಕ್ಷಾಂತರ ನಿಷೇಧ ಕಾನೂನಿನ ಅನ್ವಯ ನೋಟೀಸಿಗೆ ನಾಲ್ಕು ಮಾಜಿ ಸಚಿವರುಗಳಿಂದ ಇನ್ನೂ ಉತ್ತರ ಬರಲಿಲ್ಲ ಎಂದು ಸ್ಪೀಕರ್.

ಫೆಬ್ರವರಿ 26

➤ ಲೋಕಸಭಾ ಚುನಾವಣೆಯಲ್ಲಿ ಜನತಾದಳ 10 ಕ್ಕಿಂತ ಕಡಿಮೆ ಸ್ಥಾನಗಳಿಸಿದರೆ ತಾನು ನೈತಿಕ ಹೊಣೆ ಹೊರಲು ಸಿದ್ಧ ಎಂದು ಮುಖ್ಯಮಂತ್ರಿಗಳು.

➤ ಪಕ್ಷಾಂತರ ನಿಷೇಧ ಕಾನೂನಿನ್ವಯ ಮಾಜಿ ಸಚಿವರಾದ ದೇಶಪಾಂಡೆ, ಸರನಾಯಕರವರಿಗೆ 2ನೇ ಬಾರಿ ನೋಟಿಸು.

➤ ಸೋನಿಯಾಗಾಂಧಿ ಅಲೆಯಿಂದ 18 ಅಥವಾ ಅದಕ್ಕೂ ಹೆಚ್ಚು ಸ್ಥಾನ ಗಳಿಸುವುದಾಗಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ವಿಶ್ವಾಸ.•

ಹುತಾತ್ಮರ ದಿನಾಚರಣೆ

ಜನತೆಯ ಗಮನವೆಲ್ಲ ಲೋಕಸಭಾ ಚುನಾವಣೆಯತ್ತ ಕೇಂದ್ರೀಕೃತಗೊಂಡಿದ್ದರೆ ಮೈಸೂರು ರಸ್ತೆಯ ಕೈಗಾರಿಕಾ ಕಾರ್ಮಿಕರು 1997ರ ಫೆಬ್ರವರಿ 3 ರಂದು ವಳ್ಳಿಯಪ್ಪ ಕಾರ್ಖಾನೆಯ ಮಾಲೀಕರ ಅಣತಿಯಂತೆ ಪೋಲಿಸ್ ನಡೆಸಿದ ಗೋಲಿಬಾರಿಗೆ ಪ್ರಾಣತೆತ್ತ ಕಾರ್ಮಿಕರಾದ ನಾಗರಾಜು, ಕೃಷ್ಣಪ್ಪ ಹಾಗೂ ಸೀತಾರ ಹುತಾತ್ಮದಿನಾಚರಣೆಗಾಗಿ ಫೆಬ್ರವರಿ 3 ರಂದು ಕಾರ್ಖಾನೆಯ ಮುಂದೆ ಸಮಾವೇಶ ಗೊಂಡಿದ್ದರು.

ಕಾರ್ಯಕ್ರಮದ ಭಾಗವಾಗಿ ರಾಮೊಳ್ಳಿ ಕ್ರಾಸ್ ಹಾಗೂ ಬಿಲ್ಲಕೆಂಪನ ಹಳ್ಳಿಯಿಂದ ಮೆರವಣಿಗೆ ನಡೆಯಿತು. ಕಾಂ|| ಸೂರಿಯವರು ಧ್ವಜರೋಹಣ ಮಾಡುವುದರೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕರಾದ ಶ್ರೀರಾಮರೆಡ್ಡಿ ಕಾರ್ಮಿಕರು ಅನೇಕ ಕ್ಷೇತ್ರಗಳಲ್ಲಿ ಸಂಘಟಿತರಾಗದಿರುವುದರಿಂದ ಬಂಡವಾಳಿಗರ ದಮನ ಬೆಳೆಯತೊಡಗಿದೆ ಎಂದರು.

ವಿಜೆಕೆ ನಾಯರ್ ಮಾತನಾಡಿ ಆ ಹೋರಾಟಕ್ಕೆ ವೀಕ್ಷಕನಾಗಿ ಬಂದ ನನಗೆ ರಕ್ಷಣೆ ಕೊಡುತ್ತೇವೆಂದು ಹೇಳಿ ಅವರು ಕೊಟ್ಟ ಹಿಂಸೆಯನ್ನು ಇದೇ ಸಂದರ್ಭದಲ್ಲಿ ನೆನಪಿಸಿಕೊಂಡ ಅವರು ಪೋಲೀಸರ ದ್ವಿಮುಖ ನೀತಿಯನ್ನು ಖಂಡಿಸಿದರು. ರೈತ ಸಂಘದ ಪಿ.ಜಗನ್ನಾಥ್ ಮಾತನಾಡಿ ವಳ್ಳಿಯಪ್ಪ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಎಂ. ರಾಜಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಎಸ್. ವರಲಕ್ಷ್ಮಿ ಪ್ರಸ್ತಾವನೆ ಭಾಷಣ ಮಾಡಿದರೆ ನಂಜುಂಡಯ್ಯ ಸ್ವಾಗತಿಸಿ ಎಸ್.ಆರ್.ಕೆ ಪ್ರಸಾದ್ ವಂದನೆ ಸಲ್ಲಿಸಿದರು.

ಹುತಾತ್ಮ ಸಂಗಾತಿಗಳ ನೆನಪಿಗಾಗಿ ಹೆಜ್ಜಾಲ ಕಾಲೋನಿಯಲ್ಲಿ ಸ್ಮಾರಕ ಕಂಬಗಳನ್ನು ನಿಲ್ಲಿಸಲಾಗಿತ್ತು. ಹೋರಾಟದ ಸಂಕೇತವೆಂಬಂತೆ ಕೆಂಪು ತೋರಣಗಳಿಂದ ಈ ಪ್ರದೇಶವನ್ನು ಅಲಂಕರಿಸಲಾಗಿತ್ತು. ಇದೇ ಸಂದರ್ಭದಲ್ಲಿ ಹುತಾತ್ಮರ ಮನೆಯವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮಕ್ಕೆ ಮೈಸೂರು ವೈನ್ಸ್, ಪೆಪ್ಸಿ, ಸಿಸ್ಟಮ್ ಡೈಮೆನ್‌ಷನ್, ಡೈಟಕ್ ಟೂಲ್ಸ್, ವಳಿಯಪ್ಪ ಸಲ್ಸಿಸ್ ಕಂಪನಿ, ವಳಿಯಪ್ಪ ಟೆಕ್ಸ್‌ಟೈಲ್ಸ್ ಜೊತೆಗೆ ಮೈಸೂರು ರಸ್ತೆ ಕಾರ್ಮಿಕರು ಕೆಲಸಕ್ಕೆ ಗೈರು ಹಾಜರಾಗಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಎಸ್.ಐ.ಮುನವಳ್ಳಿಗೆ ಸಿಪಿಐ(ಎಂ) ಬೆಂಬಲ

ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಉತ್ತರ ಕ್ಷೇತ್ರದಿಂದ ಸಂಯುಕ್ತ ರಂಗದ ಪರವಾಗಿ ಜನತಾ ದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶಂಕರಣ್ಣ ಮುನವಳ್ಳಿ ಅವರಿಗೆ ಸಿ.ಪಿ.ಐ.(ಎಂ) ಧಾರವಾಡ ಜಿಲ್ಲಾ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಧಾರವಾಡ ಉತ್ತರ ಕ್ಷೇತ್ರದಲ್ಲಿ ಸಿಪಿಐ(ಎಂ) ಮತ್ತು ಎಡ ಪಂಥೀಯ ಕಾರ್ಮಿಕ ಹಾಗೂ ಇತರ ಸಾಮೂಹಿಕ ಸಂಘಟನೆಗಳು, ಬೀಡಿ, ನೇಕಾರ, ವಿವಿಧ ಕೈಗಾರಿಕಾ, ಗ್ರಾಮ ಪಂಚಾಯತಿ ಕಾರ್ಮಿಕರ ಮತ್ತು ವಿಮಾ, ಬ್ಯಾಂಕು, ಟೆಲಿಕಾಂ, ಅಂಚೆ, ರೈಲ್ವೆ ಮತ್ತಿತರ ಸಂಸ್ಥೆಗಳ ನೌಕರರ ಮಧ್ಯ ಹಾಗೂ ಹೈಸ್ಕೂಲ್, ಕಾಲೇಜು ವಿಶ್ವವಿದ್ಯಾಲಯಗಳ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಮಧ್ಯೆ ಬಿರುಸಿನ ಚುನಾವಣಾ ಪ್ರಚಾರ ನಡೆಸಿದೆ.

ಹಲವು ಬಾರಿ ಧಾರವಾಡ ಉತ್ತರ ಮತಕ್ಷೇತ್ರದಿಂದ ಕಾಂಗ್ರೆಸ್ಸಿನಿಂದ ಆಯ್ಕೆಗೊಂಡ ಮತ್ತು ಕಳೆದ ಬಾರಿ ದಯನೀಯ ಸೋಲು ಅನುಭವಿಸಿದ ಡಿ.ಕೆ.ನಾಯ್ಕರ್ ಈ ಪ್ರದೇಶದ ಜನರಿಗೆ ಯಾವುದೇ ಗಮನಾರ್ಹವಾದ ಸೇವೆ ಮಾಡಲಿಲ್ಲವೆಂದು ಸಿಪಿಐ(ಎಂ) ಆಪಾದಿಸಿದೆ. ಹಾಗೆಯೇ ಕಳೆದ ಚುನಾವಣೆಯಲ್ಲಿ ಬಿ.ಜೆ.ಪಿ.ಯ ವಿಜಯ ಸಂಕೇಶ್ವರ ಗೆದ್ದಿದ್ದರೂ ಈ ಕ್ಷೇತ್ರದ ಜನಸಾಮಾನ್ಯರ ಸಂಪರ್ಕ ಇಟ್ಟುಕೊಂಡು ಅವರ ಆಶೋತ್ತರಗಳನ್ನು ಈಡೇರಿಸಲು ವಿಫಲರಾಗಿದ್ದಾರೆ ಎಂದು ತಿಳಿಸಿದೆ.

ಎಸ್‌ಎಫ್‌ಐ 10ನೇ ದ.ಕ. ಜಿಲ್ಲಾ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಶನ್‌ನ ದಕ್ಷಿಣ ಕನ್ನಡ 10ನೇ ಜಿಲ್ಲಾ ಸಮ್ಮೇಳನವು ಜನವರಿ 31 ರಂದು ಮಂಗಳೂರಿನ ಕಾಂ|| ಭಾಸ್ಕರ್ ಕುಂಬ್ಳೆ ನಗರದಲ್ಲಿ ಯಶಸ್ವಿಯಾಗಿ ನಡೆಯಿತು.

ಚರ್ಚೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿ ಪ್ರತಿನಿಧಿಗಳು ಜಿಲ್ಲೆಯ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ವಿಷಯಗಳ ಬಗ್ಗೆ ಚರ್ಚಿಸಿ ಹಲವು ನಿರ್ಣಯಗಳನ್ನು ಕೈಗೊಂಡಿತು.

ಮಂಗಳೂರು ವಿ.ವಿ.ಯಲ್ಲಿನ ಶುಲ್ಕ ಹೆಚ್ಚಳ ಕೈಬಿಡಬೇಕು, ಪರೀಕ್ಷಾ ಹಾಗೂ ಮೌಲ್ಯಮಾಪನ ಗೊಂದಲ ನಿವಾರಣೆ, ಮರುಮೌಲ್ಯಮಾಪನದ 250 ರೂಗಳನ್ನು ಕಡಿತಗೊಳಿಸಬೇಕು, ಸಿಂಡಿಕೇಟ್ ಹಾಗೂ ಸೆನೆಟ್‌ಗಳಿಗೆ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಹಾಗೂ ಕೊಡಗಿನಲ್ಲಿ ವಿ.ವಿ ಆಡಳಿತದ ಉಪಕೇಂದ್ರ ಸ್ಥಾಪನೆ ಮತ್ತು ಅಧ್ಯಾಪಕರ ಕೊರತೆ ನೀಗಿಸಲು ಸಮ್ಮೇಳನ ಒತ್ತಾಯಿಸಿದೆ.

ಅಶ್ಲೀಲ ಭಿತ್ತಿ ಚಿತ್ರಗಳ ಹಾವಳಿ, ಜಿಲ್ಲೆಯಲ್ಲಿ ಬ್ಲೂಫಿಲಂ ಜಾಲ ತಲೆ ಎತ್ತಿದ್ದು ಕೀಳು ಸಾಹಿತ್ಯ ಉತ್ಪಾದನೆ ಹೆಚ್ಚುವುದನ್ನು ತಡೆಗಟ್ಟುವಂತೆ ಸಮ್ಮೇಳನ ಆಗ್ರಹಿಸಿದೆ.

ಜಿಲ್ಲೆಯಲ್ಲಿ ಉದ್ಯೋಗವಕಾಶ ಹೆಚ್ಚಿಸುವ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಸಮ್ಮೇಳನ ನಿರ್ಣಯ ಅಂಗೀಕರಿಸಿದೆ.

ನೂತನ ಜಿಲ್ಲಾ ಸಮಿತಿ

ಅಧ್ಯಕ್ಷರು ಹರಿಪ್ರಸಾದ್ ರೈ, ಉಪಾಧ್ಯಕ್ಷರು ಪ್ರಮಿಳಾ.ಕೆ, ಪ್ರಶಾಂತ್ ಹೆಗ್ಡೆ ಅಬ್ದುಲ್ ರಶೀದ್, ಕಾರ್ಯದರ್ಶಿ-ಸುನೀಲ್ ಕುಮಾರ್ ಬಜಾಲ್, ಸಹಕಾರ್ಯದರ್ಶಿಗಳಾಗಿ ದೀಪಕ್ ಬಜಾಲ್, ವಿನಾಯಕ್.ಕೆ, ಜೂಡಿ ವಿವಿಯನ್ ಮೆನೋಜಸ್ ಮತ್ತು ಕಾರ್ಯದಶಿ ಮಂಡಳಿ ಸದಸ್ಯರಾಗಿ ಆಶಾ.ಡಿ, ಕ್ಯಾಸ್ಟಲಸ್ ಜೂನಿಯರ್ ಆಯ್ಕೆಗೊಂಡಿದ್ದಾರೆ.

ವಿದ್ಯಾರ್ಥಿನಿಯರ ಉಪಸಮಿತಿ

ಇದೇ ಸಂದರ್ಭದಲ್ಲಿ ಜಿಲ್ಲಾ ವಿದ್ಯಾರ್ಥಿನಿಯರ ಉಪಸಮಿತಿಯನ್ನು ಕೂಡ ಪುನರ್‌ರಚಿಸಲಾಯಿತು. ಸಂಚಾಲಕಿಯಾಗಿ ಪ್ರಮಿಳಾ.ಕೆ, ಸಹ ಸಂಚಾಲಕಿಯಾಗಿ ಶ್ರೀಲತಾ, ಆಶಾ.ಡಿ, ಸುಮಂಗಳಾ, ಸದಸ್ಯರುಗಳಾಗಿ ಪ್ರಿಯಾದರ್ಶಿನಿ, ಗಾಯತ್ರಿ, ಭಾಗೀರಥಿ ರಜನಿ, ರೋಹಿಣಿ, ಕ್ರೀಸಿ ಮತ್ತು ರೇಷ್ಮಾರವರು ಆಯ್ಕೆಯಾಗಿದ್ದಾರೆ.

ಸ್ವಾತಂತ್ರ್ಯ ಆಂದೋಲನದ ಆಶಯಗಳನ್ನೇ ವಿರೋಧಿಸಿದವರಿವರು

ವಾಜಪೇಯಿ, ಅಡ್ವಾಣಿ ಮತ್ತು ಬಿಜೆಪಿಯ ಹೊಚ್ಚ ಹೊಸ ಸಿದ್ಧಾಂತಿ ಗೋವಿಂದಾಚಾರ್ಯ ಇತ್ತೀಚಿನ ದಿನಗಳಲ್ಲಿ ಬಿಜೆಪಿಯೂ ಸ್ವಾತಂತ್ರ್ಯ ಹೋರಾಟದ ಭಾಗವಾಗಿತ್ತು, ಅದೀಗ ಈ ಹೋರಾಟದ ಉದ್ದೇಶಗಳ ಈಡೇರಿಕೆಯ ಹೋರಾಟವನ್ನು ಮುಂದೊಯ್ಯಲು ಅತ್ಯಂತ ಸೂಕ್ತ ಪಕ್ಷ ಎಂದು ನಂಬಿಸಲು ಪ್ರಯತ್ನಿಸುತ್ತಿದ್ದಾರೆ. ಸುದ್ದಿ ಮಾಧ್ಯಮದ ಹಲವರು ಅದಕ್ಕೆ ಮಾನ್ಯತೆಯನ್ನು ನೀಡಿದ್ದಾರೆ. ಆದರೆ ನಿಜ ಸಂಗತಿ ಮಾತ್ರ ತದ್ವಿರುದ್ಧ, ಇಲ್ಲಿ ಓದಿ

ಬಿಜೆಪಿಯ ಮುಖಂಡರೆನಿಸುವ ಎಲ್ಲರೂ ಆರ್.ಎಸ್.ಎಸ್.ಗೆ ಸೇರಿದವರಷ್ಟೇ ಅಲ್ಲ, ಆರ್.ಎಸ್.ಎಸ್. ಕೂಡಾ ವಿ.ಹೆಚ್.ಪಿ., ಭಜರಂಗದಳ, ದುರ್ಗಾ ವಾಹಿನಿ ಇತ್ಯಾದಿಗಳೊಂದಿಗೆ ಬಿಜೆಪಿಯೂ ತನ್ನ 'ಪರಿವಾರ'ಕ್ಕೆ ಸೇರಿದ್ದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. 1977 ರಲ್ಲಿ ಅವಸಾನಗೊಂಡ ಜನಸಂಘ ಮತ್ತು 1980 ರಲ್ಲಿ ರಚನೆಗೊಂಡ ಬಿಜೆಪಿ ಎರಡೂ ಆರ್.ಎಸ್.ಎಸ್. ಸೃಷ್ಟಿ. ಹಾಗಿದ್ದರೆ ಈ ಆರ್.ಎಸ್.ಎಸ್. ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರವೇನು?

ಆರ್.ಎಸ್.ಎಸ್. ಸ್ಥಾಪಿಸಿದವರು ಕೆ.ಬಿ.ಹೆಡ್ಗೆವಾರ್ - 1925 ರಲ್ಲಿ ತಾನು ಕ್ರಾಂತಿಕಾರಿ, ರಾಷ್ಟ್ರೀಯವಾದಿ ಚಟುವಟಿಕೆಗಳಲ್ಲಿ ಹಿಂದೆ ತೊಡಗಿದ್ದವನು ಎಂದು ಇವರು ಹೇಳಿಕೊಂಡರೂ ಅದನ್ನು ಸಾಬೀತುಪಡಿಸುವ ದಾಖಲೆಗಳೇನೂ ಸಿಗುವುದಿಲ್ಲ. ಅಸಹಕಾರ ಆಂದೋಲನದಲ್ಲಿ ಒಂದು ಪ್ರಖರ ಭಾಷಣಕ್ಕಾಗಿ ಬಂಧಿಸಲಾಯಿತು ಎಂಬ ಒಂದು ಸಂಗತಿ ಮಾತ್ರ ಸಿಕ್ಕಿದೆ. 1922 ರ ನಂತರ ಹೆಡ್ಗೆವಾರ್ ಬಿ.ಎಸ್.ಮೂಂಜೆ ಎಂಬುವರ ಅನುಯಾಯಿಯಾದರು. ಆರ್.ಎಸ್.ಎಸ್. ಸ್ಥಾಪಿಸಿದ್ದು ಅವರ ಸಹಯೋಗ ದಿಂದಲೇ, ಆದರೆ ಹೆಡ್ಗೆವಾರ್‌ರವರಿಗೆ ಆರ್.ಎಸ್.ಎಸ್. ನ ಮೊದಲ 'ಸರಸಂಘಚಾಲಕ' ರ ಜವಾಬ್ದಾರಿ ಒಪ್ಪಿಸಲಾಯಿತು.

ಆರ್.ಎಸ್.ಎಸ್. ಸ್ಥಾಪಿಸಿದ್ದೇಕೆ?

ಈ ಸಂಘಟನೆಗೆ ಒಂದು ಸಂವಿಧಾನವಿಲ್ಲವಾದ್ದರಿಂದ ಸ್ಥಾಪಕ ಹೆಡ್ಗೆವಾರ್‌ರವರ ಮಾತುಗಳೇ ನಮಗೆ ಇದನ್ನರಿಯಲು ಇರುವ ಆಧಾರ. ಅವರ ಪ್ರಕಾರ ಆರ್.ಎಸ್.ಎಸ್.ನ ಉದ್ದೇಶ 'ಅಸಹಕಾರದ ಹಾಲಿನಿಂದ ಪೋಷಣೆ ಪಡೆದು ದೇಶದಲ್ಲಿ ದಂಗೆಗಳನ್ನು ಪ್ರಚೋದಿಸುತ್ತಾ ಬುಸುಗುಡುವ ಯವನಸರ್ಪಗಳನ್ನು" ವಿರೋಧಿಸುವುದು. ಯವನ ಸರ್ಪಗಳೆಂದರೆ ಮುಸ್ಲಿಮರು ಎಂದು ಬೇರೆ ಹೇಳಬೇಕಾಗಿಲ್ಲ.

ಆರ್.ಎಸ್.ಎಸ್. ಸ್ಥಾಪನೆಯಾದ ಸ್ವಲ್ಪವೇ ದಿನಗಳಲ್ಲಿ ಇಡೀ ದೇಶದಲ್ಲಿ ಸೈಮನ್ ಆಯೋಗಕ್ಕೆ ಬಹಿಷ್ಕಾರದ ಕೂಗು ಮೊಳಗಿತ್ತು; ಇದರಲ್ಲಿ ಲಾಲಾ ಲಜಪತರಾಯ್ ಹುತಾತ್ಮರಾದರು(1928) ಮರುವರ್ಷ ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್, ಅವರ ಸಂಗಾತಿಗಳಾದ ರಾಜಗುರು ಹಾಗೂ ಸುಖದೇವ್ ಬಂಧಿತರಾದರು. 1931 ರಲ್ಲಿ ಅವರನ್ನು ಗಲ್ಲಿಗೇರಿಸಲಾಯಿತು. 1929 ರಲ್ಲೇ ದೇಶಾದ್ಯಂತ 32 ಕಮ್ಯುನಿಸ್ಟರನ್ನು ಬಂಧಿಸಿ 'ಬ್ರಿಟಿಶ್ ಭಾರತದ ಸಾರ್ವಭೌಮತ್ವದಿಂದ ರಾಜನನ್ನು ವಂಚಿತಗೊಳಿಸುವ' ಪಿತೂರಿ ಹೂಡಿದ ಆಪಾದನೆ ಹಾಕಿ ಭಾರೀ ಶಿಕ್ಷೆ ವಿಧಿಸಲಾಯಿತು. ಮುಝಫ್ಫರ್ ಅಹ್ಮದ್‌ರವರಿಗೆ ಜೀವಾವಧಿ ಕರಿನೀರಿನ ಶಿಕ್ಷೆಯಾಯಿತು. ಜನವರಿ 30, 1930 ರಂದು ಸಾವಿರಾರು ಭಾರತೀಯರು ಸ್ವಾತಂತ್ರ್ಯದ ಪ್ರತಿಜ್ಞೆ ಕೈಗೊಂಡರು. 90000 ಕ್ಕೂ ಹೆಚ್ಚು ಭಾರತೀಯರು 'ವಂದೇ ಮಾತರಂ' ಮತ್ತಿತರ ರಾಷ್ಟ್ರೀಯ ಘೋಷಣೆಗಳನ್ನು ಕೂಗುತ್ತಾ ಮಹಾತ್ಮ ಗಾಂಧಿಯವರೊಂದಿಗೆ ಜೈಲಿಗೆ ಹೋದರು - ಅವರಲ್ಲಿ ಹಲವರ ಆಸ್ತಿ-ಪಾಸ್ತಿಗಳನ್ನು ಜಪ್ತಿ ಮಾಡಲಾಯಿತು.

> *1938 ರಲ್ಲಿ ಪ್ರಕಟವಾದ ಗೋಲ್ವಾಲ್ಕರ್‌ರವರ*
> *"We, Our Nationhood Defined'*
> ಆರ್.ಎಸ್.ಎಸ್. ನ ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿತ್ತು. ಎರಡು ವರ್ಷಗಳ ನಂತರವಷ್ಟೇ ಮುಸ್ಲಿಂ ಲೀಗ್ ಲಾಹೋರ್ ನಿರ್ಣಯವನ್ನು ಅಂಗೀಕರಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು.

ನಿಷ್ಕ್ರಿಯ ಪ್ರೇಕ್ಷಕ

ದೇಶದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದಾಗ ಆರ್.ಎಸ್.ಎಸ್. ಏನು ಮಾಡುತ್ತಿತ್ತು? ನಿಷ್ಕ್ರಿಯ ಪ್ರೇಕ್ಷಕನಂತಿತ್ತು. ಇದು ಸಹಜವೂ ಆಗಿತ್ತು. ಏಕೆಂದರೆ ಅವರ ಸಹಸಂಸ್ಥಾಪಕರಾದ ಮೂಂಜೆ ಬ್ರಿಟಿಶ್ ಸರಕಾರದೊಂದಿಗೆ 'ಸ್ಪಂದನ ಶೀಲ ಸಹಕಾರ' ವನ್ನು ಪ್ರತಿಪಾದಿಸುತ್ತಿದ್ದವರಲ್ಲಿ ಒಬ್ಬರು. ಇಡೀ ದೇಶದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿ ಪ್ರಜ್ವಲಿಸುತ್ತಿದ್ದಾಗ ಬ್ರಿಟಿಶರ ಆಹ್ವಾನದ ಮೇರೆಗೆ 'ಹಿಂದುಗಳ ಪರವಾಗಿ' ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಹೋದ ವ್ಯಕ್ತಿಯವರು.

ಆದರೂ ಸ್ವಾತಂತ್ರ್ಯ ಆಂದೋಲನದ ಬಿರುಸಿನಿಂದಾಗಿ ಎಂ.ಎಸ್.ಅಣೆಯಂತಹ ಬ್ರಿಟಿಶರೊಂದಿಗೆ ಸಹಕಾರವನ್ನು ಪ್ರತಿಪಾದಿಸುತ್ತಿದ್ದವರೂ ಜೈಲಿಗೆ ಹೋಗಬೇಕಾಗಿ ಬಂದಾಗ ಹೆಡ್ಗೆವಾರ್ ಕೂಡಾ ಅವರನ್ನು ಅನುಸರಿಸಿದರು. ಅವರ ರಾಷ್ಟ್ರೀಯವಾದಿ ಚಟುವಟಿಕೆ ಇಷ್ಟಕ್ಕೆ ಸೀಮಿತವಾಗಿತ್ತು. ಜನವರಿ 30, 1930 ರಂದು ಎಲ್ಲೆಡೆ ರಾಷ್ಟ್ರೀಯ ತ್ರಿವರ್ಣಧ್ವಜ ಹಾರಿಸಿ ಪ್ರತಿಜ್ಞೆ ಕೈಗೊಳ್ಳಬೇಕೆಂದು ಕಾಂಗ್ರೆಸ್ ಕರೆ ನೀಡಿದಾಗ ತಮ್ಮದೇ ಪ್ರತ್ಯೇಕ ಸಭೆಗಳಲ್ಲಿ ಭಗವಾಝುಂಡಾ ಹಾರಿಸಿದ ಆರ್.ಎಸ್.ಎಸ್. ಮಂದಿ 1931 ರಲ್ಲಿ ಮೂಂಜೆಯವರಿಂದ ಮೊದಲ ದುಂಡುಮೇಜಿನ ಪರಿಷತ್ತಿನ 'ಸಾಧನೆ'ಗಳನ್ನು ಕೇಳುವುದಕ್ಕೇ ಹೆಚ್ಚು ಕಾತುರದಿಂದಿದ್ದರು!

ದ್ವಿರಾಷ್ಟ್ರ ಸಿದ್ಧಾಂತ - ಮೊದಲು ಪ್ರತಿಪಾದಿಸಿದವರಾರು?

ಇದರ ನಂತರ ರಾಷ್ಟ್ರೀಯ ಆಂದೋಲನದ ವಿರುದ್ಧ ಅವರು ಬಹಿರಂಗವಾಗಿಯೇ ವಿಷಕಾರಲಾಂಭಿಸಿದರು. 1940 ರಲ್ಲಿ ಹೆಡ್ಗೆವಾರ್ ಮರಣದ ನಂತರ ಅವರೇ ಆರಿಸಿದ ಎಂ.ಎಸ್. ಗೋಲ್ವಾಲ್ಕರ್ ಆರ್.ಎಸ್.ಎಸ್.ನ ಮುಖ್ಯಸ್ಥ ಅಂದರೆ 'ಸರಸಂಘ ಚಾಲಕ' ಆದರು. 1931 ರಲ್ಲಿ ಆರ್.ಎಸ್.ಎಸ್. ಸೇರಿದ ಇವರು ಅದುವರೆಗೆ ಸರ್‌ಕಾರ್ಯವಾಹ(ಪ್ರಧಾನ ಕಾರ್ಯದರ್ಶಿ) ಯಾಗಿದ್ದವರು. ಇವರಂತೂ ಎಂದೂ ಯಾವುದೇ ರಾಷ್ಟ್ರೀಯವಾದಿ ಚಳುವಳಿಯಲ್ಲಿ ಭಾಗವಹಿಸಿದವರಲ್ಲ, ಬ್ರಿಟಿಶರ ಜೈಲು ಹೇಗಿರುತ್ತದೆ ಎಂದು ಕಂಡವರಲ್ಲ. ಇವರು ಹೆಡ್ಗೆವಾರ್‌ನ ಉತ್ತರಾಧಿಕಾರಿಯಾಗಲು ಏಕೈಕ ಕಾರಣ ಅವರು ಪ್ರತಿಪಾದಿಸಿದ ಎರಡು ರಾಷ್ಟ್ರಗಳ ಸಿದ್ಧಾಂತ ಹಾಗೂ ರಾಷ್ಟ್ರೀಯ ಮುಖಂಡತ್ವದ ಬಗ್ಗೆ ಅವರಿಗಿದ್ದ ದ್ವೇಷ. ಇಂತಹವರ ನೇತೃತ್ವದಲ್ಲಿ ಯಾವುದೇ ಸಂಘಟನೆ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಎಂತಹ ಪಾತ್ರವನ್ನು ವಹಿಸಬಲ್ಲದು?

1938 ರಲ್ಲಿ ಪ್ರಕಟವಾದ ಗೋಲ್ವಾಲ್ಕರ್‌ರವರ "We, Our Nationahood Defined' (ನಾವು, ನಮ್ಮ ರಾಷ್ಟ್ರೀಯತ್ವದ ನಿರ್ವಚನೆ) ಆರ್.ಎಸ್.ಎಸ್. ನ ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿತ್ತು. ಎರಡು ವರ್ಷಗಳ ನಂತರವಷ್ಟೇ ಮುಸ್ಲಿಂ ಲೀಗ್ ಲಾಹೋರ್ ನಿರ್ಣಯವನ್ನು ಅಂಗೀಕರಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಒಳ್ಳೆಯದು. ಏಕೆಂದರೆ ಮುಸ್ಲಿಂ ಲೀಗ್‌ನ ಈ ನಿರ್ಣಯ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಅದು ಸ್ವೀಕರಿಸುವತ್ತ ಮೊದಲ ಹೆಜ್ಜೆ ಎಂದು ಭಾವಿಸಲಾಗುತ್ತದೆ. ಆದರೆ ಆರ್.ಎಸ್.ಎಸ್. ಆ ದಿಕ್ಕಿನಲ್ಲಿ ಆಗಲೇ ಮುಂದುವರೆದಿತ್ತು! ಅಷ್ಟೇ ಅಲ್ಲ, ಗೋಲ್ವಾಲ್ಕರ್‌ರವರ ವಿಚಾರಗಳನ್ನು ನೋಡಿದಾಗ ಮುಸ್ಲಿಂ ಲೀಗ್‌ನ ನಿರ್ಣಯ ಬಹಳ ಸೌಮ್ಯ ಎಂದೆನಿಸುತ್ತದೆ.

ಗಾಂಧೀಜಿ ಮತ್ತಿತರ ರಾಷ್ಟ್ರೀಯ ಆಂದೋಲನದ ಮುಖಂಡರ 'ಹಿಂದೂಮುಸ್ಲಿಂ ಐಕ್ಯತೆ'ಗೆ ಅವಕಾಶವೇ ಇಲ್ಲ ಎಂದು ಗೋಲ್ವಾಲ್ಕರ್ ಸಾರಿದರು. ನಮ್ಮ ಕಡು ಶತ್ರುಗಳೊಂದಿಗೆ ಆಲಿಂಗನವೇ? ಎಂದೂ ಸಾಧ್ಯವಿಲ್ಲ - ಎಂದರು ಗೋಲ್ವಾಲ್ಕರ್. ಕಾಂಗ್ರೆಸ್ ಕರಾಚೀ ನಿರ್ಣಯ(1931) ದೇಶಕ್ಕೆ ಒಂದು ಜಾತ್ಯಾತೀತ, ಪ್ರಜಾಸತ್ತಾತ್ಮಕ ರೂಪುರೇಷೆ ತಯಾರಿಸುತ್ತಿದ್ದಾಗ ಗೋಲ್ವಾಲ್ಕರ್ 'ಎರಡು ದೇಶ'ಗಳ ಸಿದ್ಧಾಂತದ ಚಿತ್ರವನ್ನು ದೇಶದ ಮುಂದಿಟ್ಟದ್ದರು - ಒಂದು ಹಿಂದೂಗಳ ಪ್ರಾಬಲ್ಯದ ದೇಶ, ಇನ್ನೊಂದು ಅವರಿಗೆ ಅಡಿಯಾಳಾದ ಮುಸ್ಲಿಮರ ದೇಶ - ನಾಗರಿಕ ಹಕ್ಕುಗಳನ್ನು ಅವರು ಕೇಳುವಂತಿಲ್ಲ! ಇದರಲ್ಲಿ ನಾಝಿ ಜರ್ಮನಿ ಯೆಹೂದ್ಯರನ್ನು ನಡೆಸಿಕೊಂಡ ರೀತಿ "ನಮ್ಮ ಜನಾಂಗ ಹೆಮ್ಮೆಯ ಭಾವನೆಯನ್ನು ಮತ್ತೊಮ್ಮೆ ಜಾಗೃತಗೊಳಿಸಿದೆ" ಎಂದರು ಗೋಲ್ವಾಲ್ಕರ್ ತಮ್ಮ ಕೃತಿಯಲ್ಲಿ. ಒಡೆದಾಳುವ ನೀತಿಯ ಬ್ರಿಟಿಶರಿಗೆ ಇದಕ್ಕಿಂತ ಹೆಚ್ಚಿನ ಸಹಾಯ ಏನು ಬೇಕಿತ್ತು?

ಮುಸ್ಲಿಂ ಲೀಗ್ ಪಾಕಿಸ್ತಾನದ ಘೋಷಣೆಯೆತ್ತುವ ಮೊದಲೇ ಆರ್.ಎಸ್.ಎಸ್. ಮತ್ತು ಅದರ ರಾಜಕೀಯ ಗುರು ಹಿಂದೂ ಮಹಾಸಭಾದ 'ಹಿಂದೂ-ಹಿಂದಿ-ಹಿಂದೂಸ್ತಾನ್' 'ಹಿಂದೂ ರಾಜ್ ಅಮರ್ ರಹೇ' ಎಂಬ ಘೋಷಣೆ ಮೊಳಗಲಾರಂಭಿಸಿತು. ಹೀಗಿರುವಾಗ ದೇಶ ವಿಭಜನೆಗೆ ಮುಸ್ಲಿಂ ಲೀಗ್‌ನೊಂದಿಗೆ ಆರ್.ಎಸ್.ಎಸ್./ ಹಿಂದೂ ಮಹಾಸಭಾ ಕೂಡಾ ಕಾರಣವಲ್ಲವೇ?

ಅಸಮಾನತೆಯ ಸಿದ್ಧಾಂತ!

ಭಾರತದ ರಾಷ್ಟ್ರೀಯ ಆಂದೋಲನ ಆರಂಭವಾದದ್ದು ಬಡತನದ ಬಗ್ಗೆ ಕಳಕಳಿಯಿಂದ. ಬ್ರಿಟಿಶ್ ಆಳ್ವಿಕೆ ಭಾರತೀಯ ದಾರಿದ್ರ್ಯವನ್ನು ಹೆಚ್ಚಿಸುತ್ತಿದೆ ಎಂಬ ಕಾರಣಕ್ಕಾಗಿ ಅದನ್ನು ತಿರಸ್ಕರಿಸಲಾಯಿತು. ಆಂದೋಲನ ಬೆಳೆಯಲಾರಂಭಿಸಿದಂತೆ ಅಸ್ಪೃಶ್ಯತೆ, ಜಾತಿಭೇದ, ಮಹಿಳಾ ಸಮಸ್ಯೆಗಳು ಇತ್ಯಾದಿಗಳನ್ನೂ ಎತ್ತಿಕೊಳ್ಳಲಾರಂಭಿಸಿತು. ಇವೆಲ್ಲದರ ಫಲವಾಗಿ ಕಾಂಗ್ರೆಸ್ಸಿನ ಕರಾಚಿ ಅಧಿವೇಶನ ಮೂಲಭೂತ ಹಕ್ಕುಗಳ ನಿರ್ಣಯವನ್ನು ಅಂಗೀಕರಿಸಿತು.

ಆದರೆ ಇವು ಯಾವುದನ್ನೂ ಆರ್.ಎಸ್.ಎಸ್. ಒಪ್ಪಲಿಲ್ಲ. ತನ್ನ ಸದಸ್ಯತ್ವ ಪಡೆಯಲು ಮಹಿಳೆಯರಿಗೆ ಅವಕಾಶ ನೀಡದ ಒಂದು ಸಂಘಟನೆಯಿಂದ ಬೇರೇನು ನಿರೀಕ್ಷಿಸಲು ಸಾಧ್ಯ?

ಗೋಲ್ವಾಲ್ಕರ್ 1940 ರಲ್ಲಿ ಸರಸಂಘಚಾಲಕರಾದಾಗ 1 ಲಕ್ಷ ಶಿಸ್ತಿನ ತರಬೇತಿ ಪಡೆದ ಸ್ವಯಂ ಸೇವಕರು ಇದ್ದಾರೆ ಎಂದು ಹೇಳಿಕೊಳ್ಳಲಾಯಿತು. ಅದು ಎಷ್ಟು ನಿಜವೋ ಪರೀಕ್ಷಿಸುವುದಂತೂ ಸಾಧ್ಯವಿರಲಿಲ್ಲ. ಅಷ್ಟೊಂದು ಸ್ವಯಂ ಸೇವಕರು ಇದ್ದರು ಎಂದೇ ಇಟ್ಟುಕೊಳ್ಳೋಣ. ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಹುಮ್ಮಸ್ಸು ದಿನೇ ದಿನೇ ಏರುತ್ತಿದ್ದಾಗ ಇವರೆಲ್ಲಾ ಏನು ಮಾಡುತ್ತಿದ್ದರು? 1941 ರ ವೇಳೆಗೆ ವೈಯುಕ್ತಿಕ ಕಾನೂನು ಭಂಗ ಚಳುವಳಿ ಆರಂಭವಾಯಿತು. 20000 ಮಂದಿ ಜೈಲಿಗೆ ಹೋದರು. ಇವರಲ್ಲಿ ಎಲ್ಲರೂ ಇದ್ದರು- ಗಾಂಧೀವಾದಿಗಳಿಂದ ಕಮ್ಯುನಿಸ್ಟರವರೆಗೆ. ಆದರೆ ಒಂದು ಲಕ್ಷ ಆರ್.ಎಸ್.ಎಸ್. ಸ್ವಯಂ ಸೇವಕರಲ್ಲಿ ಒಬ್ಬರೂ ಬರಲಿಲ್ಲ!

ಆರ್.ಎಸ್.ಎಸ್. ಪತ್ತೆಯೇ ಇರಲಿಲ್ಲ

ಆಗಸ್ಟ್ 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾದಾಗ ಸಾವಿರಾರು ಜನ ಬ್ರಿಟಿಶರ ದಬ್ಬಾಳಿಕೆಗಳಿಗೆ ಬಲಿಯಾಗುತ್ತಿದ್ದಾಗ ವಿ.ಡಿ.ಸಾವರ್ಕರ್‌ರಂತಹ ಹಿಂದೂ ಮಹಾಸಭಾದ ಹೀರೋ ಶಾಸಕಾಂಗಗಳಲ್ಲಿ ಸರ್ಕಾರಿ ಸೇನೆಗಳಲ್ಲಿ ಇರುವವರು ತಮ್ಮ- ತಮ್ಮ ಸ್ಥಾನಗಳಲ್ಲೇ ಉಳಿದು ಬ್ರಿಟಿಶ್ ಸರಕಾರಕ್ಕೆ ನೆರವಾಗಬೇಕು ಎಂದು ಕರೆ ನೀಡಿದರು. ಅದರ ಪ್ರಕಾರ (ಸ್ವಾತಂತ್ರ್ಯದ ನಂತರ ಜನಸಂಘವನ್ನು ಸ್ಥಾಪಿಸಿದ) ಡಾ! ಶ್ಯಾಮ ಪ್ರಸಾದ್ ಮುಖರ್ಜಿ ಬಂಗಾಳದ ಮಂತ್ರಿಮಂಡಳದಲ್ಲೇ ಉಳಿದರು - ಈ ಮಂತ್ರಿಮಂಡಳಕ್ಕೆ 'ಬಹುಮತ' ಇದ್ದದ್ದು ಕಾಂಗ್ರೆಸ್‌ನ ಸದಸ್ಯರನ್ನೆಲ್ಲಾ ಜೈಲಿಗೆ ಹಾಕಿದ್ದರಿಂದ! ಈ ಎಲ್ಲಾ ಕಾರಣಕ್ಕಾಗಿ ಆರ್.ಎಸ್.ಎಸ್. ಗೆ ಬ್ರಿಟಿಶ್ ಆಡಳಿತಗಾರರಿಂದ ಶಬಾಸ್‌ಗಿರಿಯೂ ಸಿಕ್ಕಿತ್ತು - 'ಸಂಘ ಸದಾ ಕಾನೂನಿನ ಒಳಗೇ ಇರುವಂತೆ ನೋಡಿಕೊಂಡಿತು. ಬ್ರಿಟಿಶರೊಂದಿಗೆ ಯಾವುದೇ ತಿಕ್ಕಾಟಕ್ಕಿಳಿಯದಂತೆ ನೋಡಿಕೊಂಡಿತು" ಎಂದು 1943 ರ ಒಂದು ಸರ್ಕಾರಿ ವರದಿ ಹೇಳಿದೆ.


ಎರಡನೇ ಮಹಾಯುದ್ಧಾನಂತರ ಮತ್ತೊಮ್ಮೆ ದೇಶಾದ್ಯಂತ ರಾಷ್ಟ್ರೀಯ ಉತ್ಕ್ರಾಂತಿ ಭುಗಿಲೆದ್ದಿತು. ಅಝಾದ್ ಹಿಂದ್ ಸೇನೆಯ ಸೈನಿಕರ ಬಿಡುಗಡೆ, ರಿನ್‌ನ ನಾವಿಕರ ಬಂಡಾಯ ಇತ್ಯಾದಿಗಳು ಇಡೀ ದೇಶವನ್ನು ತಟ್ಟಿ ಜನ ಬೀದಿಗೆ ಬಂದಿದ್ದಾಗ ಅಲ್ಲೆಲ್ಲೂ ಆರ್.ಎಸ್.ಎಸ್. ನ ಪತ್ತೆಯೇ ಇರಲಿಲ್ಲ.

ಆಗಸ್ಟ್ 1947 ರ ವರೆಗೂ ಗೋಲ್ವಾಲ್ಕರ್‌ಗೆ ಬ್ರಿಟಿಶರು ಭಾರತ ಬಿಟ್ಟು ಹೋಗುತ್ತಾರೆಂಬ ನಂಬಿಕೆಯೇ ಇರಲಿಲ್ಲವೆಂದು ದೇವರಾಜ್ ಗೋಯಲ್‌ರವರು ಬರೆದ 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಎಂಬ ಇಂಗ್ಲೀಷ್ ಕೃತಿಯ ಪುಟ 96 ನೋಡಿದಾಗ ಸ್ಪಷ್ಟವಾಗುತ್ತದೆ. 'ಬ್ರಿಟಿಶರು ಹೋದರೂ ಆಗ ಸರಕಾರಕ್ಕೆ ಬರುವವರು ಎರಡೇ ತಿಂಗಳೊಳಗೆ ಬ್ರಿಟಿಶರ ಕಾಲು ಹಿಡಿದು ಮತ್ತೆ ಆಳ್ವಿಕೆ ನಡೆಸುವಂತೆ ಕೇಳಿಕೊಳ್ಳುತ್ತಾರೆ' ಎಂದು ಭಾವಿಸಿದ್ದ ಬ್ರಿಟಿಶರ ಪಕ್ಕಾ ವಿಧೇಯರಾರಿಗೂ ಆಗಸ್ಟ್ 1947 ರಲ್ಲಿ ಭಾರತ ಸ್ವತಂತ್ರವಾಗುತ್ತದೆ ಎಂಬ ನಂಬಿಕೆಯಿರಲಿಲ್ಲ ಎಂಬುದನ್ನು ಗಮನಿಸಬೇಕು.

ಮಹಾತ್ಮರನ್ನು ಬಲಿತೆಗೆದುಕೊಂಡ ವಿಷ ವಾತಾವರಣ ಸೃಷ್ಟಿ

1946-47 ರ ವೇಳೆಗೆ ಮುಸ್ಲಿಂ ಕೋಮುವಾದಿಗಳಂತೆ ಆರ್.ಎಸ್.ಎಸ್. ಮುಖಂಡರೂ ಪರಸ್ಪರ ಕೊಲೆ-ಸುಲಿಗೆಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರಷ್ಟೇ ಅಲ್ಲ, ಕೊಲೆಗಡುಕರುಗಳಿಗೆ ಪ್ರೋತ್ಸಾಹ ನೀಡಿ, ಅವರನ್ನು ತಮ್ಮ ಜತೆ ಸೇರಿಸಿಕೊಂಡು ಸಂಘವನ್ನು ವಿಸ್ತಾರಗೊಳಿಸಲು ಪ್ರಯತ್ನಿಸಿದರು. 'ಹಿಂದೂ-ಮುಸ್ಲಿಂ ಐಕ್ಯತೆಯಿಲ್ಲದೆ ಸ್ವರಾಜ್ಯವಿಲ್ಲ ಎನ್ನುವವರು ಮಹಾ ಪಾತಕಿಗಳು', "ಸಂಘ ಪಾಕಿಸ್ತಾನವನ್ನು ಮುಗಿಸಿಬಿಡುತ್ತದೆ. ಇದಕ್ಕೆ ಅಡ್ಡಿ ಬರುವವರನ್ನೂ ಮುಗಿಸಿ ಬಿಡುತ್ತದೆ' ಎಂಬ ಹೇಳಿಕೆಗಳು ಹರಡಿದ ವಿಷದ ವಾತಾವರಣದಲ್ಲೇ ಮಹಾತ್ಮ ಗಾಂಧಿಯವರ ಕೊಲೆಯಾಯಿತು - ಕೊಂದಾತ ಹಿಂದೆ ಆರ್.ಎಸ್.ಎಸ್. ನಲ್ಲಿದ್ದು ಹಿಂದೂ ಮಹಾಸಭಾದ ಮುಖಂಡ ಸಾವರ್ಕರ್ ಅನುಯಾಯಿಯಾಗಿದ್ದುದು ಕೇವಲ ಆಕಸ್ಮಿಕವಲ್ಲ. 'ಆರ್.ಎಸ್.ಎಸ್. ನ ಹಿಂಸಾಚಾರದ ಪಂಥದ ಇತ್ತೀಚಿನ ಹಾಗೂ ಅಮೂಲ್ಯ ಬಲಿಯೆಂದರೆ ಸ್ವತಃ ಗಾಂಧಿಜಿಯವರೇ" ಎಂದು ಭಾರತ ಸರಕಾರದ ಗೃಹ ಇಲಾಖೆಯ ಫೆಬ್ರವರಿ 4, 1948 ರ ಹೇಳಿಕೆಯೊಂದು ಸ್ಪಷ್ಟವಾಗಿ ಗುರುತಿಸಿತ್ತು. 1969 ರಲ್ಲಿ ಕಪೂರ್ ಆಯೋಗದ ಎದುರು ನೀಡಿದ ಸಾಕ್ಷ್ಯಾಧಾರಗಳ ಪ್ರಕಾರವೂ ಸ್ವಾತಂತ್ರ್ಯದ ಎರಡೇ ತಿಂಗಳಲ್ಲಿ ಆರ್.ಎಸ್.ಎಸ್. ಮೇಲೆ ಶಸ್ತ್ರಾಸ್ತ್ರ ಸಂಗ್ರಹಿಸುವ, ಹಳ್ಳಿಗಳ ಮೇಲೆ ಎರಗುವ, ವ್ಯಕ್ತಿಗಳ ಮೇಲೆ ಆಕ್ರಮಣ ಮಾಡುವ 600-700 ಕೇಸುಗಳು ದಾಖಲಾದವು!

ಸ್ವಾತಂತ್ರ್ಯ ಆಂದೋಲನದಿಂದ ದೂರವಿದ್ದದ್ದು ಮಾತ್ರವಲ್ಲ, ಅದನ್ನು ವಿರೋಧಿಸಿದವರು ಈ ಆರ್.ಎಸ್.ಎಸ್. ಮಂದಿ. ರಾಷ್ಟ್ರೀಯ ಆಂದೋಲನದ ಆಶಯ ಕನಸುಗಳನ್ನೇ ವಿರೋಧಿಸಿದವರು ಅದನ್ನೆಂತು ಈಡೇರಿಸಬಲ್ಲರು? ○



'ಹಿಂದೂ-ಮುಸ್ಲಿಂ ಐಕ್ಯತೆಯಿಲ್ಲದ್ ಸ್ವರಾಜ್ಯವಿಲ್ಲ ಎನ್ನುವವರು ಮಹಾ ಪಾತಕಿಗಳು' "ಸಂಘ ಪಾಕಿಸ್ತಾನವನ್ನು ಮುಗಿಸಿಬಿಡುತ್ತದೆ. ಇದಕ್ಕೆ ಅಡ್ಡಿ ಬರುವವರನ್ನು ಮುಗಿಸಿ ಬಿಡುತ್ತದೆ' ಎಂಬ ಹೇಳಿಕೆಗಳು ಹರಡಿದ ವಿಷದ ವಾತಾವರಣದಲ್ಲೇ ಮಹಾತ್ಮ ಗಾಂಧಿಯವರ ಕೊಲೆಯಾಯಿತು

ಬಿಜೆಪಿ: ತನ್ನ ವಿಷ ತನ್ನನ್ನೇ ತಟ್ಟಿದಾಗ ಏಕೆ ಬೊಬ್ಬಿಡಬೇಕು?

ಉತ್ತರ ಪ್ರದೇಶ ಇತ್ತೀಚಿನ ಘಟನೆಗಳ ನಂತರ ಬಿಜೆಪಿ ಸಂವಿಧಾನ, ಪ್ರಜಾಪ್ರಭುತ್ವ ಇತ್ಯಾದಿಗಳ ಬಗ್ಗೆ ಹುಯಿಲೆಬ್ಬಿಸಿದೆ. ಪತ್ರಿಕೆಗಳೂ ಸಹಾನುಭೂತಿ ತೋರಿಸುತ್ತಿವೆ. ಆದರೆ ಇವಕ್ಕೆಲ್ಲಾ ಏನಾದರೂ ಅರ್ಥವಿದೆಯೇ? ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಇದು ಫೆಬ್ರವರಿ 26 ರ ಬಲಪರೀಕ್ಷೆಯ ಮೊದಲು ಬರೆದದ್ದು ಎಂಬುದನ್ನು ಗಮನಿಸಬೇಕು

ಇತ್ತೀಚೆಗೆ ಕೆಲವು ಪತ್ರಿಕೆಗಳು ಇದ್ದಕ್ಕಿದ್ದಂತೆ ಬಿಜೆಪಿಯ ಪರ ಪ್ರಚಾರಕ್ಕಿಳಿದಿವೆ. ಅದನ್ನು ಹುತಾತ್ಮನೆಂಬಂತೆ ಚಿತ್ರಿಸುತ್ತಿವೆ. ಹೀಗೆ ಮಾಡುವಾಗ ಕೆಲವೇ ತಿಂಗಳ ಹಿಂದೆ ಕುದುರೆ ವ್ಯಾಪಾರದ ಮೂಲಕ 70 ಎಂ.ಎಲ್.ಎ. ಗಳ ಬೆಂಬಲ ಪಡೆದು ತನ್ನ ಸರಕಾರಕ್ಕೆ ಬಿಜೆಪಿ ಬಹುಮತ ಪಡೆದ ರೀತಿಯ ಬಗ್ಗೆ ತಾವೇ ಬರೆದದ್ದನ್ನು ಇವು ಮರೆತಂತಿದೆ.

"ಇದು ಜನಾದೇಶದ ಸ್ಪಷ್ಟ ಉಲ್ಲಂಘನೆ ಎಂದೆನಿಸಿದರೂ ಯಾರೂ ಉಸಿರು ಕೂಡಾ ಬಿಡಲಿಲ್ಲ. ಕೆಲವೇ ಸಮಯದ ಹಿಂದಷ್ಟೇ ಅನೀತಿಯುತ ವಿಧಾನಗಳಿಂದ ರಾಜಕೀಯ ಬೆಂಬಲ ಪಡೆಯುವ ಪಾಪವನ್ನು ತಾನೆಂದೂ ಮಾಡುವುದಿಲ್ಲ ಎಂದು ಪ್ರಧಾನ ಮಂತ್ರಿಯಾಗಿ ಹೇಳಿದ ಅಟಲ ಬಿಹಾರಿ ವಾಜಪೇಯಿಯವರು ಕೂಡಾ.... ಇದರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಗೆ ಮತ್ತು ಅವರ ಪಕ್ಷಕ್ಕೆ ಒಂದು ಪಾಠವಿರಬಹುದು" ಎಂದಿತ್ತು ಇಂಡಿಯನ್ ಎಕ್ಸ್‌ಪ್ರೆಸ್.

ಭಾರತದ ಅತಿ ಹೆಚ್ಚು ಜನಸಂಖ್ಯೆಯ ರಾಜ್ಯದಲ್ಲಿ ರಾಜಕೀಯ ಹಾಗೂ ಆಡಳಿತ ಅಪಹಾಸ್ಯಕ್ಕೀಡಾಗಿದೆ ಎಂದು 'ಪಯೋನಿರ್' ಪತ್ರಿಕೆಯ ಸಂಪಾದಕೀಯ ಹೇಳಿತ್ತು.

ಟೈಂಸ್ ಆಫ್ ಇಂಡಿಯಾದ ಸಂಪಾದಕೀಯ ಉತ್ತರ ಪ್ರದೇಶದ ಬಿಜೆಪಿ ಸ್ಪೀಕರ್ ಪಕ್ಷಾಂತರ-ನಿಷೇಧ ಕಾನೂನಿಗೆ ತಮ್ಮದೇ ಆದ ಹೊಸದೊಂದು ವಿವರಣೆ ನೀಡಿ ಅದನ್ನು ವ್ಯರ್ಥಗೊಳಿಸಿದ್ದಾರೆ ಎಂದಿತ್ತು.

ಮುಂದಿನ ವ್ಯಾಪಾರಗಳಿಗೆ ಪಕ್ಷಾಂತರದ ಬೆಲೆಯನ್ನು ಮುಖ್ಯಮಂತ್ರಿಗಳು ಬಹಳ ಹೆಚ್ಚಿಸಿಬಿಟ್ಟಿದ್ದಾರೆ ಎಂದು ಬಿಜೆಪಿ ಮುಖಂಡತ್ವದ ಅರಿವಿಗೆ ಬಂದಿರಬೇಕು ಎಂದು ಹಿಂದೂಸ್ತಾನ್ ಟೈಮ್ಸ್ ಸಂಪಾದಕೀಯ ಹೇಳಿತ್ತು.

ಕಲ್ಯಾಣ್ ಸಿಂಗ್ ಕೂಟ ತನ್ನ ನೈತಿಕ ಅಧಿಕಾರ ಕಳಕೊಂಡಿದೆ ಎಂದು 'ಹಿಂದೂ' ಪತ್ರಿಕೆಯ ಸಂಪಾದಕೀಯ ಹೇಳಿತ್ತು.

"ಬಹುಶಃ ಪಾಪದ ಬಗ್ಗೆ ಬಿಜೆಪಿಯ ಪರಿಕಲ್ಪನೆ ಬದಲಾಗಿರಬೇಕು. ಕೇಂದ್ರದಲ್ಲಿ ಉತ್ತರ ಪ್ರದೇಶದ ಪುನಾರಾವರ್ತನೆಗೆ ತಾನು ಸಿದ್ಧ ಎಂದು ಹೇಳಿ ಅಡ್ವಾಣಿಯವರು ಇದನ್ನು ದೃಢಪಡಿಸಿದ್ದಾರೆ" ಎಂದು 'ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕೀಯ ಹೇಳಿತ್ತು.

ನಂತರ ಕಾಂಗ್ರೆಸ್ ಪಕ್ಷ ಗುಜ್ರಾಲ್ ಸರಕಾರಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದುಕೊಂಡಾಗ ಬೇರೆ ಪಕ್ಷಗಳಿಂದ ಪಕ್ಷಾಂತರವನ್ನು ಮಾಡಿಸಲೂ ಬಿಜೆಪಿ ಹೇಸಲಿಲ್ಲ. 40 ಕಾಂಗ್ರೆಸ್ ಲೋಕಸಭಾ ಸದಸ್ಯರು ಪಕ್ಷಾಂತರ ಮಾಡಲು ಸಿದ್ಧರಿದ್ದಾರೆ, ಆದರೆ ಪಕ್ಷಾಂತರ - ನಿಷೇಧ ಮಸೂದೆಯಿಂದ ತಪ್ಪಿಸಿಕೊಳ್ಳಲು ಇನ್ನೂ 7 ಮಂದಿ ಬೇಕು ಎಂದು ಅಡ್ವಾಣಿ ಹೇಳಿರುವುದಾಗಿ ದಾಖಲೆಯಾಗಿದೆ. ಈ ಲೋಕಸಭಾ ಚುನಾವಣೆಗಳಲ್ಲಂತೂ ಅದು ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸಲು ಯಾರನ್ನೇ ಆಗಲಿ, ಎಂತವರನ್ನೇ ಆಗಲಿ ಅಪ್ಪಿಕೊಳ್ಳಲು ಹೇಸಲಿಲ್ಲ.

ಅಕ್ಟೋಬರ್ 1997 ರಲ್ಲಿ ಕಲ್ಯಾಣ್ ಸಿಂಗ್ ಸರಕಾರಕ್ಕೆ ಬಿ.ಎಸ್.ಪಿ. ತನ್ನ ಬೆಂಬಲವನ್ನು ಹಿಂತೆಗೆದುಕೊಂಡಾಗಲೇ ಅದಕ್ಕೆ ಮುಂದುವರೆಯುವ ಹಕ್ಕೇ ಇರಲಿಲ್ಲ. ಏಕೆಂದರೆ ಅದು ಬಹುಮತ ಪಡೆದಿದ್ದದ್ದು ಬಿ.ಎಸ್.ಪಿ.ಯ ಬೆಂಬಲದಿಂದ. ಅದನ್ನು ಕಳಕೊಂಡಿತ್ತು. ಇದು ಆಳುವ ಪಕ್ಷದೊಳಗೆ ಒಡಕು ಬಂದು ಪರಸ್ಪರ ಸ್ಪರ್ಧಿಸುವ ಬಣಗಳಲ್ಲಿ ಯಾವುದರ ಬೆಂಬಲ ಎಷ್ಟು ಎಂದು ತಿಳಿಯಬೇಕಾದಾಗಲಷ್ಟೇ ವಿಧಾನ ಸಭೆಯಲ್ಲಿ ಅದನ್ನು ಪರೀಕ್ಷಿಸುವ ಪ್ರಶ್ನೆಯೇಳುತ್ತದೆ. ಇಲ್ಲಿ ಆ ಪ್ರಶ್ನೆಯೇ ಬರುವುದಿಲ್ಲ. 1995ರಲ್ಲಿ ಮುಲಾಯಂ ಸಿಂಗ್ ಸರಕಾರಕ್ಕೆ ಬಿ.ಎಸ್.ಪಿ. ಬೆಂಬಲ ಹಿಂತೆಗೆದುಕೊಂಡಾಗ ಸರಕಾರವನ್ನು ತಕ್ಷಣ ವಜಾ ಮಾಡಬೇಕು ಎಂದು ಬಿಜೆಪಿ ಆಗ್ರಹಿಸಿತ್ತು. ಆಗ ಅದಕ್ಕೇಕೆ ವಿಧಾನ ಸಭೆಯಲ್ಲಿ ಬಲ ಪರೀಕ್ಷೆಯ ಪ್ರಶ್ನೆ ಬರಲಿಲ್ಲ?

ಈಗಿನ ಸನ್ನಿವೇಶದಲ್ಲಿ ಈ ಹಿಂದೆ ಕಲ್ಯಾಣ್ ಸಿಂಗ್ ಜತೆಗೂಡಿದ ಪಕ್ಷಾಂತರಿಗಳ ಒಂದು ವಿಭಾಗ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಾಗ ಇನ್ನೂ ತನಗೆ ಬಹುಮತವಿದೆಯೆಂದು ಯಾವ ಆಧಾರದಲ್ಲಿ ಬಿಜೆಪಿ ಹೇಳಿಕೊಳ್ಳಲು ಸಾಧ್ಯ? ಮತ್ತೊಮ್ಮೆ ಕುದುರೆ ವ್ಯಾಪಾರ ನಡೆಸಿ, ಹೇಗೋ ಬಹುಮತ ಗಿಟ್ಟಿಸಿ ಅಧಿಕಾರದಲ್ಲುಳಿಯುವ ಹುನ್ನಾರವಷ್ಟೇ ಅಲ್ಲವೇ ಇದು?

ಈ ದುರ್ವರ್ತನೆಗೆ ತದ್ವಿರುದ್ಧವಾಗಿ ಕಾಂಗ್ರೆಸ್ ಬೆಂಬಲ ಹಿಂತೆಗೆದುಕೊಂಡಾಗ ಅಲ್ಪಮತಕ್ಕಿಳಿದ ಸಂಯುಕ್ತ ರಂಗ ಸರ್ಕಾರ ಅಧಿಕಾರದಲ್ಲುಳಿಯಲು ಅನೀತಿಯುತ ಕ್ರಮಗಳಿಗಿಳಿಯದೆ ರಾಜಿನಾಮೆ ನೀಡಿತು. ಯಾರಾದರೂ ರಾಜೀನಾಮೆಯ ಆಗ್ರಹ ಎತ್ತುವವರೆಗೂ ಅದು ಕಾಯಲಿಲ್ಲ. ಸಂಸದೀಯ ವ್ಯವಸ್ಥೆಯ ಅತ್ಯುನ್ನತ ಪ್ರಜಾಸತ್ತಾತ್ಮಕ ಪರಂಪರೆಯೆಂದರೆ ಇದು.

ಉತ್ತರ ಪ್ರದೇಶದ ಸ್ಪೀಕರ್ ಕೇಸರಿನಾಥ್ ತ್ರಿಪಾಠಿ ಕೂಡಾ ಹಿಂದಿನ ಬೆಳವಣಿಗೆಗಳಲ್ಲಿ ಮೋಸದ ಪಾತ್ರ ವಹಿಸಿದ್ದಾರೆ. ಐದು ತಿಂಗಳು ಕಳೆದರೂ 12 ಬಿ.ಎಸ್.ಪಿ. ಎಂ.ಎಲ್.ಎ.ಗಳ ಪಕ್ಷಾಂತರ ಕುರಿತು ಇನ್ನೂ ನಿರ್ಣಯ ಕೊಟ್ಟಿಲ್ಲ.

ತನ್ನದೇ ವಿಷ ತನ್ನನ್ನು ತಟ್ಟಿದಾಗ ಈಗ ಬಿಜೆಪಿ ಪ್ರಜಾಪ್ರಭುತ್ವದ ರಕ್ಷಣೆಯ ಹುಯಿಲೆಬ್ಬಿಸಿದೆ. ಈ ಜನಗಳನ್ನು ಬಿಜೆಪಿ ಅಧಿಕಾರದ ಆಮಿಷ ತೋರಿಸಿ ತನ್ನೆಡೆ ಸೆಳೆದಿತ್ತು. ಬೇರೆಯವರು ಅದೇ ಆಮಿಷ ತೋರಿದಾಗ ಅವರು ಅಲ್ಲಿಗೆ ಹಾರಿದರು.

ಆಟದ ಎಲ್ಲಾ ನಿಯಮಗಳನ್ನು ತಾನೇ ಮುರಿದ ಬಿಜೆಪಿ ಈಗ ಏಕೆ ಅಳಬೇಕು? ಒಟ್ಟಿನಲ್ಲಿ ಇದು ಬಿಜೆಪಿಯ ಸ್ಥಿರತೆ ಮಾತಿನ ಟೊಳ್ಳುತನವನ್ನು ಬಟ್ಟಬಯಲಾಗಿಸಿದೆ. ಗುಜರಾತದ ಅನುಭವವೂ ಸಾಲದಾದರೆ ಉತ್ತರ ಪ್ರದೇಶದ ಈ ಅನುಭವ ಏನು ಹೇಳುತ್ತದೆ? ಪಕ್ಷಾಂತರಿ ವ್ಯಕ್ತಿಗಳಿಂದ ಎಷ್ಟೇ ಪ್ರಯೋಜನ ಪಡೆದರೂ ಬಹಳ ದಿನ ಇಂತಹ ವ್ಯಕ್ತಿಗಳಿಂದ ಬೆಂಬಲ ಪಡೆಯುವುದು ಸಾಧ್ಯವಿಲ್ಲವೆಂಬುದನ್ನು ಗುಜರಾತ್ ಮತ್ತು ಉತ್ತರ ಪ್ರದೇಶದ ಅನುಭವಗಳು ಸಾರಿ ಹೇಳುತ್ತಿವೆ.

ಅಡ್ವಾಣಿಯವರು ಫೆಬ್ರವರಿ 22ರ ತಮ್ಮ ಹೇಳಿಕೆಯಲ್ಲಿ ಹೀಗೆಂದಿದ್ದರು- "ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಮುಖ್ಯ ಪ್ರಶ್ನೆ ಸ್ಥಿರತೆಯೇ ಆದರೂ, ಇನ್ನೂ ಎರಡು ವಿಷಯಗಳು ದೇಶಕ್ಕೆ ಮಹತ್ವದ್ದು - ಪ್ರಜಾಪ್ರಭುತ್ವದ ಸಮರ ಮತ್ತು ಗಣತಂತ್ರದ ಮೌಲ್ಯಗಳು. ಇದರಿಂದ ಈ ಚುನಾವಣೆಯ ಚಾರಿತ್ರಿಕ ಮಹತ್ವ ಹೆಚ್ಚಿದೆ" ಆದರೆ ಶ್ರೀಯುತ ಅಡ್ವಾಣಿಯವರೇ, ನೀವೇ ಈ ಮೌಲ್ಯಗಳಿಗೆ ಸವಾಲೆಸೆದವರು. ಗುಜರಾತಿನಲ್ಲಿ ಸ್ಥಿರತೆ ನೀಡಲು ನಿಮಗಾಗಲಿಲ್ಲ. ಉತ್ತರ ಪ್ರದೇಶದಲ್ಲಿ ಎಲ್ಲರಿಗೂ ಕ್ಯಾಬಿನೆಟ್ ಸ್ಥಾನಗಳ ಆಮಿಷ ತೋರಿಸಿ ಸಾಮೂಹಿಕ ಪಕ್ಷಾಂತರ ನಡೆಸಿ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿದವರು ನೀವೇ ಅಲ್ಲವೇ? ಐದು ತಿಂಗಳಾದರೂ 12 ಪಕ್ಷಾಂತರಿ ಸದಸ್ಯರ ಬಗ್ಗೆ ಸ್ಪೀಕರ್ ಇನ್ನೂ ನಿರ್ಣಯ ಕೊಡದಿರುವುದನ್ನು ಯಾವುದೇ ಪಕ್ಷ ಯಾವ ಆಧಾರದಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯ? ಈಗ ಬೆಂಬಲ ಹಿಂತೆಗೆದುಕೊಂಡವರನ್ನು ಮತ್ತೆ ಆಮಿಷವೊಡ್ಡಿ ಆಕರ್ಷಿಸುತ್ತಿರುವುದನ್ನು ಪ್ರಜಾಪ್ರಭುತ್ವವನ್ನು ಬಲಗೊಳಿಸುವ ಕ್ರಮ ಎಂದು ನಂಬಬೇಕೇ?

ನಿಜವಾಗಿ ಉತ್ತರ ಪ್ರದೇಶ ಬಿಕ್ಕಟ್ಟು ಬಿಜೆಪಿಯ ನೀತಿ ಬಾಹಿರತೆಯನ್ನು ಎತ್ತಿ ತೋರಿದೆ. ಅದಕ್ಕಿರುವ 'ನೀತಿ' ಒಂದೇ - ಏನಕೇನ ಪ್ರಕಾರೇಣ ಅಧಿಕಾರಕ್ಕೆ ಬರುವುದು. ಸಂಯುಕ್ತ ರಂಗ ದಾಖಲೆ ಇದಕ್ಕೆ ತದ್ವಿರುದ್ಧವಾದದ್ದು.

"ರಾಷ್ಟ್ರಪತಿಗಳು ಅಧಿಕಾರ ಮೀರಿ ಹೋಗಿರುವುದು ಸರಿಯಲ್ಲ"

ಉತ್ತರ ಪ್ರದೇಶದ ಬೆಳವಣಿಗೆಗಳನ್ನು ಕುರಿತಂತೆ ರಾಷ್ಟ್ರಪತಿಗಳು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದ ಸೋರಿಕೆಗೆ ಸಂಬಂಧಪಟ್ಟಂತೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ರವರು ಕೇರಳದ ತಿರುವನಂತಪುರದಿಂದ ದಿ ೨೫.೨.೯೮ ರಂದು ನೀಡಿದ ಪತ್ರಿಕಾ ಹೇಳಿಕೆಯ ಪೂರ್ಣ ಪಾಠವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ. ಈ ಪತ್ರದ ಬಗ್ಗೆ ಬಿಜೆಪಿ, ಸಮತಾ ಪಕ್ಷದ ಮುಖಂಡರು ಹರಿಹಾಯ್ದಿದ್ದಾರೆ. ಅದರಲ್ಲೇನಾದರೂ ಹುರುಳಿದೆಯೇ? ಈ ಹೇಳಿಕೆಯನ್ನು ಓದಿದ ನಂತರ ನೀವೇ ನಿರ್ಧರಿಸಿ.

ಭಾರತದ ರಾಷ್ಟ್ರಪತಿಗಳು ನಮ್ಮ ವ್ಯವಸ್ಥೆಯಲ್ಲಿ ಪ್ರಭುತ್ವದ ಮುಖ್ಯಸ್ಥರಾಗಿ ಅತ್ಯುನ್ನತ ಸ್ಥಾನ ಹೊಂದಿದ್ದಾರೆ. ಆದರೆ ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅವರು ಮಂತ್ರಿಮಂಡಳದ ಸಲಹೆಯ ಪ್ರಕಾರ ಕಾರ್ಯನಿರ್ವಹಿಸಬೇಕಾಗುತ್ತದೆ.

ಸಂವಿಧಾನದ 74ನೇ ಕಲಮು ಹೀಗೆಂದಿದೆ- 1." ರಾಷ್ಟ್ರಪತಿಗಳಿಗೆ ನೆರವಾಗಲು ಮತ್ತು ಸಲಹೆ ನೀಡಲು ಪ್ರಧಾನ ಮಂತ್ರಿಯವರು ಮುಖ್ಯಸ್ಥರಾಗುಳ್ಳ ಒಂದು ಮಂತ್ರಿಮಂಡಳಿ ಯಿರತಕ್ಕದ್ದು. ರಾಷ್ಟ್ರಪತಿಗಳು ಇಂತಹ ಸಲಹೆಗೆ ಅನುಗುಣವಾಗಿ ಕಾರ್ಯನಿರ್ವಹಿಸತಕ್ಕದ್ದು.

2. "ಇಂತಹ ಸಲಹೆಯನ್ನು ಸಾಮಾನ್ಯವಾಗಿ ಅಥವಾ ಬೇರೆ ಕಾರಣಕ್ಕೆ ಮಂತ್ರಿಮಂಡಳಿ ಮರುಪರಿಶೀಲಿಸುವುದು ರಾಷ್ಟ್ರಪತಿಗಳಿಗೆ ಅಗತ್ಯವೆನಿಸಬಹುದು ಹಾಗೂ ರಾಷ್ಟ್ರಪತಿಗಳು ಇಂತಹ ಮರುಪರಿಶೀಲನೆಯ ನಂತರ ನೀಡಿದ ಸಲಹೆಯಂತೆ ಕಾರ್ಯನಿರ್ವಹಿಸತಕ್ಕದ್ದು"


ನಮ್ಮ ರಾಷ್ಟ್ರಪತಿಗಳು ಒಬ್ಬ ಅನುಭವೀ ವ್ಯಕ್ತಿ. ಸಾರ್ವಜನಿಕ ಜೀವನದಲ್ಲಿ ದುಡಿದಿರುವ ಅವರು ಈ ಹಿಂದೆ ವಿದೇಶಾಂಗ ಸಚಿವಾಲಯದಲ್ಲಿ, ಮಂತ್ರಿ ಮಂಡಳಿಯಲ್ಲಿ ವಿವಿಧ ಅಧಿಕಾರದ ಹುದ್ದೆಗಳಲ್ಲಿ, ಉಪರಾಷ್ಟ್ರಪತಿಯಾಗಿ ಕೆಲಸ ಮಾಡಿದವರು. ಆದರೆ ಉತ್ತರ ಪ್ರದೇಶದ ಬೆಳವಣಿಗೆಯಲ್ಲಿ ಅವರು ತಮ್ಮ ಅಧಿಕಾರಗಳನ್ನು ಮೀರುತ್ತಿರುವುದು ದುರದೃಷ್ಟಕರ. ಕಲ್ಯಾಣ್ ಸಿಂಗ್ ಸರ್ಕಾರದ ವಜಾದ ನಂತರ ಅವರು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ರಾಜ್ಯಪಾಲರ ಪಾತ್ರವನ್ನು ಕಟುವಾಗಿ ಟೀಕಿಸಿದ್ದಾರೆ ಹಾಗೂ ಅದರ ಪ್ರತಿಯನ್ನು ನೇರವಾಗಿ ರಾಜ್ಯಪಾಲರಿಗೆ ಕಳಿಸಿದ್ದಾರೆ. ನಿನ್ನೆ ಕೂಡಾ ಅವರು ರಾಜ್ಯಪಾಲರನ್ನು ತೆಗೆದುಹಾಕುವಂತೆ ಪ್ರಧಾನ ಮಂತ್ರಿಗಳಿಗೆ ಹೇಳುವ ಇನ್ನೊಂದು ಪತ್ರವನ್ನು ಬರೆದಿದ್ದಾರೆ. ಈ ಪತ್ರ ಪತ್ರಿಕೆಗಳಿಗೆ ಸಿಗುವಂತೆ ಮಾಡಲಾಗಿದೆ. ಸುಪ್ರೀಂ ಕೋರ್ಟ್ ನಿನ್ನೆ ವಿಧಾನ ಸಭೆಯಲ್ಲಿ ಸಂಯುಕ್ತ ಪರೀಕ್ಷೆ ನಡೆಸಬೇಕೆಂದು ನೀಡಿದ ಆದೇಶದಲ್ಲಿ ಯಾವುದೇ ವಾದಿ ಪ್ರತಿವಾದಿಯನ್ನು ಬೆಂಬಲಿಸಿಲ್ಲ, ರಾಜ್ಯಪಾಲರು ತಳೆದ ನಿಲುವಿನ ಬಗ್ಗೆ ಯಾವುದೇ ಟೀಕೆಯನ್ನು ಮಾಡಿಲ್ಲ ಎಂಬುದು ತಿಳಿದಿರಬೇಕು.

1974 ರಲ್ಲಿ ಶಂಕೇರ್ ಸಿಂಗ್ Vs ಪ್ರಭುತ್ವದ ಕೇಸಿನಲ್ಲಿ ನ್ಯಾಯಮೂರ್ತಿ ವಿ.ಕೆ.ಕೃಷ್ಣ ಅಯ್ಯರ್‌ರವರಿದ್ದ ಪೀಠದ ಸುಪ್ರೀಂಕೋರ್ಟ್ ತೀರ್ಪಿನಲ್ಲಿ ರಾಷ್ಟ್ರಪತಿಗಳ ಅಧಿಕಾರಗಳನ್ನು ಸ್ಪಷ್ಟವಾಗಿ ನಿರ್ವಚಿಸಲಾಗಿದೆ ಎಂದಿದೆ. ರಾಷ್ಟ್ರಪತಿಗಳು ಯಾವುದೇ ನಿಲುವನ್ನು ತಳೆಯುವ ಮೊದಲು ಈ ಕೇಸಿನ ಪರಿಶೀಲನೆ ನಡೆಸಿದ್ದರೆ ಒಳ್ಳೆಯದಿತ್ತು- ವಿಶೇಷವಾಗಿ ಸುಪ್ರೀಂ ಕೋರ್ಟ್ ಮುಖ್ಯಮಂತ್ರಿ ಪದವಿಯ ದಾವೇದಾರರಲ್ಲಿ ಯಾರಿಗೆ ಬಹುಮತ ಇದೆಯೆಂದು ನಿರ್ಧರಿಸಲು ಫೆಬ್ರವರಿ 26 ರಂದು ಸೇರಲು ವಿಧಾನಸಭೆಗೆ ಹೇಳಿರುವ ಸಂದರ್ಭದಲ್ಲಿ. ಈ ಹಿಂದೆ ಕೂಡಾ ರಾಷ್ಟ್ರಪತಿಗಳು ಸುಪ್ರೀಂ ಕೋರ್ಟ್ ತಪ್ಪೆಂದು ಸೂಚಿಸಿದ ಕೆಲವು ಮಾಜಿ ಮಂತ್ರಿಗಳ ವಿರುದ್ಧ ಕೇಸುಗಳನ್ನು ಆರಂಭಿಸದಿರಲು ಟಿಪ್ಪಣಿ ಮಾಡಿದ್ದರು.

ರಾಷ್ಟ್ರಪತಿಗಳಿಗೆ ಯಾವ ಪಕ್ಷವೂ ಬಹುಮತವಿಲ್ಲದ, ಎರಡು ವಾರಗಳೊಳಗೆ ಹೊಸದೊಂದು ಸಂಸತ್ತು ಅಸ್ತಿತ್ವಕ್ಕೆ ಬರುವ ಪ್ರಸ್ತುತ ರಾಜಕೀಯ ಸನ್ನಿವೇಶದ ಅರಿವಿದೆ. ಹೊಸ ಸರಕಾರ ರಾಜ್ಯಪಾಲರ ನೇಮಕದ ವಿಧಿ-ವಿಧಾನ ಹಾಗೂ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯವಿರುವ ವಿವಿಧ ರಾಜಕೀಯ ಶಕ್ತಿಗಳೊಡನೆ ಸಮಾಲೋಚಿಸಿ ಒಂದು ದೃಢ ನಿರ್ಣಯ ಕೈಗೊಳ್ಳುವ ಸ್ಥಿತಿಯಲ್ಲಿರುತ್ತದೆ. ಸದ್ಯಕ್ಕೆ ಪ್ರಸ್ತುತ ವಿವಾದವನ್ನು ಹೊಸ ಸಂಸತ್ತಿನ ರಚನೆ ಕುರಿತಂತೆ ಜನಗಳ ತೀರ್ಪು ಬರುವವರೆಗೆ ಕೊನೆಗೊಳಿಸಬೇಕು.

ರಾಷ್ಟ್ರಪತಿಗಳು ಪ್ರಧಾನಮಂತ್ರಿಗಳ ಅಭಿಪ್ರಾಯಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಈ ವಿವಾದವನ್ನು ಕೊನೆಗೊಳಿಸುವರೆಂಬ ವಿಶ್ವಾಸ ನನಗಿದೆ.

ಸ್ಥಿರತೆಯನ್ನು ನೀಡಬಲ್ಲ, ಪ್ರಜಾಪ್ರಭುತ್ವದ ಸಮರವನ್ನು ನಡೆಸಬಲ್ಲ, ಗಣತಂತ್ರದ ಮೌಲ್ಯಗಳನ್ನು ಉಳಿಸಬಲ್ಲ ಕೂಟವೇ ಇದು?



ಕೃಪೆ: ಗಣಶಕ್ತಿ

ಕೊಯಮತ್ತೂರು ಘಟನೆ .... ವ್ಯಾಪಕ ಪಿತೂರಿಯ ಭಾಗ


ಫೆಬ್ರವರಿ ೧೪ ರ ಕೊಯಮತ್ತೂರು ಬಾಂಬ್ ಸ್ಫೋಟಕ್ಕೆ ಗುರಿಯಾದವರನ್ನು ಭೇಟಿಯಾಗಲು ಹಾಗೂ ಪರಿಸ್ಥಿತಿಯನ್ನು ಅಂದಾಜು ಮಾಡಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ***ಆರ್.ಉಮಾನಾಥ್*** *ಫೆಬ್ರವರಿ ೧೬ ರಂದು ಕೊಯ ಮತ್ತೂರಿಗೆ ಧಾವಿಸಿ ಬಂದು ಹಾಗೂ ಮರುದಿನ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದರು. ತಮ್ಮ ಭೇಟಿಯ ನಂತರ ಅವರು ನೀಡಿದ ಪತ್ರಿಕಾ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.*

ಫೆಬ್ರವರಿ 16, 1998 ರಂದು ಕೊಯಮತ್ತೂರು ತಲುಪಿದ ನಾನು ಸರ್ಕಾರಿ ಆಸ್ಪತ್ರೆ ಹಾಗೂ ಕೆ.ಜಿ.ಆಸ್ಪತ್ರೆಗೆ ಹೋದೆ. ಇಲ್ಲಿ ಬಾಂಬ್ ಸ್ಫೋಟದಿಂದ ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿದ್ದಾರೆ. ನಾನು ಅವರನ್ನು ಸಂತೈಸಲು ಎಲ್ಲರನ್ನೂ ಭೇಟಿ ಮಾಡಿದೆ - ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು. ಸುಮಾರಾಗಿ ಅವರೆಲ್ಲರೂ ಸಾಮಾನ್ಯ ಜನ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ ಎಂದು ನಾನು ಅವರನ್ನು ಭೇಟಿಯಾದಾಗ ಅರಿವಾಯಿತು. ಕೆಲವರು ನರ್ಸ್‌ಗಳು, ಇನ್ನೂ ಕೆಲವರು ನರ್ಸಿಂಗ್‌ನ ತರಬೇತಿ ಪಡೆಯುತ್ತಿರುವವರು, ಕೆಲವರು ಅರೆ-ವೈದ್ಯಕೀಯ ಸಿಬ್ಬಂದಿ, ಇನ್ನೂ ಕೆಲವರು ಪೋಲೀಸರು. ಕೆಲವರಿಗೆ ಗಂಭೀರ ಗಾಯಗಳಾಗಿವೆ.

ಬಾಂಬ್ ಸ್ಫೋಟಗಳ ನಂತರ ವ್ಯಾಪಕವಾಗಿ ನಡೆದ ಲೂಟಿ, ಬೆಂಕಿ ಯಾವುದೇ ಸಮಾಜ-ಘಾತುಕ ವ್ಯಕ್ತಿಗಳ ವಿಭಾಗ ನಡೆಸಿದ್ದಲ್ಲ ಎಂದು ವಿವರವಾದ ಚರ್ಚೆಗಳ ನಂತರ ನನ್ನ ಅರಿವಿಗೆ ಬಂತು. ಈ ಕೃತ್ಯ ಬಿಜೆಪಿ ಮತ್ತು ಎಐಡಿಎಂಕೆ ಕೂಟದ ಕುಟಿಲ ಕೆಲಸ ಎಂಬುದನ್ನು ಯಾರೂ ನಿರಾಕರಿಸುವಂತಿಲ್ಲ. ಅಲ್ಪಸಂಖ್ಯಾತ ಕೋಮಿನ ವಿರುದ್ಧ ದ್ವೇಷ ತೀರಿಸಿಕೊಳ್ಳಲು ಬಿಜೆಪಿ ಮತ್ತು ಎಐಎಡಿಎಂಕೆಯ ಸಂಘಟಿತ ಗ್ಯಾಂಗ್‌ಗಳು ವ್ಯಾಪಕ ಪ್ರಮಾಣದಲ್ಲಿ ಅಂಗಡಿ ಮುರಿಯುವುದು, ಲೂಟಿ, ಅಂಗಡಿಗಳಿಗೆ ಬೆಂಕಿ ಹಚ್ಚುವುದು ಇತ್ಯಾದಿಗಳನ್ನು ಮಾಡಿವೆ. ಅಲ್ಲದೆ ಡಿಎಂಕೆ ಮತ್ತು ಸಿಪಿಐ(ಎಂ) ಮೇಲೆ ರಾಜಕೀಯ ಹಗೆ ತೀರಿಸಿಕೊಳ್ಳಲು ಈ ಗ್ಯಾಂಗ್‌ಗಳು ಈ ಪಕ್ಷಗಳ ಕಚೇರಿಗಳನ್ನು ಹಾಳುಗೆಡವಲು ಪ್ರಯತ್ನ ನಡೆಸಿದವು. ಡಿಎಂಕೆ, ಸಿಪಿಐ(ಎಂ) ಹಾಗೂ ಟಿಎಂಸಿಯ ಬೆಂಬಲಿಗರ ಮನೆ, ಆಸ್ತಿಗಳನ್ನೂ ನಾಶ ಮಾಡಲು ಪ್ರಯತ್ನಿಸಿದರು.

ಮತ್ತೆ ಫೆಬ್ರವರಿ 16 ರ ರಾತ್ರಿ ಬಿಜೆಪಿಗೆ ಸೇರಿದ ಗ್ಯಾಂಗ್‌ನವರು ರತಿನಾಪುರಿಯಲ್ಲಿ ಹಾಗೂ ರತಿನಾಪುರಿಗೆ ಹೋಗುವ ದಾರಿಯಲ್ಲಿನ ಸಿಪಿಐ(ಎಂ) ಕಚೇರಿಗಳ ಬಾಗಿಲು ಒಡೆದು ಬೆಂಕಿ ಹಚ್ಚಿದರು. ಎಲ್ಲಕ್ಕೂ ಹೆಚ್ಚಾಗಿ ಭಯಾನಕ ಶಸ್ತ್ರಗಳನ್ನು ಹೊಂದಿದ್ದ ಬಿಜೆಪಿ ಹಾಗೂ ಎಐಡಿಎಂಕೆಯ ಒಂದು ದೊಡ್ಡ ಗುಂಪು ನಗರದ ವ್ಯಸ್ತ ಪ್ರದೇಶವಾದ ಗಾಂಧಿ ಪುರಂನಲ್ಲಿರುವ ಸಿಪಿಐ(ಎಂ) ಜಿಲ್ಲಾ ಕಚೇರಿಗೆ ಧಾಳಿ ಮಾಡಲು ಸಿದ್ಧರಾಗಿ ನಿಂತಿದ್ದರು. ನಮ್ಮ ಕಾರ್ಯಕರ್ತರ ಎಚ್ಚರ ಹಾಗೂ ಅಲ್ಲಿದ್ದ ಪೋಲೀಸ್ ತಂಡದ ಮಧ್ಯಪ್ರವೇಶದಿಂದಾಗಿ ಪಕ್ಷದ ಜಿಲ್ಲಾ ಸಮಿತಿ ಕಚೇರಿ ನಾಶವಾಗದೆ ಉಳಿಯಿತು. ನಾನು ಈ ಅತ್ಯಾಚಾರಗಳನ್ನು ಬಲವಾಗಿ ಖಂಡಿಸುತ್ತೇನೆ. ಈ ಎಲ್ಲಾ ಧಾಳಿಗಳಿಗೆ ಸಂಬಂಧಪಟ್ಟವರನ್ನು ಗುರುತಿಸಿ ಬಂಧಿಸುವ ಮೂಲಕ ಇಂತಹ ಹೀನ ಹಲ್ಲೆಗಳು ಮತ್ತೆ ನಡೆಯದಂತೆ ತಡೆದು ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಪೋಲೀಸರನ್ನು ಆಗ್ರಹಪಡಿಸುತ್ತೇನೆ.

ಈ ಬೆಳವಣಿಗೆಯನ್ನು ಒಟ್ಟಾರೆಯಾಗಿ ನೋಡಿದಾಗ ಈ ಪ್ರಶ್ನೆಯನ್ನು ಕೇವಲ ಶ್ರೀ ಎಲ್.ಕೆ.ಅಡ್ವಾಣಿಯವರ ಜೀವದ ಮೇಲೆ ಹಲ್ಲೆಯ ಒಂದು ಪ್ರಯತ್ನವೆಂದೇ ಮಿತಿಗೊಳಿಸುವುದು ಸರಿಯಾಗುವುದಿಲ್ಲ ಎಂದು ನನ್ನ ಭಾವನೆ. ಕೆಲವೇ ನಿಮಿಷಗಳ ಅಂತರದಲ್ಲಿ ಕೊಯಮತ್ತೂರಿನ 13 ವಿಭಿನ್ನ ಕೇಂದ್ರಗಳಲ್ಲಿ ಬಾಂಬ್‌ಗಳನ್ನಿಟ್ಟಿದ್ದು, ಅದೂ ದೇಶದ ವಿಭಿನ್ನ ಭಾಗಗಳಲ್ಲಿ ಚುನಾವಣೆಯ ಮೊದಲಹಂತದ ಸ್ವಲ್ಪವೇ ಮುಂಚೆಯೇ ಯೋಚಿಸಿರುವುದು ಹಾಗೂ ಪಂಜಾಬಿನಲ್ಲಿ ಉನ್ನತ ರಾಜಕೀಯ ಮುಖಂಡರ ಹತ್ಯೆ ಮಾಡುವ ಯೋಜನೆ ಹಾಕಿದಂತಿದ್ದ ಇಬ್ಬರು ಉಗ್ರಗಾಮಿಗಳ ಬಂಧನದ ಸಂಗತಿಯನ್ನು ಗಮನಿಸಿದಾಗ ನಾವು ಇದರ ಹಿನ್ನೆಲೆಯಲ್ಲಿ ಇನ್ನೂ ವ್ಯಾಪಕವಾದ, ಇನ್ನೂ ಅಪಾಯಕಾರಿಯಾದ ಪಿತೂರಿಯಿದೆಯೆನ್ನುವುದನ್ನು ಕಾಣಲೇ ಬೇಕಾಗುತ್ತದೆ. ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಚುನಾವಣೆಗಳ ಪ್ರಕ್ರಿಯೆಯನ್ನೇ ಅಸ್ತವ್ಯಸ್ತಗೊಳಿಸಿ ಅಸ್ಥಿರತೆ ಹಾಗೂ ಅರಾಜಕತೆ ತರುವ ಉದ್ದೇಶದಿಂದ ವಿದೇಶಿ ಶಕ್ತಿಗಳು ಸೇರಿರುವ ಒಂದು ಅಪಾಯಕಾರಿ ಪಿತೂರಿಯಿದು.



ಈ ಘಟನೆಗಳನ್ನು ಕೇವಲ ಪಕ್ಷಗಳ ನಡುವಿನ ಜಗಳದ ಮಟ್ಟಕ್ಕಿಳಿಸದೆ ಈ ದೇಶದ ಐಕ್ಯತೆ ಮತ್ತು ಸಮಗ್ರತೆಯ ವಿರುದ್ಧ ಒಂದು ವ್ಯಾಪಕ ಪಿತೂರಿಯ ಭಾಗ ಇದು ಎಂದು ಕಾಣಬೇಕೆಂದು ನಾವು ಎಲ್ಲಾ ಜಾತ್ಯಾತೀತ ಹಾಗ ಪ್ರಜಾಪ್ರಭುತ್ವವಾದೀ ಪಕ್ಷಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

ರಾಜ್ಯ ಸರಕಾರ ತನ್ನ ಅಧೀನವಿರುವ ಎಲ್ಲಾ ತನಿಖಾ ಸಂಸ್ಥೆಗಳನ್ನು ಬಳಿಸಿ ಹಾಗೂ ಕೇಂದ್ರ ಸರಕಾರದ ತನಿಖಾ ಸಂಸ್ಥೆಗಳ ಸಲಹೆಗಳನ್ನು ಪಡೆದು ಇದರ ಹಿಂದಿರುವ ದೇಶೀ ಹಾಗೂ ವಿದೇಶೀ ಪಿತೂರಿಯನ್ನು ಬಯಲಿಗೆಳೆದು ಜನರ ಮುಂದಿಡಬೇಕು ಎಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ರಾಜ್ಯ ಸರಕಾರ ಈ ಘಟನೆಗಳಿಗೆ ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳನ್ನು ಪತ್ತೆ ಹಚ್ಚಿ, ಎಲ್ಲಾ ಸಾಕ್ಷ್ಯಗಳನ್ನು ಪರಿಣಾಮಕಾರಿಯಾಗಿ ಮಂಡಿಸಿ ಈ ಹೀನ ಅಪರಾಧವೆಸಗಿದವರಿಗೆ ಕಾನೂನಿನ ಪ್ರಕಾರ ಗರಿಷ್ಠ ಹಾಗೂ ಇನ್ನು ಮುಂದೆ ಇಂತಹ ಅಪರಾಧವೆಸಗದಂತೆ ಮಾಡುವ ಶಿಕ್ಷೆ ವಿಧಿಸುವಂತಾಗಬೇಕು. ಈ ಘಟನೆಯಲ್ಲಿ ಸಾವಿಗೀಡಾದ ಕುಟುಂಬಗಳಿಗೆ ಸಹಾಯ ನೀಡುವುದಲ್ಲದೆ ಚಿಕಿತ್ಸೆ ಪಡೆಯುತ್ತಿರುವವರಿಗೆ ಗಮನಾರ್ಹ ಪರಿಹಾರವನ್ನು ಮುಖ್ಯಮಂತ್ರಿಗಳು ಪ್ರಕಟಿಸಬೇಕು ಎಂದೂ ನಾವು ವಿನಂತಿಸಿಕೊಳ್ಳುತ್ತೇವೆ. ಬಾಂಬ್ ಸ್ಫೋಟಗಳ ನಂತರ ನಡೆದ ಸ್ವೇಚ್ಛಾಚಾರದ ಲೂಟಿ ಹಾಗೂ ಅಗ್ನಿ ಸ್ಪರ್ಶದಿಂದ ತಮ್ಮ ಆಸ್ತಿ ಪಾಸ್ತಿಗಳನ್ನು ಕಳ ಕೊಂಡ ಜನಗಳಿಗೂ ಪರಿಹಾರ ಒದಗಿಸ ಬೇಕು ಎಂದು ರಾಜ್ಯ ಸರಕಾರವನ್ನು ನಾವು ವಿನಂತಿಸಿಕೊಳ್ಳುತ್ತೇವೆ.

ಅಲ್ಲದೆ ನಾವು ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತಿದ್ದೇವೆ.

1. ಕೋಮು ದ್ವೇಷವನ್ನು ಉದ್ರೇಕಿಸಿ ಬಾಂಬ್ ಸ್ಫೋಟಗಳ ನಂತರ ಸ್ವೇಚ್ಛಾಚಾರದಿಂದ ವರ್ತಿಸಿ ಹೀನ ಕೃತ್ಯ ನಡೆಸಿದ ಬಿಜೆಪಿ- ಎಐಡಿ ಎಂಕೆ ವ್ಯಕ್ತಿಗಳ ವಿರುದ್ಧ ಬಲವಾದ ಹಾಗೂ ಕಠಿಣ ಕ್ರಮ ಕೈಗೊಳ್ಳಬೇಕು.
2. ಇಂತಹ ಬಾಂಬ್ ಸ್ಫೋಟಗಳು ಮತ್ತೆ ನಡೆಯದಂತೆ ಪರಿಣಾಮಕಾರಿ ತಡೆ ಕ್ರಮಗಳನ್ನು ಕೈಗೊಳ್ಳಬೇಕು.
3. ಸಾರ್ವತ್ರಿಕ ಚುನಾವಣೆಗಳ ನಂತರವೂ ಬಿಜೆಪಿ, ಹಿಂದೂ ಮುನ್ನಾಣಿ ಅಥವಾ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಸಾರ್ವಜನಿಕ ವೇದಿಕೆ ಅಥವಾ ಕರಪತ್ರಗಳ ಮೂಲಕ ಜನಗಳ ನಡುವೆ ಕೋಮುವಾದಿ ಹಾಗೂ ಧಾರ್ಮಿಕ ದ್ವೇಷವನ್ನು ಉದ್ರೇಕಿಸುವುದನ್ನು ಸರಕಾರ ತಡೆಯಲೇಬೇಕು. ಈ ಕಾನೂನನ್ನು ಉಲ್ಲಂಘಿಸುವವರನ್ನು ಬಲವಾಗಿ ಶಿಕ್ಷಿಸಬೇಕು.
4. ನಗರದಲ್ಲಿ ಹಾಗೂ ಉಪನಗರ ಗಳಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲಿಕ್ಕಾಗಿ ಅಂಗಡಿ-ಮುಂಗಟ್ಟುಗಳನ್ನು ತೆರೆಯುವಂತೆ ಒಪ್ಪಿಸಲು ವ್ಯಾಪಾರೀ ಸಮುದಾಯದ ಪ್ರತಿನಿಧಿಗಳನ್ನು ಆಹ್ವಾನಿಸಿ ಅವರೊಡನೆ ಮಾತುಕತೆ ನಡೆಸಲು ಜಿಲ್ಲಾ ಆಡಳಿತ ಕ್ರಮಗಳನ್ನು ಕೈಗೊಳ್ಳಬೇಕು.

ಸಮಾಜದಲ್ಲಿ ಶಾಂತಿ ಹಾಗೂ ಸುವ್ಯವಸ್ಥೆಯನ್ನು ಮತ್ತೆ ಸ್ಥಾಪಿಸಲು ಹಾಗೂ ಜನಗಳ ನಡುವೆ ಸಾಮರಸ್ಯ ಮತ್ತು ಸೌಹಾರ್ದವನ್ನು ನೆಲೆಗೊಳಿಸಲು ಮುಂದೆ ಬರಬೇಕು ಎಂದೂ ಸಿಪಿಐ(ಎಂ) ಪರವಾಗಿ ನಾನು ಎಲ್ಲಾ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವಾದಿ ಪಕ್ಷಗಳಿಗೆ ಹಾಗೂ ಸಾಮಾಜಿಕ ಸಂಘಟನೆಗಳಿಗೆ ಮನವಿ ಮಾಡುತ್ತೇನೆ. ○

ಕೋಲಾರ ಚುನಾವಣಾ ಪ್ರಚಾರ- ಒಂದು ಅನುಭವ

ವಿಸ್ಮಯಕಾರಿ ಸ್ಪಂದನ

— ಎನ್. ಪ್ರಭಾ

ಶ್ರಮಜೀವಿಗಳ "ನೈಜಪಕ್ಷ" ದುಡಿಯುವ ಜನರ ಮಧ್ಯೆ ಹೋದಾಗ ಜನತೆಯ ಸ್ಪಂದನ ಇದ್ದೇ ಇರುತ್ತದೆ. ಇದು ಮಾಲೂರು ತಾಲ್ಲೂಕಿನಾದ್ಯಂತ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡ ಎಲ್ಲ ಸಂಗಾತಿಗಳಿಗಾದ ಪ್ರತ್ಯಕ್ಷ ಅನುಭವ.

ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಮಾಲೂರು ತಾಲ್ಲೂಕಿನಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದ ಎಲ್ಲಾ ಕಾರ್ಯಕರ್ತರಲ್ಲೂ ಜನತೆ ನಿರೀಕ್ಷೆಗೂ ಮೀರಿ ಸ್ಪಂದಿಸುವಾಗ ಎಲ್ಲಿಲ್ಲದ ಉತ್ಸಾಹ ಮತ್ತು ಚೈತನ್ಯ. ತುಳಿತಕ್ಕೊಳಗಾದ ಜನರಿಗಾಗಿ ಅವರ ವಿಮೋಚನೆಗಾಗಿ ದುಡಿಯಲೇಬೇಕು. ಚುನಾವಣಾ ಸಂದರ್ಭದಲ್ಲಿ ಸಿಕ್ಕ ಸಂಪರ್ಕಕ್ಕೆ ಸಂಘಟನಾತ್ಮಕ ರೂಪ ನೀಡಿ ಹೋರಾಟಕ್ಕೆ ಅಣಿನೆರಸಲೇಬೇಕೆಂಬ ಛಲದ ಮಾತು.

ಪ್ರತಿಹಳ್ಳಿಗಳಿಗೆ ವ್ಯಾನ್ ತಲುಪಿದ ಕೂಡಲೆ ಹೆಣ್ಣು ಮಕ್ಕಳು ಮೈಕ್ ಹಿಡಿದು, "ಗಮನಿಸಿ ಇದು ಸಿ.ಪಿ.ಐ.ಎಂ ನ ಚುನಾವಣಾ ಪ್ರಚಾರ" ವೆಂದರೆ ಕುತೂಹಲದಿಂದ ಹೊರಬರುವ ಜನ ಇನ್ನೂ ಮುಂದುವರೆದು ಪಕ್ಷದ ಸಾಧನೆಗಳು ಹಾಗೂ ಇತರೆ ವಿಚಾರಗಳನ್ನು ಕೇಳಿ, ತಿಳಿದು ಮತ ಕೇಳುವಾಗ ವ್ಯಾನ್ ಬಳಿಗೇ ಬಂದು ಸುತ್ತುವರೆಯುವ ಜನತೆ. ಕೂಡಲೇ SFI ನ ಲಕ್ಷ್ಮಿ ಮತ್ತು ತಂಡ ಅದೇ ಜನರ ನೋವು ನಲಿವುಗಳಿಗೆ ಹಾಡಿನ ರೂಪ ನೀಡಿದಾಗ ಅವರ ಮುಖಗಳೇ ಹಾಡಿಗೆ ಕನ್ನಡಿ. ಇಡೀ ತಂಡ ಜನರ ಮಧ್ಯೆ ಸಂಚರಿಸಿ ಕರಪತ್ರ ಹಂಚಿ ಸಿಪಿಐ(ಎಂ) ನ ವಿಚಾರಗಳ ಕಡೆ ಗಮನ ಹರಿಸುವಂತೆ ಮನವಿ ಮಾಡುತ್ತಿರುವಂತೆಯೇ ತಂಡದವರೊಬ್ಬರಿಂದ ಕಿರುಭಾಷಣ ಪ್ರಾರಂಭ. ಎಂಥಾ ವಿಸ್ಮಯ, ಹೆಣ್ಣು ಮಕ್ಕಳೂ ಭಾಷಣ ಮಾಡುತ್ತಾರೆಯೋ, ಬರೀ ಹೆಣ್ಣು ಮಕ್ಕಳನ್ನು ಮನವೊಲಿಸಿ ಓಟುಕೇಳುವ ಅಥವಾ ಭಾಷಣಕ್ಕಾಗಿ ಭಾಷಣವಲ್ಲ, ಎಲ್ಲ ವಿಷಯಗಳ ಬಗ್ಗೆ ವಿವರಿಸುತ್ತಾರಲ್ಲ ಅವರು ಈ ಪಕ್ಷದ ಜನರೇ ಇರಬಹುದೇ. ಕೊನೆಗೂ ಸಂಶಯಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡುತ್ತಾ ಮಾಲೂರಿನ ಸಂತೆಯ ಬಳಿ ಒಬ್ಬರು ಕೇಳಿಯೇ ಬಿಟ್ಟರು. 'ಮೇಡಂ, ನೀವು ಪಕ್ಷದಲ್ಲಿ ಏನಾಗಿದ್ದೀರಿ?' ಕೇಳಿದಾಗ ಆಶ್ಚರ್ಯವೇನೂ ಆಗಲಿಲ್ಲ. ಈ ಹೆಣ್ಣು ಮಕ್ಕಳು ಹಣಕ್ಕಾಗಿ ಕೆಲಸ ಮಾಡುತ್ತಿಲ್ಲ, ಸ್ವಯಂಸ್ಫೂರ್ತಿಯಿಂದ ಪಕ್ಷದಲ್ಲಿ ಕೆಲಸ ಮಾಡುತ್ತಿರುವರೆಂದು ಅವರಿಗಾಗಲೇ ತಿಳಿದಿತ್ತು. ತಾಲ್ಲೂಕಿನ ಜನತೆಗೆ ಹೆಣ್ಣು ಮಕ್ಕಳ ಪ್ರಚಾರ ವೈಖರಿ ವಿಶೇಷ ಮತ್ತು ಪ್ರಥಮ.

ನಮ್ಮ ಮಹಿಳಾ ಮುಖಂಡರೊಬ್ಬರ ಪ್ರಚಾರ ಭಾಷಣವನ್ನು ಕೇಳಿದ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ತಮ್ಮ ಅಂಗಿಯ ಮೇಲಿದ್ದ ಬ್ಯಾಡ್ಜ್ ತೆಗೆದು ಆಗ ತಾನೆ ಪಕ್ಷದ ಬಹಿರಂಗಸಭೆ ಮುಗಿಸಿ ತಂದಿದ್ದ ಹೂವಿನ ಹಾರವನ್ನು ಬೇರೆಯವರಿಗೆ ವರ್ಗಾಯಿಸಿ ಕಾಂಗ್ರೆಸ್ ಪಕ್ಷದ 45 ವರ್ಷಗಳ ಆಳ್ವಿಕೆಯ ನೈಜ ಪರಿಚಯ ಮಾಡಿಕೊಟ್ಟಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

ಮಾಲೂರಿನ ಬಸ್‌ಸ್ಟ್ಯಾಂಡಿನಲ್ಲಿ ಭಾಷಣ ಕೇಳಿದ ವಿದ್ಯಾರ್ಥಿನಿಯೊಬ್ಬರು, ಅವರ ಊರಿಗೆ ನಮ್ಮ ಪ್ರಚಾರದ ವ್ಯಾನ್ ಹೋದಾಗ ಹೇಳಿದ್ದು ಹೀಗೆ "ನಿಮ್ಮ ವಿಚಾರಗಳನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ನಿಮ್ಮ ಪಕ್ಷ ಮಹಿಳೆಯರನ್ನು ಪ್ರೋತ್ಸಾಹಿಸಿ ಬೆಳೆಸುತ್ತದೆ ಎಂದು ನನಗೆ ಅರಿವಾಯಿತು. ನಮ್ಮ ಮನೆಯಲ್ಲಿ ಹಿರಿಯರೆಲ್ಲರೂ ಕಾಂಗ್ರೆಸ್ ಪಕ್ಷ. ಆದರೂ ನಾನು ಮಾತ್ರ ನನ್ನ ಪ್ರಥಮ ಓಟನ್ನು ನಿಮ್ಮ ಪಕ್ಷಕ್ಕೇ ಚಲಾಯಿಸುತ್ತೇನೆ. ಮಾತ್ರವಲ್ಲ ನನ್ನ ಗೆಳತಿಯರಿಗೆಲ್ಲಾ ಹೇಳುತ್ತೇನೆ. ಇಂಥದ್ದೊಂದು ಪಕ್ಷ ಇದೆಯೆಂದು ನನಗೆ ತಿಳಿದೇ ಇರಲಿಲ್ಲ"

ಮಾಲೂರಿನ ಬೀದಿ ಬದಿಯ ಸಭೆಗೆ ಪ್ರತಿಕ್ರಿಯಿಸುತ್ತಾ, ಪ.ಬಂಗಾಳದ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ರೈತರೊಬ್ಬರು ಹೀಗೆಂದರು 'ಇದು ಜ್ಯೋತಿಬಸು ಪಕ್ಷಾನೇನಮ್ಮ, ಸೋಲುವುದೋ, ಗೆಲ್ಲುವುದೋ ಆ ವಿಷಯ ಬೇರೆ, ಆದರೆ ಈ ಬಾರಿ ನನ್ನ ಮತ ಕುಡುಗೋಲು ಸುತ್ತಿಗೆಗೆ'

ಮಾಸ್ತಿಯ ಬಸ್ ನಿಲ್ದಾಣದಲ್ಲಿ ಹೆದರಿಸುವವರಂತೆ ಬಂದ ಐದಾರು ಜನ ವಿದ್ಯಾರ್ಥಿಗಳ ಗುಂಪು ನೋಡುತ್ತಿದ್ದ ಹಾಗೆಯೇ ಹತ್ತಿರ ಬಂದು ಪರಿಚಯ ಮಾಡಿಕೊಂಡು, ಮಾಲೂರಿನ ಬೀದಿಯಲ್ಲಿ ನಿಮ್ಮ ಭಾಷಣ ಕೇಳಿದೆವು, ತುಂಬಾ ಖುಷಿಯಾಯಿತು. ಎಷ್ಟೊಂದು ವಿಚಾರಗಳನ್ನು ತಿಳಿಸಿದಿರಿ. ಇತರೆ ಪಕ್ಷಗಳು ಏನನ್ನೂ ಹೇಳುವುದಿಲ್ಲ. ನಾವು ಫಾರ್ಮಸಿ ಓದಲು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಪ.ಬಂಗಾಳದಲ್ಲಿ ಮೆಡಿಕಲ್ ಓದಲು ಅಷ್ಟು ಕಡಿಮೆ ಶುಲ್ಕವೇ ಮೇಡಂ? ಎಂಥಾ ಅದೃಷ್ಟ ಅವರದು' ಎಂದರು.

ಸಿ.ಪಿ.ಎಂ. ಪಕ್ಷ ಹೆಚ್ಚೆಚ್ಚು ಜನಾಕರ್ಷಿತವಾಗುತ್ತಿದ್ದಂತೆಯೇ ಇತರೆ ಪಕ್ಷಗಳು ಮೈಕ್ ಹಿಡಿದು "ಅವರ ಮಾತುಗಳನ್ನು ಕೇಳಿಸಿಕೊಳ್ಳಬೇಡಿ ಬಂಧುಗಳೇ ಕುಡುಗೋಲು ಸುತ್ತಿಗೆಗೆ ಮಡನೀಡಬೇಡಿ ಬಂಧುಗಳೆ" ಎಂದು ತಮ್ಮ ಪ್ರಚಾರವನ್ನು ಸೀಮಿತಗೊಳಿಸಿಕೊಂಡವು.

ಬಿಜೆಪಿಯ ಮುಖವಾಡವನ್ನು ಸರಿಸುತ್ತಿದ್ದಂತೆಯೆ 'ಅವರ' ಭಾವೀ ಪ್ರಧಾನಿಯ ರಾಷ್ಟ್ರ ಪ್ರೇಮವನ್ನು ಬಯಲು ಮಾಡುತ್ತಿದ್ದಂತೆಯೇ ತೀರಾ ಹತಾಶರಾದ ಬಿ.ಜೆ.ಪಿ.ಯ ಗುಂಪೊಂದು ಪಾನಮತ್ತರಾಗಿ ನಮ್ಮ ಮಹಿಳಾ ಮುಖಂಡರಾದ ವಿಮಲಾರವರ ಮೇಲೆ ಹಲ್ಲೆ ಮಾಡಲು ಮುಂದಾದರು. ಪತ್ರಿಕೆಗಳಲ್ಲಿ ವಿಷಯ ಓದಿದ ಜನ ಕೇಳುತ್ತಿದ್ದಾರೆ - ಈ ಜನ ಅಧಿಕಾರಕ್ಕೆ ಬಂದರೆ ಹೆಣ್ಣು ಮಕ್ಕಳು ಗೌರವದಿಂದ ಬದುಕಲು ಸಾಧ್ಯವೆ? ರೌಡಿ ರಾಜ್ಯ ನಿರ್ಮಾಣವಾದರೂ ಆಶ್ಚರ್ಯವೇನಿಲ್ಲ. ಇವರಿಗೆ ನಾವು ಮತ ಹಾಕಬೇಕೇ?

ನಮ್ಮ ಪ್ರಚಾರಕ್ಕೆ ಅಡ್ಡಿಪಡಿಸಲು ಬರುತ್ತಿದ್ದ ಕಾಂಗ್ರೆಸ್, ಬಿಜೆಪಿಯ ಮೈಕ್‌ಗಳಿಗೆ ಜನರೇ ಉತ್ತರ ನೀಡುತ್ತಿದ್ದರು- 'ನೀವೂ ಹೇಳಿ ಅವರನ್ನೂ ಹೇಳಲು ಬಿಡಿ ಅಡ್ಡಿಪಡಿಸುವುದು ಎಂಥಾ ಸೌಜನ್ಯ'

ಪುಟ 7 ನೋಡಿ

ಲೋಕಸಂಚಾರ

"ಯುರೋ" ಆರಂಭದ ಬಗ್ಗೆ ಸಂಶಯ-ಜರ್ಮನ್ ಕೋರ್ಟಿನ ನಿರ್ಣಯದಿಂದ

"ಯುರೋ" 1999ರ ಜನವರಿ 1ರಂದು ಯುರೋಪಿನ ಸಾಮಾನ್ಯ ನಾಣ್ಯವಾಗಬೇಕು- ಯುರೋಪಿನ ದೈತ್ಯ ಗುತ್ತೇದಾರಿ ಬಹುರಾಷ್ಟ್ರೀಯ ಕಂಪನಿಗಳ ಕನಸಿನ ಯೋಜನೆ ಪ್ರಕಾರ "ಯುರೋ" ಎಂಬುದು ಗುತ್ತೇದಾರಿ ಬಹುರಾಷ್ಟ್ರೀಯ ಕಂಪನಿಗಳ, ಯುರೋಪಿನ ಎಲ್ಲಾ ದೇಶಗಳ ಮೇಲೆ ಹೊರಿಸಿರುವ ಸಾಮಾನ್ಯ ನಾಣ್ಯ. ಅವರ ಯೋಜನೆ ಕಾರ್ಯಗತವಾದರೆ, ಕನಸು ನನಸಾದರೆ ಮುಂದಿನ ವರ್ಷದ ಈ ಹೊತ್ತಿಗೆ ಇಂಗ್ಲೆಂಡಿನ ಪೌಂಡು, ಫ್ರಾನ್ಸ್‌ನ ಫ್ರಾಂಕು, ಇಟಲಿಯ ಲಿರಾ, ಜರ್ಮನಿಯ ಮಾರ್ಕ್ ಬದಲಿಗೆ ಒಂದು ಯುರೋ ಇರುತ್ತದೆ. ಆದರೆ ಯೋಜಿತ ಗಡುವು ಹತ್ತಿರ ಬಂದಂತೆ ಇದು ಆಗುವ ಬಗ್ಗೆ ತೀವ್ರ ಸಂಶಯಗಳು ಏಳುತ್ತಿವೆ.

ತೀವ್ರ ಸಂಶಯ ಆರಂಭವಾಗಿದ್ದು ಕೆಲವು ದಿನಗಳ ಹಿಂದೆ. ಸುಮಾರು ಜರ್ಮನ್ 155 ಜನ ಅರ್ಥಶಾಸ್ತ್ರಜ್ಞರು, ಜರ್ಮನಿ ಮತ್ತು ಯುರೋಪು ಯುರೋಗೆ ತಯಾರಾಗಿಲ್ಲ, ಇನ್ನೂ ಬಹಳ ಸಮಯ ಬೇಕಾಗುತ್ತದೆ. ಯುರೋ ಬಳಸಲು ಬೇಕಾದ, ಯುರೋಪಿನ ಎಲ್ಲಾ ದೇಶಗಳ ನಡುವೆ ಆರ್ಥಿಕಗಳ ಮಿಲನದಿಂದ ಇನ್ನೂ ದೂರ ಇದೆ. ಯೋಜನೆಯಂತೆ 1999 ಜನವರಿ 1 ರಿಂದ "ಯುರೋ" ಮಾತ್ರ ಯುರೋಪಿನ ಎಲ್ಲಾ ದೇಶಗಳಲ್ಲಿ ನಾಣ್ಯವಾಗಿ ಜಾರಿಯಾದರೆ ಜರ್ಮನಿ, ಯುರೋಪು ತೀವ್ರ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟು ಎದುರಿಸಬೇಕಾಗುವುದು ಎಂದು ಎಚ್ಚರಿಸಿದ್ದಾರೆ.

ಇವರಲ್ಲಿ ನಾಲ್ಕು ಅರ್ಥಶಾಸ್ತ್ರಜ್ಞರು ಜರ್ಮನ್ ಫೆಡರಲ್ ಕೋರ್ಟಿಗೆ ಫಿರ್ಯಾದು ಬೇರೆ ಕಳಿಸಿದ್ದಾರೆ. ಜರ್ಮನ್ ಕೋರ್ಟು ಇದನ್ನು ವಿವರವಾದ ವಿಚಾರಣೆಗೆತ್ತಿಕೊಂಡಿದೆ. ಈಗ ಈ ವಿಷಯ ಕೋರ್ಟಿನ ಮುಂದೆ ಇರುವುದರಿಂದ, ಕೋರ್ಟು ಆ ರೀತಿ ರೂಲಿಂಗ್ ಕೊಟ್ಟರೆ, ಕೋರ್ಟು ಅಂತಿಮ ತೀರ್ಪು ಕೊಡುವ ವರೆಗೆ, "ಯುರೋ"ಗಾಗಿ ತಯಾರಿಯನ್ನು ನಿಲ್ಲಿಸಬೇಕಾದಿತೆಂದು ಜರ್ಮನ್ ಸರ್ಕಾರ ಆತಂಕಿತವಾಗಿದೆ. ಈ ಫಿರ್ಯಾದಿಗೆ ಸಮಾಜದ ವಿವಿಧ ಭಾಗಗಳಿಂದ ರಾಜಕೀಯ ಪಕ್ಷಗಳಿಂದ ದೊರೆತಿರುವ ಬೆಂಬಲದಿಂದಲೂ ಸರ್ಕಾರ ಆತಂಕಿತವಾಗಿದೆ.

1999ರಲ್ಲೇ 'ಯುರೋ' ಜಾರಿಗೆ ಫ್ರಾನ್ಸ್, ಇಟಲಿಗಳಲ್ಲೂ ವಿರೋಧ ವ್ಯಕ್ತವಾಗಿದೆ. ಇನ್ನೂ ಕೆಲವು ತಿಂಗಳುಗಳಲ್ಲಿ ಯುರೋಪಿನ ಒಕ್ಕೂಟದ ದೇಶಗಳ ಶೃಂಗಸಭೆ ನಡೆಯಲಿದ್ದು, ಅಲ್ಲಿ ಯುರೋಪಿನ ದೇಶಗಳಲ್ಲಿ ಯಾವುವು ಆರ್ಥಿಕ-ಹಣಕಾಸು ಒಕ್ಕೂಟ ಸೇರುವ ಶರತ್ತುಗಳನ್ನು ಪೂರೈಸಿವೆ ಎಂದು ನಿರ್ಧರಿಸುವ ಯೋಜನೆ ಇದೆ. ಅಲ್ಲಿ "ಯುರೋ" ಜಾರಿ ಮಾಡುವ ವೇಳಾಪಟ್ಟಿಯನ್ನು ಅಖೈರು ಮಾಡಲಾಗುತ್ತದೆ. ಆರ್ಥಿಕ-ಒಕ್ಕೂಟ ಸೇರುವ ಶರತ್ತುಗಳಲ್ಲಿ ಹೆಚ್ಚಿನವು ಯುರೋಪಿನ ದೇಶಗಳಲ್ಲಿ ವಿವಿಧ ಮಟ್ಟಗಳಲ್ಲಿ ಇರುವ ಸಮಾಜಿಕ ಕಲ್ಯಾಣ ಯೋಜನೆ, ಜನ-ಪರ ಸವಲತ್ತುಗಳನ್ನು ಕಡಿತ ಮಾಡುವವು; ಆದ್ದರಿಂದ ಅವಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. 'ಯುರೋ' ಜಾರಿಗೆ ಬಂದರೆ ನಿರುದ್ಯೋಗ ಇನ್ನೂ ಹೆಚ್ಚುವುದು ಮತ್ತು ಆಯಾಯ ದೇಶದ ಸರ್ಕಾರಗಳ ಮೇಲೆ ಇರುವ ಜನ-ಪರ ಕೆಲಸ ಮಾಡುವ ಬಗೆಗಿನ ಒತ್ತಡ ಹೋಗುವುದು. 'ಯುರೋ' ಜನ-ವಿರೋಧಿ ಎಂಬ ಆಶಯ ವ್ಯಾಪಕವಾಗುತ್ತಿರುವುದರಿಂದ, ಅದರ ಜಾರಿ ಬಗ್ಗೆ ಸಂಶಯವೂ ಹೆಚ್ಚಿದೆ. ಆದರೂ ಯುರೋಪಿನ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು 'ಯುರೋ' ವನ್ನು ಜಾರಿಗೆ ತರಲು ಹೆಣಗುತ್ತಿವೆ.

ಅಮೆರಿಕಾದ ಯುದ್ಧಾಕೋರತನ ಸಿಪಿಐ(ಎಂ) ಖಂಡನೆ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ನೀಡಿದ ಭೇಟಿ ಇರಾಕ್‌ನಲ್ಲಿ ತಪಾಸಣೆಯ ಪ್ರಶ್ನೆಯಲ್ಲಿ ಉಂಟಾಗಿರುವ ವಿವಾದವನ್ನು ಮಾತುಕತೆಗಳ ಮೂಲಕ ಇತ್ಯರ್ಥ ಮಾಡುವ ಕೊನೆಯ ಪ್ರಯತ್ನ ನಡೆಸುತ್ತಿದ್ದರೂ, ಇದು ಬಹುಪಾಲು ಭದ್ರತಾ ಸಮಿತಿಯ ಸದಸ್ಯರು ಹಾಗೂ ಅಂತರ್ರಾಷ್ಟ್ರೀಯ ಅಭಿಪ್ರಾಯಕ್ಕೆ ಅನುಗುಣವಾದ ಕ್ರಮವಾಗಿದ್ದರೂ ಅಮೆರಿಕನ್ ಆಡಳಿತ ವಿಶ್ವವ್ಯಾಪಿ ಸಾರ್ವಜನಿಕಾಭಿಪ್ರಾಯವನ್ನು ನಿರ್ಲಕ್ಷಿಸಿ ಇರಾಕ್‌ನ ಮೇಲೆ ಮಿಲಿಟರಿ ಧಾಳಿಗೆ ಸಿದ್ಧವಾಗುತ್ತಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಫೆಬ್ರವರಿ 18 ರಂದು ಪೆಂಟಗಾನ್‌ನಲ್ಲಿ ಅಧ್ಯಕ್ಷ ಕ್ಲಿಂಟನ್‌ರ ಭಾಷಣ ಯುದ್ಧಕೋರತನವನ್ನು ಪ್ರದರ್ಶಿಸಿದೆ ಎಂದು ಅದು ಹೇಳಿದೆ.

ಇರಾಕ್‌ನ ವಿರುದ್ಧ ಅಮೆರಿಕಾದ ಪ್ರ ಹಾಗೂ ಬೆದರಿಕೆಯ ನಿಲುವಿನಿಂದ ಇಡೀ ಭಾರತೀಯ ಜನತೆ ಸಿಟ್ಟಿಗೆದಿದ್ದಾರೆ. ಇರಾಕಿನ ಸಾರ್ವಭೌಮತೆಯ ಮೇಲೆ ಯಾವುದೇ ಧಾಳಿ, ಆಕ್ರಮಣ ನಡೆದರೆ ಭಾರತದ ಜನತೆ ಅವರ ಬೆಂಬಲಕ್ಕೆ ನಿಲ್ಲುತ್ತಾರೆ ಎಂದು ಪೊಲಿಟ್‌ಬ್ಯೂರೋ ಸ್ಪಷ್ಟವಾಗಿ ಹೇಳಿದೆ. ಮಿಲಿಟರಿ ಆಕ್ರಮಣದ ಯೋಜನೆಯನ್ನು ಮುಂದುವರಿಸಿದರೆ ಅಮೆರಿಕನ್ ಆಡಳಿತ ಭಾರತದಲ್ಲಿ ತನಗಿರುವ ಯಾವುದೇ ಸದ್ಭಾವನೆಯನ್ನು ಕಳಕೊಳ್ಳುತ್ತದೆ ಎಂದು ಸಿಪಿಐ(ಎಂ) ಅಮೆರಿಕನ್ ಆಡಳಿತಕ್ಕೆ ಎಚ್ಚರಿಕೆ ನೀಡಿದೆ. ಫ್ರಾನ್ಸ್, ರಶ್ಯಾ, ಚೀನಾದಂತಹ ದೇಶಗಳ ಜತೆಗೂಡಿ ವಿಶ್ವಸಂಸ್ಥೆಯೊಳಗೆ ಹಾಗೂ ಹೊರಗೆ ರಾಜತಾಂತ್ರಿಕ ಪ್ರಯತ್ನವನ್ನು ತೀವ್ರಗೊಳಿಸಿ ಅಮೆರಿಕಾದ ಕಾರ್ಯಾಚರಣೆಯನ್ನು ತಡೆಯಬೇಕು ಎಂದು ಸಿಪಿಐ(ಎಂ) ಭಾರತ ಸರ್ಕಾರಕ್ಕೆ ಕರೆ ನೀಡಿದೆ.

ಅಮೆರಿಕನ್ ಆಡಳಿತದ ನಿಲುವಿನ ವಿರುದ್ಧ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿ ಇರಾಕಿಗೆ ಸೌಹಾರ್ದವನ್ನು ವ್ಯಕ್ತಪಡಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಜನವಿಭಾಗಗಳಿಗೆ ಕರೆ ನೀಡಿದೆ.

ರಶ್ಯದಲ್ಲಿ ಕ್ಷಯ ಸಾಂಕ್ರಾಮಿಕ ಸೋಂಕು

ರಶ್ಯಾದಲ್ಲಿ ಕ್ಷಯ ವ್ಯಾಪಕ ಸೋಂಕು ರೋಗದ ರೂಪ ತಾಳಿದೆ. ವಿಶ್ವ ಸಂಸ್ಥೆಯ ಆರೋಗ್ಯ ಸಂಸ್ಥೆ (ಡಬ್ಲ್ಯೂ.ಹೆಚ್.ಓ.) ಅಧ್ಯಯನದ ಪ್ರಕಾರ.

ವರ್ಷಕ್ಕೆ ರಶ್ಯಾದಲ್ಲಿ ಎರಡೂವರೆ ಲಕ್ಷ ಜನ ಕ್ಷಯದಿಂದ ಸಾಯುತ್ತಿದ್ದಾರೆ. 1991ರಿಂದ ಈಗ ಕ್ಷಯದ ಸೋಂಕು ತಗುಲಿದವರ ಸಂಖ್ಯೆ ಎರಡರಷ್ಟು ಆಗಿದೆ. ಈಗ ಒಂದು ಲಕ್ಷ ಜನರಲ್ಲಿ 68 ಜನಕ್ಕೆ ಕ್ಷಯ ತಗುಲಿದೆ. ಲಕ್ಷ ಜನಕ್ಕೆ 50 ಜನಕ್ಕಿಂತ ಹೆಚ್ಚು ಜನಕ್ಕೆ ಕ್ಷಯ ತಗುಲಿದರೆ, ಡಬ್ಲ್ಯೂ.ಹೆಚ್.ಓ. ಪ್ರಕಾರ ಅದು ಸಾಂಕ್ರಾಮಿಕ ರೋಗವಾಗಿದೆ ಎಂದು ಪರಿಗಣಿಸಲಾಗುತ್ತದೆ. ಜಗತ್ತಿನ ಕ್ಷಯ ಸಾಂಕ್ರಾಮಿಕ ರೋಗ ಎಂದು ಪರಿಗಣಿಸಲಾಗುವ ಹತ್ತು ದೇಶಗಳಲ್ಲಿ ಈಗ ರಶ್ಯಾ ಒಂದಾಗಿದೆ.

ಇದಕ್ಕೆ ಕಾರಣ ನೇರ ಮತ್ತು ಸ್ಪಷ್ಟ. ಕ್ಷಯ ಬಡತನದ ರೋಗ ಎಂದು ಪರಿಗಣಿಸಲಾಗುತ್ತದೆ. 1991ರಲ್ಲಿ ಸೋವಿಯತ್ ಒಕ್ಕೂಟ ಮತ್ತು ಸಮಾಜ ವಾದ ಕುಸಿತದ ನಂತರ ರಶ್ಯಾದಲ್ಲಿ ಬಡತನ ಹೆಚ್ಚಿದೆ. ಜಗತ್ತಿನಲ್ಲೇ ಅತ್ಯಂತ ಉತ್ತಮ ಕೇಂದ್ರೀಯ ಆರೋಗ್ಯ ವ್ಯವಸ್ಥೆ ಕುಸಿದು ಬಿದ್ದಿದೆ. ಅದೇ ಅವಧಿಯಲ್ಲಿ ಏರಿರುವ ಅಪರಾಧಗಳ ಸಂಖ್ಯೆ, ಮತ್ತು ಜೈಲುವಾಸಿಗಳ ಸಂಖ್ಯೆ ಮತ್ತು ಕ್ಷಯ ವ್ಯಾಪಕವಾಗಿ ಹರಡಲು ಒಂದು ಕಾರಣವಾಗಿದೆ ಎಂದು ಅಧ್ಯಯನದಿಂದ ತಿಳಿದಿದೆ. ಜೈಲುಗಳಲ್ಲಿ ಕೆಟ್ಟ ಅನಾರೋಗ್ಯಕರ ಪರಿಸ್ಥಿತಿ, ಜನದಟ್ಟಣೆ ಹೆಚ್ಚಿರುವುದು ಕ್ಷಯಕ್ಕೆ ಕಾರಣವಾಗಿದೆ. ದೇಶದ ಹತ್ತು ಲಕ್ಷಕ್ಕೂ ಕೈದಿಗಳಲ್ಲಿ ಮೂವರಲ್ಲಿ ಒಬ್ಬ ಕ್ಷಯ ರೋಗದಿಂದ ಬಳಲುತ್ತಿದ್ದಾನೆ. ಈ ಕೈದಿಗಳು ಬಿಡುಗಡೆಯಾಗಿ ಬಂದಾಗ, ಅಥವಾ ಬೇರೆ ರೀತಿಯಲ್ಲಿ ಇವರಿಂದಲೇ ಮುಖ್ಯವಾಗಿ ಕ್ಷಯ ಹರಡುತ್ತದೆ ಎನ್ನಲಾಗಿದೆ. ಈಗ ಗೊತ್ತಿರುವ ಔಷದಿಗಳಿಂದ ಗುಣವಾಗದ ಕೆಲವು ಕ್ಷಯದ ರೂಪ ರಶ್ಯಾದಲ್ಲಿ ತಲೆದೋರಿದೆ. ಆರೋಗ್ಯ ಸೇವೆಗಳಿಗೆ, ಕ್ಷಯದ ವಿರುದ್ಧ ಹೋರಾಟಕ್ಕೆ ಹಣದ ಕೊರತೆಯಿಂದ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸುವುದು ಎನ್ನಲಾಗಿದೆ. ಇಡೀ ರಶ್ಯಾಕ್ಕೆ ಬಂಡವಾಳಶಾಹಿಯ ಕ್ಷಯದಿಂದ ಬಿಡುಗಡೆ ಆಗುವವರೆಗೆ ಕ್ಷಯ ಸಾಂಕ್ರಾಮಿಕ ರೋಗ ಹೋಗಲಾಡಿ ಸುವುದು ಕಷ್ಟ. ○

ಕರೆನ್ಸಿ ಬೋರ್ಡ್-ಐ.ಎಂ.ಎಫ್. -ಇಂಡೋನೇಶ್ಯಾದ ನಡುವೆ ಜಟಾಪಟಿ

ಇಂಡೋನೇಶ್ಯಾದ ರೂಪಯ್ಯ ಭದ್ರಗೊಳಿಸಲು ಅಲ್ಲಿನ ಸರ್ಕಾರ ರಚಿಸಬೇಕೆಂದಿರುವ ಕರೆನ್ಸಿ ಬೋರ್ಡು ಬಗ್ಗೆ ಐ.ಎಂ.ಎಫ್. ಸಾರ್ವಜನಿಕವಾಗಿ ವಿರೋಧ ಮತ್ತು ಎಚ್ಚರಿಕೆ ಕೊಡುವ ಮೂಲಕ ಈ ಬಗ್ಗೆ ಜಟಾಪಟಿ ಶುರುವಾಗಿದೆ. ಇಂಡೋನೇಶ್ಯಾದ ಸರ್ಕಾರ ಅಲ್ಲಿನ ನಾಣ್ಯ ರೂಪಯ್ಯಾದ ವಿನಿಮಯ ದರ ಇನ್ನೂ ಕಡಿಮೆಯಾಗದಂತೆ ಈಗಿನ ಬೆಲೆಯನ್ನು ಕಾಪಾಡಲು, ವಿದೇಶಿ ಹಣಕಾಸಿನ ಜೂಜುಗಾರರಿಗೆ ಬಲಿಯಾಗದಂತೆ ತಡೆಯಲು ಕರೆನ್ಸಿ ಬೋರ್ಡ್ ಆರಂಭಿಸಲು ಯೋಜಿಸಿದೆ. ಇದನ್ನು ಐ.ಎಂ.ಎಫ್. ವಿರೋಧಿಸಿ, ಅದರ ಉದ್ದೇಶ ಮೂರನೇ ಜಗತ್ತಿನ ದೇಶಗಳ ಆರ್ಥಿಕ ಸಾರ್ವಭೌಮತ್ವವನ್ನು ಒಂದಲ್ಲ ಒಂದು ನೆಪದಲ್ಲಿ ಇಲ್ಲವಾಗಿಸುವುದು ಎಂದು ಬಹಿರಂಗಪಡಿಸಿದೆ.

ಈ ನಡುವೆ ಪಟ್ಟಣಗಳಲ್ಲಿ ಆಹಾರ ದಂಗೆಗಳು, ಚೀನಿ ವ್ಯಾಪಾರಿಗಳ ಅಂಗಡಿಗಳ ಲೂಟಿ, ಸೈನ್ಯದ ಗೋಳಿಬಾರು ದಿನಚರಿಯಾಗಿ ಬಿಟ್ಟಿದೆ.

ಜಾಗತೀಕರಣದ ವಿರುದ್ಧ ಫ್ರೆಂಚ್ ಕಲಾವಿದರು ಬೀದಿಗೆ

ಫ್ರೆಂಚ್ ಕಲಾವಿದರು-ಫಿಲಂ ತಯಾರಕರು, ಡೈರೆಕ್ಟರುಗಳು, ನಾಟಕ ಕಾರರು, ನಟರು, ಸಂಗೀತಗಾರರು ಜಾಗತೀಕರಣದ ವಿರುದ್ಧ ದನಿ ಎತ್ತಿದ್ದಾರೆ. ಅವರು ವಿಶೇಷವಾಗಿ ಫ್ರೆಂಚ್ ಸರ್ಕಾರ ವಿವಿಧ ಕಲೆಗಳಿಗೆ ಕೊಡುವ ಸಹಾಯಧನ (ಸಬ್ಸಿಡಿ) ರಕ್ಷಿಸಲು ಮುಖ್ಯವಾಗಿ ದನಿ ಎತ್ತಿದ್ದಾರೆ. ಇವರ ಬಂಡವಾಳ ಹೂಡಿಕೆ ಬಗ್ಗೆ ಅಭಿವೃದ್ಧ ದೇಶಗಳ ನಡುವೆ (ಓ.ಇ.ಸಿ.ಡಿ. ಸದಸ್ಯರ ನಡುವೆ) ಬಹುಪಕ್ಷೀಯ ಒಪ್ಪಂದದಲ್ಲಿ ಫ್ರಾನ್ಸು ಭಾಗಿಯಾಗುವುದರ ಬಗ್ಗೆ ವಿರೋಧಿಸುತ್ತಿದ್ದರು. ಈ ಒಪ್ಪಂದದ ಪ್ರಕಾರ ಫ್ರೆಂಚ್ ಸರ್ಕಾರ ಆ ದೇಶದ ನಾಗರಿಕರಿಗೆ ಬಂಡವಾಳ ಹೂಡಿಕೆಗೆ ಕೊಡುವ ಸವಲತ್ತುಗಳನ್ನು ವಿದೇಶಿ ಬಂಡವಾಳಗರಿಗೂ ಕೊಡ ಬೇಕು ಎಂದು ಹೇಳುತ್ತಿದೆ (ಅಮೇರಿಕದ ದೈತ್ಯ ಫಿಲಂ, ಮನೋರಂಜನಾ ಕಂಪನಿ ಗಳು ಫ್ರೆಂಚ್ ಸರ್ಕಾರ ಕಲೆಗೆ ಕೊಡುವ ಸಹಾಯಧನವನ್ನು 'ಬಂಡವಾಳ ಹೂಡಿಕೆ' ಎಂದು ಹೇಳುತ್ತವೆ). ಆದ್ದರಿಂದ ಫ್ರೆಂಚ್ ಸರ್ಕಾರ ಕಲೆಗೆ ಕೊಡುವ ವಿವಿಧ ಸಬ್ಸಿಡಿ ಗಳನ್ನು ನಿಲ್ಲಿಸಬೇಕು ಇಲ್ಲವೆ ವಿದೇಶಿ ಕಂಪನಿಗಳಿಗೂ ಇದೇ ಸಬ್ಸಿಡಿಯನ್ನು ಕೊಡ ಬೇಕು ಎಂದು ಅಮೇರಿಕಾ ವಾದಿಸುತ್ತಿದೆ.

ಇದನ್ನು ವಿರೋಧಿಸಿ ಕಲಾವಿದರು ಬೀದಿಗಿಳಿದಿದ್ದಾರೆ. 'ಮಾನವನ ಕಲಾತ್ಮಕತೆ ಕ್ರಿಯಾತ್ಮಕತೆ'ಯನ್ನು 'ಬಂಡವಾಳ ಹೂಡಿಕೆ'ಗೆ ಸಮೀಕರಿಸುವುದನ್ನು, ಯುರೋಪಿನ ಕಲಾತ್ಮಕ ಸೃಷ್ಟಿ ಮೇಲೆ ಅಮೇರಿಕದ ದಾಳಿಯನ್ನು ಈ ಕಲಾವಿದರು ಖಂಡಿಸಿದ್ದಾರೆ. ಜಾಗತೀಕರಣ ಅಭಿವೃದ್ಧ ಬಂಡವಾಳ ದೇಶದ ಜನಗಳಿಗಾದರೂ ಒಳ್ಳೇದು ಮಾಡುತ್ತದೆ ಎಂದು ಯಾರಿಗಾದರೂ ಭ್ರಮೆ ಇದ್ದರೆ, ಫ್ರೆಂಚ್ ಕಲಾವಿದರು ಅದನ್ನು ಅಲ್ಲಗಳೆದಿದ್ದಾರೆ.

ಪಾಕಿಸ್ತಾನದ ಮೇಲೆ ಭಯೋತ್ಪಾದಕತೆಗೆ ಬೆಂಬಲದ ಆರೋಪ ಕರ್ಘಾಕಿಸ್ತಾನದ ವಿದೇಶಿ ಮಂತ್ರಿಗಳಿಂದ

ಕರ್ಘಾಕಿಸ್ತಾನದ ವಿದೇಶಿ ಮಂತ್ರಿಗಳು ಆ ದೇಶದಲ್ಲಿ ಇಸ್ಲಾಮಿಕ್ ಮೂಲಭೂತವಾದಿಗಳ ಭಯೋತ್ಪಾದಕ ಕಾರ್ಯಗಳಿಗೆ ಬೆಂಬಲ ಕೊಡುತ್ತಿದೆ ಎಂದು ನೇರವಾಗಿ ಪಾಕಿಸ್ತಾನವನ್ನು ಆರೋಪಿಸಿದ್ದಾರೆ. ಈ ಮೂಲಭೂತವಾದಿಗಳಿಗೆ ತರಬೇತಿ, ಇತರ ಸಹಾಯ ಮಾಡುವ ಶಿಬಿರಗಳು ಪಾಕಿಸ್ತಾನದ ಒಳಗೆ ಇರುವ ಬಗ್ಗೆ, ಆ ಶಿಬಿರಗಳ ಬಗ್ಗೆ ವಿವರಗಳನ್ನು ಅವರು ಕೊಟ್ಟಿದ್ದಾರೆ. ಈಗ ಸುಮಾರು 400 ಜನ ಮಾಜಿ ಸೋವಿಯತ್ ಒಕ್ಕೂಟದ ಮಧ್ಯ ಏಶ್ಯಾದ ಗಣರಾಜ್ಯಗಳು ಪಾಕಿಸ್ತಾನದ ಹಲವು ಶಿಬಿರಗಳಲ್ಲಿ ತರಬೇತಿ ಹೊಂದುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನದ ವಿದೇಶಿ ಮಂತ್ರಿ ಕರ್ಘಾಕಿಸ್ತಾನದ ಈ ಆಪಾದನೆಯನ್ನು ನಿರಾಕರಿಸಿದ್ದರೂ, ಅವರು ಕೊಟ್ಟಿರುವ ವಿವಿರಗಳ ಬಗ್ಗೆ ಚಕಾರವೆತ್ತಿಲ್ಲ.

ಅಮೇರಿಕನ್ ಉದ್ಧಟ ಪೈಲಟ್‌ನಿಂದ 20 ಜನರ ಸಾವು

ಇಟಲಿಯ ಟ್ರೆಂಟೊ ಎಂಬ ಹಿಮಪ್ರದೇಶದಲ್ಲಿ ಸ್ಕೀಯಿಂಗ್ ಮಾಡುವ ಪ್ರದೇಶದ ಬಳಿ ಇರುವ ಪಟ್ಟಣದಲ್ಲಿ, ನಾಟೋದ ಮಿಲಿಟರಿ ವಿಮಾನದ ಪೈಲಟ್‌ನ ಉದ್ಧಟತನದಿಂದ 20 ಜನರು ಸಾವನ್ನಪ್ಪಬೇಕಾಗಿದೆ. ಇಲ್ಲಿ ಸ್ಕೀಯಿಂಗ್ ಮಾಡುವ ಹಿಮಪರ್ವತಕ್ಕೆ ಹೋಗಲು ಕೇಬಲ್ ಕಾರು ಇದೆ. 20 ಜನ ಈ ಕೇಬಲ್ ಕಾರ್‌ನಲ್ಲಿ ಪ್ರಯಾಣಿಸುತ್ತಿದ್ದಾಗ, ನಾಟೋದ ಮಿಲಿಟರಿ ವಿಮಾನ ಈ ಕೇಬಲ್‌ಗೆ ಹೊಡೆದು, ಕೇಬಲ್ ಕಾರು ಬಿದ್ದು ನೆಲಕ್ಕೆ ಅಪ್ಪಳಿಸಿತು. ಅದರಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರೂ ಸತ್ತಿದ್ದಾರೆ. ಅಷ್ಟು ಕಡಿಮೆ ಎತ್ತರದಲ್ಲಿ ಮಿಲಿಟರಿ ವಿಮಾನ ಹಾರಿಸುವುದು ವಾಯು ನಿಯಮಗಳಿಗೆ ವಿರುದ್ಧವಾಗಿದೆ. ಈ ನಾಟೋ ವಿಮಾನ ಇಟಲಿಯಲ್ಲಿ ಅವಿಯಾನೋ ಎಂಬ ಅಮೆರಿಕನ್ ಮಿಲಿಟರಿ ನೆಲೆಯಿಂದ ಹಾರಾಟ ನಡೆಸಿತ್ತು. 1976 ರಲ್ಲಿ ಇದೇ ಕಾರಣದಿಂದ ಇಂತಹುದೇ ಅಪಘಾತವಾಗಿತ್ತು.

ಇಟಲಿ ಸರ್ಕಾರ ನಿಯಮಗಳನ್ನು ಉಲ್ಲಂಘಿಸಿದ ಈ ಪೈಲಟ್‌ನನ್ನು ತನಗೆ ಒಪ್ಪಿಸಬೇಕೆಂದು ಒತ್ತಾಯಿಸಿದೆ. ಆದರೆ ಅಮೆರಿಕನ್ ಸರ್ಕಾರ ಆ ಪೈಲಟನ್ನು ಒಪ್ಪಿಸುವುದು ಬಿಟ್ಟು, ಆತನ ಗುರುತು ಹೇಳುವುದಕ್ಕೂ ನಿರಾಕರಿಸಿದೆ. ಟ್ರೆಂಟೋ ಸುತ್ತ ಮಿಲಿಟರಿ ಪೈಲಟ್‌ಗಳು ಇಂತಹ ಕೆಳಗಿನೆತ್ತರದಲ್ಲಿ ಹಾರುವ ಉದ್ಧಟತನ ಆಗಾಗ ಮಾಡುತ್ತಾರೆ. ಇದನ್ನು ನಿಲ್ಲಿಸಬೇಕಾದರೆ ಮಿಲಿಟರಿ ವಿಮಾನಗಳು ನಾಗರಿಕ ಪ್ರದೇಶದಲ್ಲಿ ಹಾರುವ ಬಗ್ಗೆ ನಿಷೇಧ ಹೇರಬೇಕು, ಇಲ್ಲವೆ ಇಟಲಿಯಲ್ಲಿ ನಾಟೋ ಮಿಲಿಟರಿ ನೆಲೆಗಳನ್ನು ಮುಚ್ಚಬೇಕು ಎಂದು ಜನ ಒತ್ತಾಯಿಸುತ್ತಿದ್ದಾರೆ. ಇಟಲಿ ಸಮ್ಮಿಶ್ರ ಸರ್ಕಾರವನ್ನು ಹೊರಗಿನಿಂದ ಬೆಂಬಲಿಸುವ ಇಟಲಿಯ ಪುನರ್‌ಸಂಘಟಿತ ಕಮ್ಯುನಿಸ್ಟ್ ಪಕ್ಷ, ಅವಿಯಾನ್ ನಾಟೋ ಮಿಲಿಟರಿ ನೆಲೆಯನ್ನು ಮುಚ್ಚಬೇಕೆಂದು, ಈ ಪೈಲಟ್‌ನ ವಿಚಾರಣೆ ನಡೆಸಬೇಕೆಂದು ಒತ್ತಾಯಿಸಿದೆ.

ವಿಸ್ಮಯ ಸ್ಪಂದನ

6 ನೇ ಪುಟದಿಂದ

ಕೂಡಲೆ ಅವರು ನಿರುಪಾಯರಾಗಿ ಜಾಗ ಖಾಲಿ ಮಾಡಲೇ ಬೇಕಾಗುತ್ತಿತ್ತು.

ಬಹುಸಂಖ್ಯೆಯ ಮುಸ್ಲಿಮರಿದ್ದ ಹಳ್ಳಿಯೊಂದರಲ್ಲಿ ವಿದ್ಯಾರ್ಥಿ ಮುಖಂಡ ಹಿಂದಿಯಲ್ಲಿ ಪಕ್ಷದ ವಿಚಾರಗಳನ್ನು ಹಂಚಿಕೊಂಡಾಗ ಪಕ್ಕದಲ್ಲೇ ಇದ್ದ ಟೀ ಅಂಗಡಿಯಿಂದ ಇಡೀ ತಂಡಕ್ಕೆ ಉಚಿತವಾಗಿ ಟೀ ವಿತರಣೆ. ಮಾತ್ರವಲ್ಲ, ನೀವು ನಮ್ಮೂರಿಗೆ ಆಗಾಗ ಬರಲೇಬೇಕೆಂಬ ಒತ್ತಾಯಪೂರ್ವಕ ಹಂಬಲ; ಅಲ್ಪಸಂಖ್ಯಾತರ ಮನದಾಳದಲ್ಲೊಂದು ಆಶಾಕಿರಣ; ಅವರ ಮೆಚ್ಚುಗೆಯ ಬೀಳ್ಕೊಡುಗೆ ನಮ್ಮ ತಂಡಕ್ಕೂ ಸ್ಫೂರ್ತಿಯ ಸೆಲೆ.

ನಮ್ಮ ಪ್ರತಿ ಕಾರ್ಯಕರ್ತರಿಗೂ ಈ ರೀತಿಯ ಹಲವು ಅನುಭವಗಳು ಹಂಚಿಕೊಂಡರೆ ನಿಜಕ್ಕೂ ಅಚ್ಚರಿ. ಖಂಡಿತ ಇಷ್ಟೊಂದು ನಿರೀಕ್ಷೆ ನಮಗಿತ್ತೆ? ಜನ ಆದರದಿಂದ ಪಕ್ಷವನ್ನು ಬರಮಾಡಿಕೊಂಡಿದ್ದಾರೆ. ನಮ್ಮ ವಿಚಾರಗಳಿಗೆ ಸ್ಪಂದಿಸಿದ್ದಾರೆ, ಮೆಚ್ಚುಗೆ ಸೂಚಿಸಿದ್ದಾರೆ. ದುಡಿಯುವ ಜನ ಸಿಪಿಐ(ಎಂ) ಪಕ್ಷವನ್ನು ಅಪ್ಪಿಕೊಂಡರೆ ಆಶ್ಚರ್ಯವೇಕೆ? ತಾಯಿ ಮಗುವಿನ ಅಪ್ಪುಗೆ ಪ್ರಶ್ನಾರ್ಹವೆ?

ಬಂಡವಾಳಶಾಹಿ ಪಕ್ಷಗಳಿಗೆ ನುಂಗಲಾರದ ತುತ್ತಾಗಿ ಏನೇ ಹೇಳಿದರೂ ಅಪಪ್ರಚಾರದ ಸುರಿಮಳೆಗೈದರೂ ನಾವು ಸೋನಿಯಾ ಗಾಂಧಿಯವರನ್ನು, ರಾಮಮಂದಿರವನ್ನು ತೋರಿಸಿ ಮತ ಕೇಳುವಂತಹ ರೀತಿಯ ಪ್ರಚಾರ ಮಾಡಿಲ್ಲ. ಜನರ ನೈಜ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದೇವೆ. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಸಾಧನೆಗಳ ಬಗ್ಗೆ ಹೇಳಿದ್ದೇವೆ. ಪಕ್ಷದ ಹೋರಾಟಗಳ ಕಡೆ ಗಮನ ಸೆಳೆದಿದ್ದೇವೆ.

ಪಕ್ಷ ಸೂಚಿಸುವ ಜನಪರ ಪರ್ಯಾಯ ಆರ್ಥಿಕ ನೀತಿಗಳನ್ನು ವಿವರಿಸಿದ್ದೇವೆ. ಕೇವಲ ಚುನಾವಣಾ ರಾಜಕೀಯ ಮಾತನಾಡದೆ, ರೈತ-ಕಾರ್ಮಿಕರ ಐಕ್ಯತೆಯ ಬಗ್ಗೆ ಸಂಘಟಿತ ಹೋರಾಟಗಳ ಬಗ್ಗೆ ಎಚ್ಚರಿಸಿದ್ದೇವೆ.

ಕೋಲಾರ ಜಿಲ್ಲೆಗೆ ಸಿಪಿಎಂ ಹೊಸದೇನಲ್ಲ ಆದರೆ, ಮಾಲೂರು ತಾಲೂಕಿನ ಜನತೆ ಹೊಸಬರಾಗಿ ಬರಮಾಡಿಕೊಂಡು ಪ್ರತಿಕ್ರಿಯೆ ನೀಡಿದ್ದಾರೆ. ನಾವೀಗ ಪ್ರತಿಕ್ರಿಯೆ ನೀಡಿದ ಜನರಿಗಾಗಿ ಕ್ರಿಯೆಯಾಗಬೇಕಿದೆ. ಅವರ ನೋವು-ನಲಿವುಗಳಿಗೆ ಸ್ಪಂದಿಸಬೇಕಿದೆ. ಅವರ ದನಿಗೆ ದನಿಯಾಗಬೇಕಿದೆ.



ಕಮ್ಯುನಿಸ್ಟ್ ಪ್ರಣಾಳಿಕೆ

ಈಗಲೂ ಕ್ರಾಂತಿಯ ಧ್ರುವತಾರೆ

('ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ)

ನೂರಾ ಐವತ್ತು ವರ್ಷಗಳ ಹಿಂದೆ, ಫೆಬ್ರವರಿ 1848 ರಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ವಿಶ್ವಕ್ಕೆ ಕಮ್ಯುನಿಸ್ಟ್ ಪ್ರಣಾಳಿಕೆ ನೀಡಿದರು. ಮಾನವೇತಿಹಾಸದಲ್ಲಿ ಇಷ್ಟೊಂದು ಪ್ರಬಲ ವಾದ ಪ್ರಭಾವ ಬೀರಿದ ಬೇರೊಂದು ದಸ್ತಾವೇಜು ಸಿಗಲಾರದು. ಅದರಲ್ಲಿನ ಸ್ಪಷ್ಟ ಚಿಂತನೆ, ನಿರ್ಮಲ ಕಣ್ಣೋಟ, ಜತೆಗೇ ವಿಮೋಚನಾಕಾರಿ ಹಾಗೂ ಸೃಜನಾತ್ಮಕವೂ ಆಗಿರುವ ಅದರ ಸ್ವರೂಪ ಇಂದಿಗೂ ಕೂಡಾ ವಿಶ್ವಾದ್ಯಂತ ಸಾಮಾಜಿಕ ಮತ್ತು ಆರ್ಥಿಕ ಉದ್ಧಾರಕ್ಕಾಗಿ ಜನಗಳು ನಡೆಸುವ ಹೋರಾಟಗಳ ರೂಪುರೇಷೆಗಳನ್ನು ಕೊಡುವಂತದ್ದು. "ಎಲ್ಲಾ ದೇಶಗಳ ಕಾರ್ಮಿಕರೇ ಒಂದಾಗಿ" ಎಂಬ ಅದರ ಕಹಳೆ ಈಗಲೂ ಮಾನವನಿಂದ ಮಾನವನ, ದೇಶದಿಂದ ದೇಶದ ಶೋಷಣೆಯಿಂದ ಮುಕ್ತವಾದ ಒಂದು ಸಾಮಾಜಿಕ ವ್ಯವಸ್ಥೆಯ ಹುಡುಕಾಟದಲ್ಲಿರುವ ದುಡಿಯುವ ಜನಗಳಲ್ಲಿ ಹೊಸ ಹುರುಪು ತುಂಬುತ್ತಿದೆ.

1871 ರ ಪ್ಯಾರಿಸ್ ಕಮ್ಯೂನಿನಿಂದ ಆರಂಭಿಸಿ ಈ ಪ್ರಣಾಳಿಕೆ ಹಲವು ಯುಗಾಂತರಕಾರೀ ಹೋರಾಟಗಳಿಗೆ ಸ್ಫೂರ್ತಿ ನೀಡಿದೆ. ಅದರ ಪ್ರಭಾವ ಎಷ್ಟೊಂದು ಗಾಢವಾಗಿದೆಯೆಂದರೆ ಸ್ವತಃ ಬಂಡವಾಳಶಾಹಿ ಪದ್ಧತಿಯೇ ಸಮಾಜ ವಾದೀ ಸವಾಲನ್ನು ಎದುರಿಸಲು ತನ್ನನ್ನು ಸ್ವಲ್ಪ ಮಟ್ಟಿಗಾದರೂ ಮಾರ್ಪಡಿಸಿ ಕೊಳ್ಳಬೇಕಾಗಿ ಬಂತು. ನಂತರ ಬಂದ 'ಕಲ್ಯಾಣ ಪ್ರಭುತ್ವ'ದ ಪರಿಕಲ್ಪನೆ ಸಮಾಜವಾದೀ ಸವಾಲಿಗೆ ಬಂಡವಾಳ ಶಾಹೀ ವ್ಯವಸ್ಥೆಯ ಒಂದು ರೀತಿಯ ಸ್ಪಂದನವೆಂದೇ ಹೇಳಬೇಕು.

20ನೇ ಶತಮಾನದ ಬೆಳವಣಿಗೆಗಳು, ನಿರ್ದಿಷ್ಟವಾಗಿ 1917ರ ಮಹಾನ್ ಅಕ್ಟೋಬರ್ ಕ್ರಾಂತಿಯ ನಂತರದ ಬೆಳವಣಿಗೆಗಳು ಈ ಪ್ರಣಾಳಿಕೆ ಎಂದೆಂದೂ ಪ್ರಸ್ತುತ ಎಂಬುದನ್ನು ಸಾರಿಹೇಳುತ್ತಿವೆ. ಈ ಬೆಳವಣಿಗೆಗಳು ಆಧುನಿಕ ನಾಗರಿಕತೆಯ ಮೇಲೆ ಅಚ್ಚಳಿಯದ ಪ್ರಭಾವವನ್ನು ಬಿಟ್ಟು ಹೋಗಿವೆ. ಇದರ ಪ್ರೇರಣೆಯಿಂದ ಬಂದಿರುವ ಕ್ರಾಂತಿಕಾರಿ ಮಾರ್ಪಾಡು ಗಳಿಂದ ಮಾನವ ತನ್ನ ಮುನ್ನಡೆಯಲ್ಲಿ ಗುಣಾತ್ಮಕ ದಾಪುಗಾಲುಗಳನ್ನಿಡಲು ಸಾಧ್ಯವಾಗಿದೆ. ಇದರಿಂದಾಗಿ ಮೂಡಿ ಬಂದಿರುವ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಹಕ್ಕುಗಳನ್ನು ಈಗ ಮಾನವ ನಾಗರೀಕತೆಯ ಅಭಿನ್ನ ಭಾಗಗಳು ಎಂದೇ ಪರಿಗಣಿಸಲಾಗುತ್ತಿದೆ.

ಸೋವಿಯತ್ ಒಕ್ಕೂಟ ಹಾಗೂ ಪೂರ್ವ ಯುರೋಪಿನ ಸಮಾಜವಾದೀ ಪ್ರಭುತ್ವಗಳ ಕುಸಿತದಿಂದ ಇತ್ತೀಚೆಗೆ ವಿಶ್ವ ಸಮಾಜವಾದದ ಶಕ್ತಿಗಳಿಗೆ ಆಗಿರುವ ಸೋಲು ಸಮಾಜವಾದೀ ಆದರ್ಶವನ್ನಾಗಲೀ, ಮಾರ್ಕ್ಸ್‌ವಾದ-ಲೆನಿನ್‌ವಾದದ ಸೃಜನಾತ್ಮಕ ವಿಜ್ಞಾನವನ್ನಾಗಲೀ ನಿರಾಕರಿಸು ವುದಿಲ್ಲ. ಈ ಶತಮಾನದಲ್ಲಿ ಬಂಡವಾಳ ಶಾಹಿ ಮಾನವಕುಲವನ್ನು ಎರಡು ರಾಕ್ಷಸೀ ಜಾಗತಿಕ ಯುದ್ಧಕ್ಕೆ ಈಡುಮಾಡಿ, ಕೋಟ್ಯಾಂತರ ಜನಗಳ ಬಲಿ ತೆಗೆದು ಕೊಳ್ಳುವಂತೆ ಮಾಡಿತು; ತನ್ನ ಅಮಾನವೀಯ 'ಹಿಂಮೆ'ಯನ್ನು ತೋರಿಸಲು ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಿ ವಿಶ್ವವನ್ನು ಒಂದು ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯತ್ತ ತಳ್ಳಿತು. ಇದರಿಂದ ಇಡೀ ವಿಶ್ವ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿ ಬಂತು; ಮಾನವ ಕುಲ ಸಮಾಜವಾದದತ್ತ ಸಾಗದಂತೆ ತಡೆಯಲು ಹಲವಾರು ಯುದ್ಧಗಳನ್ನು ನಡೆಸಿತು, ಸ್ವತಂತ್ರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕಿತು, ಕ್ಷಿಪ್ರ ಕ್ರಾಂತಿಗಳನ್ನು ಸಂಘಟಿಸಿತು, ತನ್ನ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಪ್ರತಿಗಾಮಿ ಮತ್ತು ಸರ್ವಾಧಿಕಾರಿ ಆಡಳಿತ ವನ್ನು ಹೇರಿತು. ಫ್ಯಾಸಿಸ್ಟ್ ಸರ್ವಾಧಿಕಾರ ಈ ಬಂಡವಾಳಶಾಹಿಯ ಅತ್ಯಂತ ರಾಕ್ಷಸೀ ಸ್ವರೂಪವನ್ನು ಪ್ರದರ್ಶಿಸಿತು. ಇತ್ತೀಚೆಗೆ ಕೊಲ್ಲಿಯುದ್ಧದಲ್ಲಿ ತನ್ನ ಪರಮಾಣು ಶಸ್ತ್ರಾಸ್ತ್ರಗಳಲ್ಲಿ ಹೊಚ್ಚಹೊಸ ತಾಂತ್ರಿಕ ಬೆಳವಣಿಗೆಯನ್ನು ಪರೀಕ್ಷಿಸಲು ಕೂಡಾ ಅದು ಹೇಸಲಿಲ್ಲ.

ಇನ್ನೊಂದೆಡೆ ಸಮಾಜವಾದೀ ಕ್ರಾಂತಿ ಗಳು ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟಗಳು ಹಲವು ದೇಶಗಳಲ್ಲಿ ಬಹುಪಾಲು ದುಡಿಯುವ ಜನರು ಶೋಷಣೆ ಹಾಗೂ ದಮನದಿಂದ ಮುಕ್ತವಾದ ಜೀವನ ನಡೆಸಲು ಅವಕಾಶ ಕಲ್ಪಿಸಿ ಮಾನವ ನಾಗರೀಕತೆಯನ್ನು ಶ್ರೀಮಂತಗೊಳಿಸಿವೆ. ಕಮ್ಯುನಿಸ್ಟ್ ಪ್ರಣಾಳಿಕೆಯಿಂದ ಹತ್ತು ಹಲವು ರೀತಿಯಲ್ಲಿ ಪ್ರೇರಿತವಾದ ಈ ಪ್ರಭಾವ ಈಗಲೂ, ಹಲವು ಕ್ಲಿಷ್ಟತೆ, ತಿರುವುಗಳ ನಡುವೆಯೂ ವಿಮೋಚನೆಗಾಗಿ ಮಾನವ ಅಭಿವೃದ್ಧಿಯ ಭವಿಷ್ಯದ ದಾರಿಯನ್ನು ರೂಪಿಸುತ್ತಿದೆ.

ನಾವಿಂದು ಜೀವಿಸುತ್ತಿರುವ ವಿಶ್ವದಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯ ಪ್ರಸ್ತುತತೆ ಇನ್ನಷ್ಟು ಮಹತ್ವಗಳಿಸಿದೆ. ನವ-ಉದಾರವಾದಿ ಆರ್ಥಿಕ ಧೋರಣೆಗಳ ರೂಪದಲ್ಲಿ ಸಾಮ್ರಾಜ್ಯಶಾಹಿ ಹರಿಯಬಿಟ್ಟಿರುವ ಹೊಸ ಧಾಳಿ, ಮೂರನೇ ಜಗತ್ತಿನಲ್ಲಿ ಶೋಷಣೆ ಯನ್ನು ತೀವ್ರಗೊಳಿಸಿ ಅವುಗಳ ಕತ್ತು ಹಿಸುಕಲೆಂದೇ ರೂಪಿಸಿದ ಧೋರಣೆಗಳ ಈ ಹೊಸ ಧಾಳಿ ಬಂಡವಾಳಶಾಹಿಯ ಅನ್ಯಾಯಪೂರ್ಣ ಹಾಗೂ ಅಮಾನವೀಯ ಸ್ವರೂಪವನ್ನು ಕಣ್ಣಿಗೆ ಕಟ್ಟುವಂತೆ ನಮ್ಮ ಮುಂದಿಟ್ಟಿದೆ. ಬಂಡವಾಳಶಾಹಿ ಸೂರೆಕೋರತನವೇ ಅಭಿವೃದ್ಧಿ ಹೊಂದು ತ್ತಿರುವ ದೇಶಗಳಲ್ಲಿ ಕೋಟಿಗಟ್ಟಲೆ ಜನ ಹಸಿವು, ದಾರಿದ್ರ್ಯ, ಕಾಯಿಲೆ, ನಿರಕ್ಷರತೆ ಯಿಂದ ನರಳುತ್ತಿರುವಂತಹ ಭಯಾನಕ ಸನ್ನಿವೇಶಕ್ಕೆ ಕಾರಣ. ಹೆಚ್ಚುತ್ತಿರುವ ನೈತಿಕ ಅಧಃಪತನ, ಮಾದಕ ದ್ರವ್ಯಗಳ ಸೇವನೆ, ಹಿಂಸಾಚಾರ, ಜನಾಂಗೀಯ ಹಾಗೂ ಲೈಂಗಿಕ ಪಕ್ಷಪಾತ ಮಾನವ ಜೀವಿಗಳ ಉತ್ತಮ ಗುಣಗಳನ್ನು ಸತತವಾಗಿ ಕೆಡಿಸುತ್ತಿವೆ. ಬಂಡವಾಳಶಾಹಿ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿ ಮಾನವ ಕುಲದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಸಮರ್ಥ ಎಂದು ಸಾಬೀತಾಗುತ್ತಿದೆ. ವಾಸ್ತವವಾಗಿ ಈ ಎಲ್ಲಾ ಸಮಸ್ಯೆಗಳಿಗೆ ಅದೇ ಕಾರಣ.

ಕಮ್ಯುನಿಸ್ಟ್ ಪ್ರಣಾಳಿಕೆಯ ಮೊದಲ ಪ್ರಕಟಣೆಯ ನಂತರ ಜಗತ್ತಿನಲ್ಲಿ ಹಲವು ಗಮನಾರ್ಹ ಬದಲಾವಣೆಗಳಾಗಿವೆ. ಆದರೂ ಈ ಬದಲಾಗುತ್ತಿರುವ ಚಾರಿತ್ರಿಕ ಸನ್ನಿವೇಶದ ಬಹುಮುಖೀ ವಿದ್ಯಮಾನ ವನ್ನು ಅರಿಯುವಲ್ಲಿ, ವಿಶ್ಲೇಷಿಸುವಲ್ಲಿ ಸಾಧನಗಳನ್ನು ಈಗಲೂ ಈ ಪ್ರಣಾಳಿಕೆ ನಮಗೆ ಒದಗಿಸುತ್ತಿದೆ. ಮಾರ್ಕ್ಸ್‌ವಾದ ಕಾರ್ಯಾಚರಣೆಗೊಂದು ಮಾರ್ಗದರ್ಶಿ ಎಂಬ ಸಂಗತಿಯನ್ನು ಒತ್ತಿ ಹೇಳುವ ಅಂಶ ಇದು. ಒಂದು ಸೃಜನಾತ್ಮಕ ವಿಜ್ಞಾನವಾಗಿ ಮಾರ್ಕ್ಸ್‌ವಾದ ಮಾನವ ಅಭಿವೃದ್ಧಿಯ ಪ್ರವೃತ್ತಿಗಳನ್ನು, ದಿಕ್ಕುಗಳನ್ನು ಗುರುತಿಸುತ್ತದೆ. ಹೀಗೆ ಮಾಡುವಾಗ ಅದು ಒಂದು ಶೋಷಣಾ ಮುಕ್ತ ಸಮಾಜ ರಚನೆಯ ಗುರಿಸಾಧನೆಯಲ್ಲಿ ಜನತೆಯ ಮಧ್ಯ ಪ್ರವೇಶದ ಸಾಧ್ಯತೆಗಳನ್ನು ತೋರಿಸಿ ಕೊಡುತ್ತದೆ. ಮಾರ್ಕ್ಸ್‌ವಾದ ಒಂದು ಸೃಜನಾತ್ಮಕ ವಿಜ್ಞಾನವಾಗಿ ಯಾವುದೇ ಸಮಯದಲ್ಲಿನ ಎಲ್ಲಾ ಸೃಜನಾತ್ಮಕ ಚಿಂತನೆಗಳನ್ನು ತನ್ನದಾಗಿಸಿ ಕೊಂಡು ಕ್ರಾಂತಿಕಾರಿ ಗುರಿಸಾಧನೆಯತ್ತ ಕಾರ್ಯಾ ಚರಣೆಗೆ ಮಾರ್ಗದರ್ಶನ ನೀಡಲು, ಜಗತ್ತನ್ನು ವಿವರಿಸುವುದಷ್ಟೇ ಅಲ್ಲ, ಅದನ್ನು ಬದಲಿಸಲು ಸಾಧ್ಯವಾಗು ವಂತೆ ಅವನ್ನೆಲ್ಲಾ ಒದಗಿಸಿಕೊಡುತ್ತದೆ. ಪ್ರಕಟಣೆಗೊಳ್ಳುವ ಚಾರಿತ್ರಿಕ ಬೆಳವಣಿಗೆ ಗಳಿಗೆ ಅನುಗುಣ ವಾಗಿ ಈ ಸೃಜನಾತ್ಮಕ ವಿಜ್ಞಾನವನ್ನು ಶ್ರೀಮಂತಗೊಳಿಸುವ ಪ್ರಕ್ರಿಯೆಯಲ್ಲಿನ ದೌರ್ಬಲ್ಯಗಳು, ವಿಫಲತೆ ಗಳಿಗೆ ಕಾರಣ ಅದರಲ್ಲಿನ ವೈಜ್ಞಾನಿಕ ವಿಧಾನ ದ ಕೊರತೆ ಕಾರಣವಲ್ಲ, ಈ ತತ್ವವನ್ನು ಅಂಗೀಕರಿಸಿ ದವರಲ್ಲಿನ ವೈಜ್ಞಾನಿಕ ಕಟ್ಟುನಿಟ್ಟಿನ ಕೊರತೆ ಹಾಗೂ ದೌರ್ಬಲ್ಯಗಳೇ ಕಾರಣ.

ಕಮ್ಯುನಿಸ್ಟ್ ಪ್ರಣಾಳಿಕೆಯ 150ನೇ ವಾರ್ಷಿಕೋತ್ಸವದ ಆಚರಣೆಯ ಸಂದರ್ಭ ದಲ್ಲಿ ಈ ದೌರ್ಬಲ್ಯಗಳನ್ನು ಮೀರಿನಿಲ್ಲಲು ಕಾಣಿಕೆ ನೀಡುವುದು ನಮ್ಮೆಲ್ಲರ ಪ್ರಯತ್ನವಾಗಬೇಕು.

ಕಂಪನಿ ಟ್ರಸ್ಟ್‌ಗಳ ದೇಣಿಗೆ: ಸಿಪಿಐ(ಎಂ) ತಿರಸ್ಕಾರ

ಟಾಟಾ ಕಂಪನಿ ಸಮೂಹ ಒಂದು ಚುನಾವಣಾ ಟ್ರಸ್ಟ್ ರಚಿಸಿದ್ದು ಅದರಿಂದ ಸಿಪಿಐ(ಎಂ)ಗೆ ಚುನಾವಣಾ ವೆಚ್ಚಕ್ಕೆಂದು 19 ಲಕ್ಷ ರೂ. ಚೆಕ್ಕೊಂದನ್ನು ಕಳಿಸಿತ್ತು. ಈ ದೇಣಿಗೆಯನ್ನು ಸ್ವೀಕರಿಸಲು ಸಿಪಿಐ(ಎಂ) ನಿರಾಕರಿಸಿದೆ. ಸಿಪಿಐ(ಎಂ) ಕಂಪನಿಗಳಿಂದ ಹಾಗೂ ಕಾರ್ಪೊರೇಟ್ ಟ್ರಸ್ಟ್‌ಗಳಿಂದ ದೇಣಿಗೆಗಳನ್ನು ಸ್ವೀಕರಿಸುವುದಿಲ್ಲ ಎಂದು ಪೊಲಿಟ್‌ಬ್ಯೂರೋ ಹೇಳಿಕೆಯೊಂದರಲ್ಲಿ ತಿಳಿಸಿದೆ. ಬಿರ್ಲಾ ಗುಂಪು ಕೂಡಾ ಇಂತಹ ಒಂದು ಟ್ರಸ್ಟ್ ರಚಿಸಿದೆ.

ಚುನಾವಣಾ ಸುಧಾರಣೆಗಳ ಭಾಗವಾಗಿ ರಾಜಕೀಯ ಪಕ್ಷಗಳಿಗೆ ಕಂಪನಿ ದೇಣಿಗೆಗಳನ್ನು ನಿಷೇಧಿಸಬೇಕೆಂದು ಸಿಪಿಐ(ಎಂ) ಆಗ್ರಹಪಡಿಸುತ್ತಾ ಬಂದಿದೆ. ವ್ಯಾಪಾರ-ವಹಿವಾಟಿಗೆಂದು ರಚಿಸಿದ ಪಬ್ಲಿಕ್ ಲಿಮಿಟೆಡ್ ಕಂಪನಿಗಳು ರಾಜಕೀಯ ಪಕ್ಷಗಳಿಗೆ ಹಣ ನೀಡಲು ಏನೂ ಕಾರಣಗಳಿಲ್ಲ. ಈ ನೀತಿಗನುಗುಣವಾಗಿ ಸಿಪಿಐ(ಎಂ) ಟಾಟಾ ದೇಣಿಗೆಯನ್ನು ನಿರಾಕರಿಸುವ ನಿರ್ಣಯ ತಗೊಂಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಬಿಜೆಪಿ ಯಾರ ಪಕ್ಷ?

ಹಣವಂತರ ಪಕ್ಷ ಎಂದು ಕಳೆದ ಸಂಚಿಕೆಯಲ್ಲಿ ನೋಡಿದ್ದೀರಿ. ಸಾಮಾನ್ಯವಾಗಿ ಅದನ್ನು ಮೇಲ್ಜಾತಿಗಳ ಪಕ್ಷ ಎಂದೂ ಹೇಳಲಾಗುತ್ತದೆ. ಆದರೆ ವಾಸ್ತವತೆ ಇನ್ನೂ ಆಳವಾಗಿದೆ. ಮೇಲ್ಜಾತಿ ಎಂಬ ಪರಿಕಲ್ಪನೆಯ ಹಿಂದಿರುವ ನೋಟವನ್ನು ಅದು ಇನ್ನೂ ಆಳಕ್ಕೆ ಒಯ್ದಿದೆಯೆನ್ನಬೇಕು.

ಈ ಕೆಳಗಿನ ಅಂಕಿ-ಸಂಖ್ಯೆಗಳನ್ನು ನೋಡಿ:

ಮತದಾರರನ್ನು ಅತಿ ಬಡವರು, ಬಡವರು, ಮಧ್ಯಮ ವರ್ಗದವರು ಹಾಗೂ ಶ್ರೀಮಂತರು ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಿದಾಗ ಬಿಜೆಪಿಗೆ ಬೆಂಬಲ ಸಿಗುವ ನೆಲೆಗಟ್ಟು ಯಾವುದು ಎಂಬ ಬಗ್ಗೆ ಕೆಲವು ಅಧ್ಯಯನಗಳು ನಡೆದಿವೆ. 1996 ರ ಲೋಕಸಭಾ ಚುನಾವಣೆಗಳ ನಂತರ ಸಂಗ್ರಹಿಸಿದ ಸರ್ವೆ ಅಂಕಿ-ಅಂಶಗಳ ಆಧಾರದಲ್ಲಿ 'ಅಭಿವೃದ್ಧಿ ಹೊಂದುತ್ತಿರುವ ಸಮಾಜಗಳ ಅಧ್ಯಯನ ಕೇಂದ್ರ' ಇಂತಹ ಒಂದು ಅಧ್ಯಯನ ನಡೆಸಿದೆ. ಈ ಅಂಕಿ-ಅಂಶಗಳು ಬಿಜೆಪಿ ಆಯಾಯ ವಿಭಾಗದಲ್ಲಿ ಪಡೆದ ಬೆಂಬಲದ ಶೇಕಡಾವನ್ನು ಸೂಚಿಸುತ್ತದೆ.

	ಅತಿ ಬಡವರು	ಬಡವರು	ಮಧ್ಯಮ ವರ್ಗಗಳವರು	ಶ್ರೀಮಂತರು
ಮೇಲ್ಜಾತಿಗಳಲ್ಲಿ	29	45	50	57
ಒಬಿಸಿಗಳಲ್ಲಿ	24	26	31	35
ಪರಿಶಿಷ್ಟ ಜಾತಿಗಳಲ್ಲಿ	11	19	25	41
ಪರಿಶಿಷ್ಟ ಬುಡಕಟ್ಟುಗಳಲ್ಲಿ	19	25	25	44
ಮುಸ್ಲಿಮರಲ್ಲಿ	2	3	4	2

ಮೇಲ್ಜಾತಿಗಳಲ್ಲಿ ಶ್ರೀಮಂತರಲ್ಲಿ ಉಳಿದ 43% ಕಾಂಗ್ರೆಸ್ 26% ಬೆಂಬಲ ಪಡೆದಿದೆ. ಅಂದರೆ ಆಳುವ ವರ್ಗಗಳ ಅತ್ಯುತ್ತಮ ಪಾರ್ಟಿಯೆಂದೆನಿಸಿಕೊಂಡಿದ್ದ ಕಾಂಗ್ರೆಸ್ಸಿಗಿಂತ ಬಿಜೆಪಿಗೆ ಜನವಿಭಾಗದಲ್ಲಿ ದ್ವಿಗುಣ ಬೆಂಬಲವಿದೆ.

ಮೇಲಿನ ಕೋಷ್ಟಕದಲ್ಲಿ ಆದಾಯ ಹೆಚ್ಚಿದಂತೆ ಬಿಜೆಪಿಯ ಬಗ್ಗೆ ಒಲವು ಕೂಡಾ ಹೆಚ್ಚುತ್ತಾ ಹೋಗುವುದನ್ನು ಎಲ್ಲಾ ಜನವಿಭಾಗಗಳಲ್ಲೂ ಕಾಣಬಹುದು. ಮುಸ್ಲಿಂ ವಿಭಾಗದಲ್ಲಿ ಬಿಟ್ಟು (ಇದು ಏಕೆ ಎಂಬುದು ಕೂಡ ಸ್ಪಷ್ಟ). ಹಾಗಿದ್ದರೆ ಬಿಜೆಪಿಯ ವರ್ಗನೆಲೆ ಯಾವುದು? ಅದರ ವರ್ಗ ಸ್ವರೂಪವೇನು?

(ಕೃಪೆ: ಸಹಮತ್)

ಕಲಾವಿದನ ಮೇಲೆ ಹಿಂದೂ ಮತಾಂಧನ ಹಲ್ಲೆ

ಹಿಂದೂ ಕೋಮುವಾದಿ ಸಂಘಟನೆ ವಿಶ್ವಹಿಂದೂ ಪರಿಷತ್ತಿನ (ವಿಹೆಚ್‌ಪಿ) ಫ್ಯಾಸಿಸ್ಟ್ ಪ್ರವೃತ್ತಿ ಮತ್ತೊಮ್ಮೆ ಬಯಲಿಗೆ ಬಂದಿದೆ. ಈ ಸಂಘಟನೆಯ ಕಾರ್ಯ ಕರ್ತರು ಖ್ಯಾತ ಕಲಾವಿದರೊಬ್ಬರ ಮೇಲೆ ಹಲ್ಲೆ ನಡೆಸಿರುವ ಪ್ರಕರಣ ರಾಜಧಾನಿ ನವದೆಹಲಿಯಿಂದ ವರದಿಯಾಗಿದೆ.

ಖ್ಯಾತ ಕಲಾವಿದ ಎಂ.ಎಫ್. ಹುಸೇನ್ ಅವರ ಕಲಾಪ್ರದರ್ಶನ ನಡೆಯುತ್ತಿದ್ದ ಸ್ಥಳವೊಂದಕ್ಕೆ ಫೆಬ್ರವರಿ 23 ರಂದು ತೆರಳಿದ ವಿ.ಹೆಚ್.ಪಿ. ಕಾರ್ಯಕರ್ತರು ಅಲ್ಲಿದ್ದ ಇನ್ನೊಬ್ಬ ಖ್ಯಾತ ಕಲಾವಿದ ಜತೀನ್ ದಾಸ್‌ರನ್ನು ಅಟ್ಟಿಸಿಕೊಂಡು ಹೋಗಿ ಹೊಡೆದರು.

ಪ್ರದರ್ಶನದಲ್ಲಿ ಇಡಲಾಗಿದ್ದ ಹುಸೇನರು ಚಿತ್ರಿಸಿದ ಸೀತೆಯನ್ನು ಒಯ್ಯುವ ಹನುಮಂತನ ಚಿತ್ರವನ್ನು ವಿರೋಧಿಸಿ ವಿಹೆಚ್‌ಪಿಯವರು ಪ್ರದರ್ಶನ ನಡೆಸು ತ್ತಿದ್ದರು. ಅವರು ಅಶ್ಲೀಲವಾದ ಘೋಷಣೆಗಳನ್ನು ಕೂಗುತ್ತಿದ್ದರು. ಅಶ್ಲೀಲ ಘೋಷಣೆ ಕೂಗಬಾರದೆಂದು ಮನವಿಮಾಡಿದ ಜತೀನ್ ದಾಸ್‌ರನ್ನು ಅಟ್ಟಿಸಿಕೊಂಡು ಹೋಗಿ ಅವರ ಮೇಲೆ ಹಲ್ಲೆ ನಡೆಸಿದರು. ಇನ್ನೂ ಅನೇಕ ಕಲಾವಿದರು ಸ್ಥಳದಲ್ಲಿ ಇದ್ದರು.

ಈ ಪ್ರಕರಣದ ಇನ್ನೂ ಒಂದು ವಿಚಿತ್ರವೆಂದರೆ ಮಹಿಳೆಯರು ಕಲಾವಿದನ ಗಡ್ಡ ಹಿಡಿದು ಎಳೆದದ್ದು. ಇಬ್ಬರು ಮಹಿಳಾ ಕಾರ್ಯಕರ್ತರು ಗಡ್ಡ ಹಿಡಿದು ಎಳೆದರು, ಇತರರು ದಾಸ್ ಮೇಲೆ ಆಕ್ರಮಣ ಮಾಡಿದರು.

ಭಾರತೀಯ ಜನತಾ ಪಕ್ಷದ ಮಾಜಿ ಸಂಸತ್ ಸದಸ್ಯ ಬಿ.ಎಲ್.ಶರ್ಮಾ 'ಪ್ರೇಮ್' ವಿಹೆಚ್‌ಪಿ ಪ್ರದರ್ಶನಕಾರರ ನೇತೃತ್ವ ವಹಿಸಿದ್ದರು. ಜತೀನ್‌ದಾಸ್ ಅಲ್ಲದೆ ಇನ್ನೂ ಇತರ ಕೆಲವರ ಮೇಲೆ ಪ್ರದರ್ಶನ ಕಾರರು ಹಲ್ಲೆ ಮಾಡಿದರು ಎಂದು 'ಪ್ರೇಮ್' ಹೇಳಿದ್ದಾರೆ. ಕೆಲವರು ಪ್ರದರ್ಶನಕಾರರನ್ನು ಅವಮಾನ ಗೊಳಿಸಿದ್ದರಿಂದ ಹಲ್ಲೆ ಮಾಡಲಾಯಿತು ಎಂಬುದು ಈ ಮಾಜಿ ಎಂಪಿಯ ಸಮರ್ಥನೆ!

ಉತ್ತರ ಪ್ರದೇಶದ ಪ್ರಹಸನದ ಬಗ್ಗೆ 'ದಿ ಹಿಂದು'ನಲ್ಲಿ ಕೇಶವ್‌ರವರ ವ್ಯಂಗ್ಯ



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27